ಸಂಪುಟ 15
ಸಂಚಿಕೆ 49

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿಸೆಂಬರ್ 12, 1993
ರೂ. 2.00

ಕೋಮುವಾದಿ ರಾಜಕೀಯಕ್ಕೆ ಸ್ಪಷ್ಟ ತಿರಸ್ಕಾರ

ಬಿಜೆಪಿಗೆ ಭಾರೀ ಮುಖಭಂಗ

ಉತ್ತರ ಭಾರತದ ನಾಲ್ಕು ಹಿಂದಿ ಭಾಷಿಕ ರಾಜ್ಯಗಳ ಜನಸಾಮಾನ್ಯರು ತಾವು ದೇಶದ ಜಾತ್ಯಾತೀತ ಪರಂಪರೆಗೆ ಘಾತಕ ಬಗೆಯುವ ಆದೇಶವನ್ನಾಗಲೀ, ಅನುಮತಿಯನ್ನಾಗಲೀ ಯಾರಿಗೂ ನೀಡಿರಲಿಲ್ಲ ಎಂದು ಘಂಟಾಘೋಷವಾಗಿ ಸಾರಿದ್ದಾರೆ - ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಅನುಮತಿ ಬಿಜೆಪಿಗೆ ಖಂಡಿತವಾಗಿಯೂ ನೀಡಿರಲಿಲ್ಲ ಎಂದು ಬಿಜೆಪಿ ಮಂದಿ ಮೈ ಮುಟ್ಟಿ ನೋಡಿಕೊಳ್ಳುವಂತೆ ಸಾರಿದ್ದಾರೆ. ಬಿಜೆಪಿ ಮಂದಿಯೇನು, ಬಾಬ್ರಿ ಮಸೀದಿಯ ಗುಮ್ಮಟಗಳ ಮೇಲೆ, ಆ ಮೂಲಕ ನಮ್ಮ ದೇಶದ ಜಾತ್ಯಾತೀತ ಪರಂಪರೆಯ ಮೇಲೇರಿ ಕೋಮುವಾದಿಗಳು ಗೂಂಡಾಗಿರಿ ನಡೆಸುತ್ತಿದ್ದಾಗ, ಆ ಮೇಲೂ ಕೂಡಾ ತೆಪ್ಪಗೆ ನಿಂತು ನೋಡುತ್ತಿದ್ದ ಕಾಂಗ್ರೆ ಮಂದಿಗೂ ಮೈ ಮುಟ್ಟಿ ನೋಡಿಕೊಳ್ಳುವಂತಹ ಏಟು ನೀಡಿದ್ದಾರೆ. ಉತ್ತರ ಪ್ರದೇಶದಲ್ಲಿ ಅವರ ಸೀಟುಗಳಲ್ಲಿ ಮತ್ತಷ್ಟು ಕಡಿತ ಮಾಡಿದ್ದಾರಷ್ಟೇ ಅಲ್ಲ, ಅರ್ಧದಷ್ಟು ಸ್ಥಾನಗಳಲ್ಲಿ ಅವರ ಠೇವಣಿಯೂ ಉಳಿಯದಂತೆ ಮಾಡಿದ್ದಾರೆ. ಈ ವಿಶಾಲ ಹಿಂದೀ ಭಾಷಿಕ ಪ್ರದೇಶದಿಂದ ದಿಲ್ಲಿ ಸಿಂಹಾಸನದತ್ತ ನೆಗೆಯುವ ಕೋಮುವಾದಿಗಳ ಕನಸು ದೇಶಕ್ಕೆ ಅನಾಹುತಕಾರಿ ಎನ್ನುತ್ತಾ ಅದನ್ನು ನುಚ್ಚು ನೂರು ಮಾಡಿದ್ದಾರೆ. ಬಿಜೆಪಿ, ಕಾಂಗ್ರೆ ಮಂದಿಗಳು ನೀರಿನಂತೆ ಖರ್ಚು ಮಾಡಿದ ಲಕ್ಷಗಟ್ಟಲೆ ರೂಪಾಯಿಗಳು, ರಂಗು ರಂಗಿನ ಪೋಸ್ಟರುಗಳು, ವಿಡಿಯೋ ರಥಗಳು ಯಾವುದಕ್ಕೂ ಮಾರು ಹೋಗದೆ ತಮ್ಮ ದುಗುಡವನ್ನು ಸ್ಪಷ್ಟಪಡಿಸಿದ್ದಾರೆ.

"ಎಲ್ಲೆಲ್ಲಿ ಎಡ-ಜಾತ್ಯಾತೀತ ಅಭ್ಯರ್ಥಿಗಳು ಬಿಜೆಪಿಯನ್ನು ಸೋಲಿಸಲು ಶಕ್ತರಾಗಿದ್ದರೋ ಅಲ್ಲೆಲ್ಲಾ ಜನ ಆ ಅಭ್ಯರ್ಥಿಗಳಿಗೆ ಮತ ನೀಡಲಿದ್ದಾರೆ. ಇತರೆಡೆಗಳಲ್ಲಿ ಕಾಂಗ್ರೆಸ್(ಐ) ಬಗ್ಗೆ ವಿಶ್ವಾಸವಿಲ್ಲದಿದ್ದರೂ ಆ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡುತ್ತಾರೆ........ ಬಿಜೆಪಿಯ ಟೊಳ್ಳು ಘೋಷಣೆಗಳು ಮಣ್ಣು ಮುಕ್ಕಲಿವೆ.... ಬಿಜೆಪಿಗಂತೂ ದೊಡ್ಡ ಭ್ರಮ ನಿರಸನ ಕಾದಿದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರು ಎರಡು ವಾರಗಳ ಹಿಂದೆಯೇ ನೀಡಿದ ಅಭಿಪ್ರಾಯ(ನೋಡಿ ಐಕ್ಯರಂಗ - ದಿ. 28-11-93) ಭವಿಷ್ಯವಾಣಿಯಂತಾಗಿ ಬಿಟ್ಟಿದೆ.

ಡಿಸೆಂಬರ್ 6, 1992ರ ಘಟನೆಯ ಬಗ್ಗೆ "ಖೋಟಾ" ಜಾತ್ಯಾತೀತವಾದಿಗಳು, ನ್ಯಾಯಾಲಯಗಳು, ಪತ್ರಿಕೆಗಳು, ಸಿಬಿಐ, ಸರಕಾರ ಏನೇ ಹೇಳಲಿ, ಇದರ ಬಗ್ಗೆ ನಿಜವಾದ ತೀರ್ಪನ್ನು, ಆ ಘಟನೆಯನ್ನು ನೆವ ಮಾಡಿಕೊಂಡು ಬಿಜೆಪಿ ಸರಕಾರಗಳನ್ನು ವಜಾ ಮಾಡಿದವರಿಗೆ ಸರಿಯಾದ ಪಾಠವನ್ನು ಈ ನಾಲ್ಕು ರಾಜ್ಯಗಳ ಮತದಾರರು, ಮುಖ್ಯವಾಗಿ ಉತ್ತರ ಪ್ರದೇಶದ ಮತದಾರರು ನೀಡುತ್ತಾರೆ, ನಮಗೆ 300 ಸೀಟುಗಳು ಖಾತ್ರಿ, ಕಳೆದ ಬಾರಿ ಇದ್ದುದಕ್ಕಿಂತ(221) ಒಂದು ಸ್ಥಾನ ಕಮ್ಮಿಯಾದರೂ ಅದು ಡಿಸೆಂಬರ್ 6ರ ಘಟನೆಯ ವಿರುದ್ಧ ತೀರ್ಪು ಎಂದು ಭಾವಿಸುತ್ತೇವೆ ಎಂದೆಲ್ಲಾ ಸವಾಲು ಹಾಕಿದ್ದ "ಅಯೋಧ್ಯಾ ಕಾಂಡ"ದ ಹೀರೋ ಕಲ್ಯಾಣಸಿಂಗ್‌ರಾದಿಯಾಗಿ ಎಲ್ಲಾ ಬಿಜೆಪಿ ಘಟಾನುಘಟಿಗಳು ತಮ್ಮ "ಭದ್ರ" ಸೀಟುಗಳು ಸ.ಪ.-ಬ.ಸ.ಪ ಪಾಲಾಗುತ್ತಿದ್ದರೇನು, ಉತ್ತರ ಪ್ರದೇಶದಲ್ಲಿ ಬಹುಮತ ತಮಗೇ, ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿ ಮತದಾನ ಮಾಡಿದರೇನು, ಅದಕ್ಕೆ ಪ್ರತಿಕ್ರಿಯೆಯಾಗಿ 'ಹಿಂದುತ್ವ'ದ ಪರವಾಗಿಯೇ ಇನ್ನೂ ಹೆಚ್ಚು ಜನ ಮತಗಟ್ಟೆಗಳಿಗೆ ಬಂದಿದ್ದಾರೆ, ಹಿಮಾಚಲ ಪ್ರದೇಶದಂತಹ 'ಚಿಕ್ಕ' ರಾಜ್ಯ ಹೋದರೇನು, ದೇಶದ ರಾಜಧಾನಿ ನಮ್ಮ ಕೈವಶವಾಗಿದೆ ಎಂದು ನವಂಬರ್ 28ರಂದು ಕೂಡಾ ತಮ್ಮ 'ಹಿಂದುತ್ವ'ದ 'ಅಂತಿಮ ವಿಜಯ'ದ ಬಗ್ಗೆ ಆಸೆಯಿರಿಸಿಕೊಂಡಿದ್ದ ಬಿಜೆಪಿ ಮುಖಂಡರು ಕೊನೆಗೂ ಉತ್ತರ ಪ್ರದೇಶದಲ್ಲಿ ತಮ್ಮ ಆಟ ಸಾಗಲಿಲ್ಲ ಎಂಬುದನ್ನು ಅರಿಯಬೇಕಾಯಿತು. ಪಾಠವನ್ನು ತಾವೇ ಕಲಿಯಬೇಕಾಯಿತು ಎಂದು ಅರಿಯುವಂತಾಯಿತು. "ಬಿಜೆಪಿಗಂತೂ ಭ್ರಮ-ನಿರಸನ ಕಾದಿದೆ. ರಾಮ ದೇವಸ್ಥಾನದ ತಂತ್ರ ಫಲಿಸಿಲ್ಲ. ಉತ್ತರ ಪ್ರದೇಶದಲ್ಲಿ ಅದು ಗೆಲ್ಲುವುದಿಲ್ಲ. ಅದರ ಶಕ್ತಿ ಗಮನಾರ್ಹವಾಗಿ ಕಮ್ಮಿಯಾಗಲಿದೆ ಎಂದು ಯಾರಾದರೂ ಖಂಡಿತವಾಗಿಯೂ ಹೇಳಬಹುದು" ಎಂದು ಸುರ್ಜಿತ್‌ರವರು ಮೇಲೆ ಪ್ರಸ್ತಾಪಿಸಿದ ಲೇಖನದಲ್ಲೇ ಹೇಳಿದ ಇನ್ನೊಂದು ಭವಿಷ್ಯವಾಣಿ ಇಲ್ಲಿ ನೆನಪಾಗುತ್ತದೆಯಲ್ಲವೇ?(ಚುನಾವಣಾ ಫಲಿತಾಂಶಗಳ ಸ್ಥೂಲ ನೋಟ, ಹಿಂದಿನ ವಿಧಾನಸಭಾ ಚುನಾವಣೆಗಳೊಂದಿಗೆ ಹೋಲಿಕೆಗೆ ಪುಟ 8 ನೋಡಿ) ಇದು ಕೇವಲ 'ಭವಿಷ್ಯವಾಣಿ'ಯಲ್ಲ, ನಮ್ಮ ದೇಶದ ಪರಂಪರೆಯ ನಿಜವಾದ ಜ್ಞಾನದಿಂದ ಮೂಡಿಬಂದ ಮಾತು. ತಮ್ಮದೇ "ನೈಜ" ರಾಷ್ಟ್ರೀಯತೆ, ತಾವು ಹೇಳಿದ್ದೇ ನೈಜ ಜಾತ್ಯಾತೀತತೆ, ಉಳಿದವರದ್ದೆಲ್ಲಾ ಖೋಟಾ ಜಾತ್ಯಾತೀತತೆ, ಉಳಿದವರದ್ದೆಲ್ಲಾ 'ವೋಟ್ ಬ್ಯಾಂಕ್' ರಾಜಕೀಯ ಎಂಬ ಭ್ರಮೆಯನ್ನು ತಾವೇ ನಂಬಿದ್ದ ಬಿಜೆಪಿಯವರು ಕಾಣಲಾರದ ಸತ್ಯ ಅದು. ತಮ್ಮ "ಬಹುಸಂಖ್ಯಾತ ವೋಟ್ ಬ್ಯಾಂಕ್ ರಾಜಕೀಯ"ವೂ ಬಹುಕಾಲ ಬಾಳದು ಎಂಬುದನ್ನು ಅವರು ಇನ್ನೂ ಅರಿತಂತಂತಿಲ್ಲ. ಉತ್ತರ ಪ್ರದೇಶದಲ್ಲಿ, ರಾಜಸ್ತಾನದಲ್ಲೂ ಬಹುಮತ ಪಡೆಯಲು ಅಸಮರ್ಥರಾದರೂ ಮಧ್ಯಪ್ರದೇಶದಲ್ಲಾದರೂ ತಮ್ಮ ಮಾನವುಳಿದೀತೆಂದುಕೊಂಡು ಡಿಸೆಂಬರ್ 1 ರಂದು ಕೂಡಾ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯವರು "ರಾಮಮಂದಿರದಿಂದ ರಾಮರಾಜ್ಯದತ್ತ ನಾವೀಗ ಸಾಗಬೇಕಾಗಿದೆ" ಎಂದು ಸ್ವವಿಮರ್ಶೆಯ ಸೋಗಿನಲ್ಲಿ ಹೇಳುತ್ತಿದ್ದಂತೆಯೇ "ರಾಮ ರಾಜ್ಯ"ದ ಮಧ್ಯಪ್ರದೇಶವೂ ಅವರ ಕೈ ತಪ್ಪಿ ಹೋಗಲಾರಂಭಿಸಿತ್ತು. ಅವರ ಈ ಭವ್ಯ ರಾಜಕೀಯ ತಂತ್ರ ನೆಲಕಚ್ಚಿತ್ತು.

ಈ ಚುನಾವಣಾ ಹೋರಾಟದಲ್ಲಿ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ಫಲಿತಾಂಶಗಳು ಬಹುಮಹತ್ವದ್ದಾಗಿದ್ದವು. ಉತ್ತರಪ್ರದೇಶ ಏಕೆಂದರೆ ಅದು ಜನಬೆಂಬಲ ಕಳಕೊಳ್ಳುತ್ತಿರುವ ಕಾಂಗ್ರೆಸ್ಸಿಗೆ ತಾನೇ ಏಕೈಕ ಪರ್ಯಾಯವೆನ್ನುತ್ತಿದ್ದ ಪಕ್ಷದ ಮುಖ್ಯ ರಂಗಸ್ಥಳವಾಗಿತ್ತು; ಅದರ ದುಷ್ಟ ಚಟುವಟಿಕೆಗಳ ಕೇಂದ್ರವಾಗಿತ್ತು; ಮಧ್ಯಪ್ರದೇಶ ಏಕೆಂದರೆ ದಶಕಗಳಿಂದ "ಸಂಘ ಪರಿವಾರ"ದ ಚಟುವಟಿಕೆಗಳ ಕೇಂದ್ರವಷ್ಟೇ ಅಲ್ಲ ಬಾಬ್ರಿ ಮಸೀದಿ ಧ್ವಂಸ ಮಾಡಿದ್ದ ಕರಸೇವಕರಿಗೆ ತರಬೇತಿ ನೀಡಿದ್ದ ಕೇಂದ್ರ ಅದಾಗಿತ್ತು. ಇವೆರಡರಲ್ಲೂ ಬಿಜೆಪಿ ಸರಕಾರ ರಚಿಸಲು ನಾಲಾಯಕ್ಕು ಎಂದು ಹೇಳಿದ ಜನಸಾಮಾನ್ಯರು "ರಾಮಮಂದಿರದಿಂದ ರಾಮರಾಜ್ಯದತ್ತ" ತಮ್ಮ ಮಟ್ಟಿಗಂತೂ ಕೇವಲ ಬೊಗಳೆ ಎಂದು ಸಾರಿದರು. ಸುರ್ಜಿತ್‌ರವರು ತಮ್ಮ ಲೇಖನದಲ್ಲಿ ಹೇಳಿರುವಂತೆ "ಅಲ್ಪ ಸಂಖ್ಯಾತರು ಕೇವಲ 4.ಶೇ. ಇರುವ ಈ ರಾಜ್ಯ ಮಧ್ಯ-ಪ್ರದೇಶ. ಆದರೂ ಅಲ್ಲಿ ಬಹುಮಂದಿ ಹರಿ-ಜನರು, ಆದಿವಾಸಿಗಳು, ಹಿಂದುಳಿದ ವರ್ಗ-ಗಳವರು; ಈ ಜನಗಳಿಗೆ ಬಿಜೆಪಿ ಆಳ್ವಿಕೆ ಏನೂ ಮಾಡಿಲ್ಲವಷ್ಟೇ ಅಲ್ಲ, ಅವರ ಹಿತಾ-ಸಕ್ತಿಗಳಿಗೆ ಮಾರಕವಾಗುವ ಆಡಳಿತ ನಡೆ-ಸಿತು. ಇದರರ್ಥ ಕಾಂಗ್ರೆಸ್(ಐ) ತನ್ನ ಜನಬೆಂಬಲ ಹೆಚ್ಚಿಸಿಕೊಂಡಿದೆಯೆಂದಲ್ಲ." ಬ್ರಿಟಿಷರ ವಿಶ್ವಾಸಾರ್ಹ ಏಜೆಂಟರುಗಳ ವಿರುದ್ಧ ಹೋರಾಡಿದ ಜನ ಬಿಜೆಪಿ ಬಯಸುವ ಕೋಮು ವಿಭಜನೆಯನ್ನು ಒಪ್ಪಿಕೊಳ್ಳಲಿಲ್ಲ. ಎಡ ಜಾತ್ಯಾತೀತ ಶಕ್ತಿಗಳು ದುರ್ಬಲವಾಗಿರುವ ಈ ರಾಜ್ಯದಲ್ಲೂ ಸಿಪಿಐ(ಎಂ)

ಪುಟ 7ಕ್ಕೆ..........




ಒಂದಾದ ಮೇಲೊಂದರಂತೆ ವಿವಾದಿತ ಕಟ್ಟಡದ ಗುಮ್ಮಟಗಳಲ್ಲಿ ಬಿರುಕುಗಳು ಕಾಣಿಸಿಕೊಳ್ಳುತ್ತಿದ್ದಂತೆ ಶ್ರೀಯುತ ಅಡ್ವಾಣಿ ಕಣ್ಣೀರು ಸುರಿಸಿದರು.

ಹೌರಾದಲ್ಲಿ ಸತತ ಮೂರನೇ ಬಾರಿಗೆ ಎಡರಂಗ ಜಯಭೇರಿ

ಪಶ್ಚಿಮ ಬಂಗಾಳದ ಎರಡನೇ ಅತೀ ದೊಡ್ಡ ನಗರ, ರಾಜ್ಯದ ಕೈಗಾರಿಕಾ ಕೇಂದ್ರ ಹೌರಾದ ನಗರಸಭಾ ಚುನಾವಣೆಗಳಲ್ಲಿ ಎಡರಂಗ ಸತತವಾಗಿ ಮೂರನೇ ಬಾರಿಗೆ ಭಾರೀ ಜಯಗಳಿಸಿದೆ. 50 ಸ್ಥಾನಗಳ ಪೈಕಿ 49ರಲ್ಲಿ ಫಲಿತಾಂಶ ಹೊರಬಿದ್ದಿದ್ದು ಅದರಲ್ಲಿ ಎಡರಂಗ 31 ಸ್ಥಾನಗಳನ್ನು, ಅದರ ಮಿತ್ರ ಪಕ್ಷವಾದ ಜನತಾದಳ ಒಂದು ಸ್ಥಾನವನ್ನು ಗಳಿಸಿವೆ. ಕಾಂಗ್ರೆಸ್(ಐ) 17 ಸ್ಥಾನಗಳನ್ನು ಗಳಿಸಿದೆ. ಹಿಂದಿನ ನಗರ ಸಭೆಯಲ್ಲಿ ಅದು ಕೇವಲ 18 ಸ್ಥಾನಗಳನ್ನು ಹೊಂದಿತ್ತು. ಎಲ್ಲಾ ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿಜೆಪಿ ಎಲ್ಲಾ ಕಡೆ ಪರಾಭವ ಉಂಡಿದೆ.

ನವಂಬರ್ 28ರಂದು ಕಾಂಗ್ರೆಸ್(ಐ) ಬಿಜೆಪಿಗಳು ಎಷ್ಟೇ ಉದ್ರೇಕಕಾರಿ ಚಟುವಟಿಕೆ ನಡೆಸಿದರೂ ಚುನಾವಣೆ ಶಾಂತಿಯುತವಾಗಿ ನಡೆಯಿತು. ಚುನಾವಣೆಯ ದಿನದ ದೃಶ್ಯ ಇತ್ತೀಚೆಗೆ ನಡೆದ ಪಂಚಾಯತು ಚುನಾವಣೆಗಳಂತೆಯೇ ಇತ್ತು. ಅಂದರೆ ಕಾಂಗ್ರೆಸ್(ಐ), ಬಿಜೆಪಿ ಸುಮಾರಾಗಿ ಕೈ ಕೈ ಮಿಲಾಯಿಸಿ ಮತದಾರರಲ್ಲಿ ಭಯವುಂಟು ಮಾಡಲು ಪ್ರಯತ್ನ ನಡೆಸಿದರು. ಬಿಜೆಪಿ ತನ್ನ ಹಣ ಶಕ್ತಿ, ಜನಶಕ್ತಿಯನ್ನು ಪ್ರದರ್ಶಿಸಿತು. ಆದರೆ ಹೌರಾದ ಮತದಾರರು ಯಾವುದಕ್ಕೂ ಜಗ್ಗದೆ ತಮ್ಮ ತೀರ್ಪು ನೀಡಿದ್ದಾರೆ.



ಶಿಮ್ಲಾದಲ್ಲಿ ಪ್ರತಿಷ್ಠೆಯ ವಿಜಯ ಗಳಿಸಿದ ಕಾಂ. ರಾಕೇಶ್ ಸಿಂಘಾ

ಎಡ ಆಂದೋಲನಕ್ಕೆ ಹೊಸ ತಿರುವು

ಹಿಮಾಚಲ ಪ್ರದೇಶದಲ್ಲಿ ಜನತೆ ಬಿಜೆಪಿಯ ಕೋಮು ತಂತ್ರಗಳಿಂದ, "ರಾಮ ರಾಜ್ಯ"ದಿಂದ ದೇಸತ್ತುದರ ಪರಿಣಾಮವಾಗಿ ಉಂಟಾದ ಕಾಂಗ್ರೆ "ಅಲೆ"ಯ ನಡುವೆಯೂ ರಾಜ್ಯದ ರಾಜಧಾನಿ ಶಿಮ್ಲಾದಿಂದ ಸಿಪಿಐ(ಎಂ)ನ ಅಭ್ಯರ್ಥಿ ರಾಕೇಶ್ ಸಿಂಘಾ ಮಹತ್ವದ ಜಯ ಗಳಿಸಿದ್ದಾರೆ. ಹಿಮಾಚಲ ಪ್ರದೇಶದ ಹೊಸ ವಿಧಾನಸಭೆಯಲ್ಲಿ ಅವರದೀಗ ಏಕೈಕ ಕಾಂಗ್ರೆಯೇತರ, ಬಿಜೆಪಿಯೇತರ ಧ್ವನಿ. ಇಲ್ಲಿ ಚುನಾಯಿತರಾದ "ಪಕ್ಷೇತರ"ರೆಲ್ಲರೂ ಕಾಂಗ್ರೆ ಬಂಡಾಯ ಅಭ್ಯರ್ಥಿಗಳು ಎನ್ನುವುದು ಗಮನಾರ್ಹ. ಕೇವಲ ವಿದ್ಯಾರ್ಥಿಗಳು ಹಾಗೂ ಕಾರ್ಮಿಕರ ಕೆಲವು ವಿಭಾಗಗಳ ನಡುವೆ ಇದ್ದ ಸಿಪಿಐ(ಎಂ) ಪ್ರಭಾವ ಈಗ ಎಲ್ಲಾ ಜನ ವಿಭಾಗಗಳಿಗೆ, ಇಡೀ ರಾಜ್ಯಕ್ಕೆ ಹರಡುವ ಅವಕಾಶ ಉಂಟಾಗಿದೆ. ರಾಕೇಶ್ ಸಿಂಘಾ 159 ಮತಗಳಿಂದ ಸಮೀಪದ ಕಾಂಗ್ರೆ ಪ್ರತಿಸ್ಪರ್ಧಿ ಹರಭಜನ್ ಸಿಂಗ್ ಭಜ್ಜಿಯವರನ್ನು ಸೋಲಿಸಿದರು. ರಾಕೇಶ್‌ಗೆ 11854 ಮತಗಳು, ಕಾಂಗ್ರೆ ಅಭ್ಯರ್ಥಿಗೆ 11695 ಮತಗಳು, ಬಿಜೆಪಿ ಅಭ್ಯರ್ಥಿಗೆ 11363 ಮತಗಳು ದೊರೆತವು.

ಉತ್ತರ ಪ್ರದೇಶದಲ್ಲಿ ನಜೀಬಾಬಾದ್ ಮೀಸಲು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ರಾಮ ಸ್ವರೂಪ್ ಬಿಎಸ್‌ಪಿ ಅಭ್ಯರ್ಥಿಯಿದ್ದಾಗ್ಯೂ ಸಮೀಪದ ಬಿಜೆಪಿ ಪ್ರತಿಸ್ಪರ್ಧಿಗಿಂತ 6030 ಮತಗಳ ಅಂತರದಿಂದ ಗೆದ್ದಿದ್ದಾರೆ. ಇನ್ನೊಂದು ಕ್ಷೇತ್ರ ಫರೆಂದಾದಲ್ಲಿ ಪಕ್ಷದ ಅಭ್ಯರ್ಥಿ ವಿನೋದ್‌ತಿವಾರಿ ಕೇವಲ 48 ಮತಗಳಿಂದ ಸೋತಿದ್ದಾರೆ. ಅಲ್ಲಿ ಬಿಜೆಪಿ ಅಭ್ಯರ್ಥಿ ಗೆದ್ದಿದ್ದಾರೆ.

ರಾಜಸ್ಥಾನದಲ್ಲಿ ಸಿಕಾರ್ ಜಿಲ್ಲೆಯ ಧೋಡ್‌ನಲ್ಲಿ ಸಿಪಿಐ(ಎಂ)ನ ಅಮ್ರಾರಾಮ್ ಗೆದ್ದಿದ್ದಾರೆ. ಅವರು ಮಾಜಿ ಕಾಂಗ್ರೆ ಮಂತ್ರಿ ರಾಮ ದೇವ್ ಸಿಂಗ್‌ರನ್ನು ಸೋಲಿಸಿದ್ದಾರೆ. ಪಕ್ಷ ಈ ಸ್ಥಾನದಲ್ಲಿ ಮೊದಲ ಬಾರಿಗೆ ಜಯ ಗಳಿಸಿದೆ.

ಮಧ್ಯಪ್ರದೇಶದಲ್ಲಿ ಸಿಪಿಐ(ಎಂ) ದನಿ ಮೊದಲ ಬಾರಿಗೆ ವಿಧಾನಸಭೆಯಲ್ಲಿ ಕೇಳಲಿದೆ. ಸಿರ್‌ಮೋರ್ ಕ್ಷೇತ್ರದಿಂದ ಜನಪ್ರಿಯ ರೈತ ಮುಖಂಡ ರಾಮ್ ಲಖನ್ ಶರ್ಮಾ ಆರಿಸಿ ಬಂದಿದ್ದಾರೆ.

ಆ ಕರಾಳ ದಿನದ ಮೊದಲ ವಾರ್ಷಿಕದಂದು............

ಸ್ವಾತಂತ್ರ್ಯದ ನಂತರದ ಭಾರತದ ಇತಿಹಾಸದ ಕರಾಳ ಘಟನೆ ನಡೆದು, ಹಿಂದು ಕೋಮುವಾದಿಗಳ ವಿಷಪೂರಿತ ಅಪಪ್ರಚಾರದಿಂದಾಗಿ ಭಾರತದ ರಾಷ್ಟ್ರೀಯ ಐಕ್ಯತೆಯ, ಕೋಮು ಸೌಹಾರ್ದದ ಪರಂಪರೆಯ ಪ್ರತೀಕವಾಗಿಬಿಟ್ಟಿದ್ದ ಬಾಬ್ರಿಮಸೀದಿಯ ಧ್ವಂಸ ನಡೆದು ಒಂದು ವರ್ಷವಾಗುತ್ತಿದೆ. ಈ ನಡುವೆ ಸುಳ್ಳು, ಮೋಸ, ವಂಚನೆಗಳಿಂದ ಭಾರತೀಯರೆಲ್ಲ ವಿಶ್ವದೆದುರು ತಲೆ ತಗ್ಗಿಸುವಂತೆ ಮಾಡಿದ ಈ ಕರಾಳ ಘಟನೆ ನಿಜವಾಗಿಯೂ ಒಂದು ಉಜ್ವಲಘಟನೆ ಎಂದು ಚಿತ್ರಿಸಲು, ಜನಮಾನಸದಲ್ಲಿ ಬಿಂಬಿಸಲು, ಅದರ ಮೂಲಕ ದಿಲ್ಲಿ ಸಿಂಹಾಸನ ಗಿಟ್ಟಿಸುವ ಪ್ರಯತ್ನ ಈ ವರ್ಷವಿಡೀ ಅವ್ಯಾಹತವಾಗಿ ನಡೆದು ಡಿಸೆಂಬರ್ 6, 1993 "ಚೇತನಾ ದಿನ"ವಾಗಿ ಆಚರಿಸುವ ಸಿದ್ಧತೆಯಲ್ಲಿದ್ದ ಕೋಮುವಾದಿಗಳು ತಬ್ಬಿಬ್ಬಾಗುವಂತೆ ಮಾಡಿದ್ದಾರೆ -- ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಹಿಮಾಚಲ ಪ್ರದೇಶದ ಜನಸಾಮಾನ್ಯರು. ಡಿಸೆಂಬರ್ 6, 1992 ರ ಕರಾಳ ದಿನ ಬಿಜೆಪಿಯ ನಿಜಸ್ವರೂಪವನ್ನು ನಮ್ಮೆದುರು ತೆರೆದಿಟ್ಟಿದೆ, ನಾವಿನ್ನು ಮೋಸಹೋಗಲಾರೆವು ಎಂಬ ರಾಷ್ಟ್ರೀಯ ಐಕ್ಯತೆಯ "ಚೇತನ" ಡಿಸೆಂಬರ್ 6, 1993 ರ ವೇಳೆಗೆ ಸ್ಪಷ್ಟವಾಗಿ ತಮ್ಮೆದುರು ನಿಂತಿರುವುದನ್ನು ಕಂಡು ಕೋಮುವಾದಿ ರಾಜಕೀಯ ನಡೆಸುವ ಮಂದಿ ಮಾತ್ರವಲ್ಲ ಸಂಕುಚಿತ ಸ್ವಾರ್ಥಕ್ಕಾಗಿ ಆ ರಾಜಕೀಯಕ್ಕೆ ಅವಕಾಶ ಕೊಡುವ ಮಂದಿ ಕೂಡಾ ಅವರೊಡನೆ ಹೀನ ಸ್ಪರ್ಧೆಗಿಳಿಯುವ ಮಂದಿ ಕೂಡಾ ಕಂಗಾಲಾಗಿದ್ದಾರೆ. ಇನ್ನಾದರೂ ಅವರು ಕಣ್ಣು ತೆರೆದಾರೇ, ಈಗಲಾದರೂ ಅವರ ಭ್ರಮನಿರಸನವಾಗಿದೆಯೇ?

* * * * * * * *

ಕರಾಳವೆಂದರೆ ಎಂತಹಾ ಕರಾಳದಿನವದು. ಮುಂಬೈ, ಅಹಮದಾಬಾದ್ ಕಾನ್ಪುರ, ಬರೋಡಾ ಮತ್ತು ದೇಶದ ಎಲ್ಲೆಡೆ ಸಾವಿರಾರು ಮುಗ್ಧರ ರಕ್ತದ ಹೊಳೆ ಹರಿಸಿದ, ಇನ್ನೂ ಹತ್ತಾರು ಸಾವಿರ ಮುಗ್ಧ ಕುಟುಂಬಗಳ ಕಣ್ಣೀರ ಕೋಡಿ ಹರಿಸಿದ, ಅಸಹಾಯಕ ಹೆಂಗಳೆಯರ ರೋದನ ಗಗನಮುಟ್ಟಿದ ಅತ್ಯಾಚಾರಗಳಿಗೆ ನಾಂದಿ ಹಾಕಿದ ಕರಾಳ ದಿನ. ಮುಂದೆ, ದಿಲ್ಲಿಗಳಲ್ಲಿ ದೇಶ ಹಿಂದೆಂದೂ ಕಾಣದ ಭಯಂಕರ ಸ್ಫೋಟಗಳಿಗೆ ದಾರಿ ಮಾಡಿಕೊಟ್ಟ ಕರಾಳದಿನ. ಅದೂ ಸಾಲದೆಂಬಂತೆ ಮುಗ್ಧ ಜನಗಳ ಹೆಣಗಳ ಮೇಲೆ ನಡೆದು ದಿಲ್ಲಿ ಸಿಂಹಾಸನದತ್ತ ಕೈಚಾಚುತ್ತಿರುವ ಕೋಮುವಾದಿಗಳ ಕರಾಮತ್ತುಗಳನ್ನು ನೋಡುತ್ತಾ ದೇಶಪ್ರೇಮಿಗಳು ನಿಜವಾದ ಧಾರ್ಮಿಕರು ಕೂಡಾ ಹೌಹಾರುವಂತೆ ಮಾಡಿದ ಕರಾಳ ದಿನ. ಈ ಕರಾಳತಾಂಡವವನ್ನು ನಿಲ್ಲಿಸುವ ಬದಲು ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು, ಚರಿತ್ರೆಯನ್ನು ಮರೆತು ಅದೇ ದುಷ್ಟ ಶಕ್ತಿಗಳ ಕೈಬಲ ಪಡಿಸುವ, ಅವರೊಂದಿಗೆ ಹೀನ ಸ್ಪರ್ಧೆಗಿಳಿಯುವ ಕಾಂಗ್ರೆಸ್ ಮುಖಂಡರ ಶೋಚನೀಯ ವರ್ತನೆಯನ್ನು ಕಂಡು ಈ ವರ್ಷವಿಡೀ ದೇಶಪ್ರೇಮಿಗಳೆಲ್ಲಾ ತಲೆ ಚಚ್ಚಿಕೊಳ್ಳುವಂತಾಗಿ, ಹತಾಶರಾಗುವಂತೆ ಮಾಡಿದ ಕರಾಳ ದಿನ.

* * * * * * * *

ರಾಷ್ಟ್ರೀಯ ಸಮಗ್ರತಾ ಮಂಡಳಿ ಪೂರ್ಣ ಅಧಿಕಾರ ನೀಡಿದರೂ ಬಾಬ್ರಿಮಸೀದಿಯ ಧ್ವಂಸವನ್ನು ತಡೆಯಲು ಅಸಮರ್ಥವಾದ ಕಾಂಗ್ರೆಸ ನಿರ್ವೀರ್ಯತೆ ಅಲ್ಲಿಗೇ ನಿಲ್ಲಲಿಲ್ಲ. ಕೋಮುವಾದಿಗಳ ಸಂಘಟನೆಗಳ ಮೇಲೆ ಹೆಸರಿಗೆ ಮಾತ್ರ ನಿರ್ಬಂಧ ಹಾಕಿ ಅವರು ಇನ್ನಷ್ಟು ಹಾರಾಟ ನಡೆಸುವಂತೆ ಮಾಡಿತು. ಈ ವಿವಾದದ ಬಗ್ಗೆ ಇರುವ ಎಲ್ಲಾ ಕೇಸುಗಳನ್ನು ಸುಪ್ರೀಂ ಕೋರ್ಟ್‌ಗೆ ಒಪ್ಪಿಸಿ ಬೇಗನೇ ತೀರ್ಪು ಪಡೆಯುವ ವ್ಯವಸ್ಥೆ ಮಾಡುವ ಬದಲು ವಿವಾದಿತ ಸ್ಥಳದಲ್ಲಿ ಮಂದಿರವಿತ್ತೇ ಎಂದು ಸುಪ್ರೀಂ ಕೋರ್ಟ್‌ನ್ನು ಕೇಳಿ ಕೋಮುವಾದಿಗಳಿಗೆ ಹರ್ಷವುಟುಮಾಡಲಾಯಿತು. ಮಂದಿರವನ್ನು ಕಟ್ಟುವುದು ಬಿಜೆಪಿ ಪ್ರೇರಿತ 'ಸಂತ' ರೋ ಅಥವಾ ಕಾಂಗ್ರೆ ಪ್ರೇರಿತ 'ಸಂತ'ರೋ ಎಂದು ಸ್ಪರ್ಧೆಗಿಳಿದು ಇಡೀಸಮಸ್ಯೆಯನ್ನು ಹಾದಿ ತಪ್ಪಿಸುವ ಪ್ರಯತ್ನ ನಡೆಯಿತು. ಮಸೀದಿ ಧ್ವಂಸದ ಸಿಬಿಐ ತನಿಖೆ ಆಮೆ ವೇಗದಲ್ಲಿ ಸಾಗಿತು. ರಾಜಕೀಯವನ್ನು ಮತ ಧರ್ಮಗಳಿಂದ ಪ್ರತ್ಯೇಕಿಸುವ ಮಸೂದೆ ತಂದು ಅದನ್ನು ಪಾಸು ಮಾಡಿಸಿಕೊಳ್ಳವಲ್ಲೂ ಅದೇ ಎಂಬ ಕತನ, ಎಡವಟ್ಟುತನ, ಅದೇ ವಿಫಲತೆ.

* * * * * * * *

ಡಿಸೆಂಬರ್ 6, 1992ರ ಧ್ವಂಸಕಾರ್ಯದಿಂದ ಮೊದಲಿಗೆ ಗಲಿಬಿಲಿಗೊಂಡಂತೆ ಕಂಡರೂ ನಂತರ ಅದನ್ನು 'ಧೀರಕಾರ್ಯ'ವೆಂದು ಸಮರ್ಥಿಸಿಕೊಳ್ಳಲು, ತಾವೇ ವಿಶಾಲ ಹಿಂದೂ ಸಮಾಜದ, ರಾಷ್ಟ್ರೀ ಭಾವನೆಗಳ ಗುತ್ತಿಗೆ ಹಿಡಿದವರು ಎಂದು ಅಬ್ಬರಿಸಲು ಕೋಮುವಾದಿಗಳಿಗೆ ಕಾಂಗ್ರೆಸ ಎಡಬಿಡಂಗಿತನ ಇನ್ನಷ್ಟು ಪ್ರೋತ್ಸಾಹ ನೀಡಿತು. ಮಾನವ ರಕ್ತ ಕುಡಿದ ಹಿಂಸ್ರ ಪಶುವಿನಂತೆ ಅವರ ರಕ್ತದಾಹ ಹೆಚ್ಚುತ್ತಲೇ ಹೋಯಿತು. ನಮ್ಮ ಪ್ರಾಚೀನ ಸಂಸ್ಕೃತಿಯ ಅಭಿನ್ನ ಅಂಶವಾಗಿಬಿಟ್ಟ ಕಥನ- ಸಂಪ್ರದಾಯಗಳೂ ತಮ್ಮ ಮೂಗಿನ ನೇರಕ್ಕೆ ಇಲ್ಲದಿದ್ದರೆ ಅವನ್ನು ಧರ್ಮ ವಿರೋಧಿ ಎಂದು ಸಾರುವ ಹಕ್ಕನ್ನು ಅವರು ಕಿತ್ತುಕೊಂಡರು. ಈ ಆಗಸ್ಟ್ 15 ರಂದು ದೇಶದ ಸ್ವಾತಂತ್ರ್ಯ ಹೋರಾಟದ ಪರಂಪರೆಯನ್ನು ಬಹುಮುಖ ವ್ಯಾಪಕ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ 'ಸಹಮತ್' ಪ್ರದರ್ಶನದ ಮೇಲೆ ಹರಿಹಾಯುವ ಭಂಡತನ ತೋರಿದರು.

* * * * * *

ಪ್ರತಿವರ್ಷ ವಿಜಯದಶಮಿಯ ದಿನದಂದು ಪರೋಕ್ಷವಾಗಿ ಕೋಮು ವಿಷ ಉಗುಳುತಿದ್ದ ಆರ್.ಎಸ್.ಎಸ್. "ಸರಸಂಘಚಾಲಕ"ರು ಈ ಬಾರಿ ಬಹಿರಂಗವಾಗಿಯೇ ಅಲ್ಪಸಂಖ್ಯಾತರಿಗೆ "ಎಚ್ಚರಿಕೆ" ನೀಡುವ ಭಂಡತನ ತೋರಿದರು.- "ಮುಸ್ಲಿಮರು ತಮ್ಮ ಧಾರ್ಮಿಕ ನಂಬಿಕೆ, ವಿಶ್ವಾಸಗಳೊದಿಗೆ ಇಲ್ಲಿ ಬಾಳಬೇಕೆಂದು ನಾವು ಹೇಳುವುದರ ಅರ್ಥ ಅವರು ನಮ್ಮ ಭಾವನೆಗಳು ಹಾಗೂ ವಿಚಾರಗಳ ಬಗ್ಗೆಯೂ ಅಂತಹುದೇ ಭಾವನೆ ಇಟ್ಟುಕೊಳ್ಳಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ ಅವರಲ್ಲಿ ಬಹಳ ಮಂದಿಯಲ್ಲಿ ಈ ಭಾವನೆಗಳಿಲ್ಲ. ನಾವು ಇತಹ ಅಸಹನೆಯನ್ನು ಇನ್ನು ಮುಂದೆ ಸಹಿಸುವುದಿಲ್ಲ"ಎಂದು ಬೆದರಿಸಿದರು.

ನವೆಂಬರ್ 15 ರಂದು ಪ್ರತಿವರ್ಷ ಗಾಂಧೀಜಿ ಕೊಲೆ ಮಾಡಿದ ನಾಥೂರಾಮ್ ಗೋಡ್ಸ್‌ಯನ್ನು ಗಲ್ಲಿಗೇರಿಸಿದ ದಿನವನ್ನು ಪುಣೆಯಲ್ಲಿ ಗುಪ್ತವಾಗಿ ಆಚರಿಸುತ್ತಿದ್ದ ಮಂದಿ ಈ ಬಾರಿ ಮುಂಬೈಯಲ್ಲೂ ಇದನ್ನು ಆಚರಿಸಲು ನಿರ್ಧರಿಸಿದರು. ಆ ಸಭೆಯಲ್ಲಿ ಗಾಂಧೀಜಿ ಮಹಾ ದುಷ್ಟ ಎಂದು ಹೀಗಳೆಯಲಾಯಿತು. ಅವರನ್ನು ಕೊಲೆ ಮಾಡಿದ ನಾಥೂರಾಮ್ ಗೋಡ್ಸೆಯನ್ನು ಪಂಡಿತ ನಾಥೂರಾಮ್ ಎಂದು, 'ಹಿಂದೂ ರಾಷ್ಟ್ರದ' ದ ವೀರನೆಂದು ಹಾಡಿ ಹೊಗಳಲಾಯಿತು. "ಧೈರ್ಯವಿದ್ದರೆ ನಮ್ಮ ಮೇಲೆ ದೇಶದ್ರೋಹದ ಆರೋಪ ಹೊರಿಸಿ" ಎಂದು ಸವಾಲು ಹಾಕಲಾಯಿತು - ಕೆಲವೇ ದಿನಗಳ ಹಿಂದೆ ಅಡ್ವಾಣಿಯವರು ಬಾಬ್ರಿ ಮಸೀದಿ ಧ್ವಂಸ ಕುರಿತಂತೆ ಸಿಬಿಐ ತನಿಖೆ ಸಂದರ್ಭದಲ್ಲಿ ಸರಕಾರಕ್ಕೆ ಸವಾಲು ಹಾಕಿದ ಧಾಟಿಯಲ್ಲೇ., ಆದರೆ ಇಂತಹ ಅಡ್ವಾಣಿಯವರಿಗೂ ಗೋಡ್ಸೆ ಪ್ರಿಯರ ಈ ಸವಾಲು ಮುಜುಗರವುಟಾಗಿ ಗೋಡ್ಸೆಗೂ ಆರ್.ಎಸ್.ಎಸ್.ಗೂ ಸಂಬಂಧವಿಲ್ಲ ಎಂದು ಹೇಳಿದಾಗ "ನಾಥೂರಾಮ್ ಆರ್.ಎಸ್.ಎಸ್.ನ ಬೌದ್ಧಿಕ ಪ್ರಚಾರಕರಾಗಿದ್ದರು. ಪೂಣೆ, ಸಾಂಗ್ಲಿಯ ಸುತ್ತಮುತ್ತ ಆರ್.ಎಸ್.ಎಸ್. ಶಾಖೆಗಳನ್ನು ಕಟ್ಟಿದವರು. ಅಡ್ವಾಣಿಯವರಿಗೆ ಇಂತಹ ಸುಳ್ಳುಗಳನ್ನು ಹೇಳಿ ಏನು ಲಾಭ?" ಎಂದು ಕೂಡಾ. ಬಹಿರಂಗವಾಗಿಯೇ ಕೇಳಿದರು.

* * * * * * * *

ಅಡ್ವಾಣಿಯಾದಿಯಾಗಿ ಸುಳ್ಳು ಹೇಳುತ್ತಿದ್ದಾರೆ ಎಂಬುದು ದೇಶದ ಜಾತ್ಯಾತೀತವಾದಿಗಳಿಗೆ ಹೊಸ ಸುದ್ದಿಯೇನಲ್ಲ. ಆದ್ದರಿಂದಲೇ ಅವರು ಬಾಬ್ರಿ ಮಸೀದಿಯ ಧ್ವಂಸದಿಂದ ಹೌಹಾರಿದ್ದರೂ ತಕ್ಷಣ ದೇಶದಲ್ಲಿ ಹರಡುತ್ತಿರುವ ಕೋಮುವಿಷವನ್ನು ತಡೆಯಲು ಮುಂದಾದರು. ಕೋಮುವಾದಿಗಳ ಕೈಮೇಲಾಗಿದೆ ಎಂದನಿಸುತ್ತಿದ್ದರೂ ಕಾಂಗ್ರೆ ಸರ್ಕಾರ ನಿರ್ವೀರ್ಯತೆ ತೋರುತ್ತಿದ್ದರೂ ಕಂಗೆಡದೆ ಮುನ್ನುಗ್ಗಿದ್ದರು. ಜನಗಳಿಗೆ ಸ್ವಾತಂತ್ರ್ಯ ಹೋರಾಟದ ಭವ್ಯ ಪರಂಪರೆಯನ್ನು ಸಾರ್ವಜನಿಕ ಸಭೆ ರ‍್ಯಾಲಿಗಳು, ವಿಚಾರ ಸಂಕಿರಣಗಳು, ಕವಿ ಸಮ್ಮೇಳನಗಳು, ಮಾನವ ಸರಪಳಿಗಳು, ಕಲಾ ಪ್ರದರ್ಶನಗಳ ಮೂಲಕ ನೆನಪಿಸಿದರು. ಕೋಮುವಾದಿಗಳ ಸುಳ್ಳುಗಳನ್ನು ಎಳೆ ಎಳೆಯಾಗಿ ಬಯಲಿಗೆಳೆದರು. ಎಡಪಕ್ಷಗಳು ಮುಖ್ಯವಾಗಿ ಸಿ.ಪಿ.ಐ.(ಎಂ) ಈ ದೇಶವ್ಯಾಪಿ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿತು. ರಾಜ್ಯದಲ್ಲೂ ಸಿಪಿಐ(ಎಂ) ಹಾಗೂ ನಿಮ್ಮ ಪತ್ರಿಕೆ 'ಐಕ್ಯರಂಗ'ವೂ ಈ ಹೋರಾಟದಲ್ಲಿ ತಮ್ಮ ಶಕ್ತಿಮೀರಿ ಭಾಗವಹಿಸಿದವು. ಇವೆಲ್ಲದರ ಫಲವೋ ಎಂಬಂತೆ ಇನ್ನೊಂದು ಡಿಸೆಂಬರ್ 6 ಬರುವ ವೇಳೆಗೆ ದೇಶಪ್ರೇಮಿಗಳೆಲ್ಲಾ, ಜಾತ್ಯಾತೀತವಾದಿಗಳೆಲ್ಲಾ ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ಬಾಬ್ರಿಮಸೀದಿಯನ್ನು ಧ್ವಂಸ ಮಾಡುವ ಜನಾದೇಶ ತಮಗೆ ದೊರೆತಿದೆ ಎಂಬ ಬಿಜೆಪಿಯ ದಾವೆ ಶುದ್ಧ ಸುಳ್ಳು ಎಂದು ಅದೇ ಜನ ಸಾರಿದ್ದಾರೆ.

* * * * * * * *

-- ಕೆ. ವಿ.

ದಶರಥ ಜಾತಕ ಕಥೆಯನ್ನು "ಖೋಟಾ" ಜಾತ್ಯಾತೀತವಾದಿಗಳು ಸೃಷ್ಟಿಸಿದ್ದಲ್ಲ! "ಸಂಘ ಪರಿವಾರ"ದ ಮತ್ತೊಂದು ಸುಳ್ಳು ಬಯಲಿಗೆ

ಈ ವರ್ಷದ ಆಗಸ್ಟ್ ತಿಂಗಳಲ್ಲಿ "ಸಹಮತ್" (ಸಫ್ದರ್ ಹಾಶ್ಮಿ ಸ್ಮಾರಕ ಟ್ರಸ್ಟ್) ನವರು ನಡೆಸಿದ 'ಹಮ್ ಸಬ್ ಅಯುಧ್ಯಾ' ಪ್ರದರ್ಶನದಲ್ಲಿದ್ದ ಜಾತಕ ಕಥೆಯೊದರ ಬಗ್ಗೆ ಸಂಘ ಪರಿವಾರದ ಜನಗಳು, ಸಂಸತ್ತಿನಲ್ಲಿ ಅವರ ಬಿಜೆಪಿ ಪ್ರತಿನಿಧಿಗಳು ಎಬ್ಬಿಸಿದ ರಂಪ ನಿಮಗೆ ನೆನಪಿರಬಹುದು. ಜಾತ್ಯಾತೀತ ಜನಗಳು ಶ್ರೀರಾಮನ ಬಗ್ಗೆ ಜನಗಳಲ್ಲಿರುವ ಪೂಜ್ಯ ಭಾವನೆಗಳಿಗೆ ಬೇಕೆಂದೇ ನೋವುಂಟು ಮಾಡುತ್ತಿದ್ದಾರೆ ಎಂಬ ಅವರ ಮೊಸಳೆ ಕಣ್ಣೀರನ್ನು ಆಗ ನಂಬಿದವರೂ ಹಲವರಿದ್ದರು. ಈಗ ಅದೂ ಬಯಲಿಗೆ ಬಂದಿದೆ. ಶ್ರೀರಾಮ ಕೇವಲ ಧಾರ್ಮಿಕ ಪ್ರತೀಕವಲ್ಲ, ರಾಷ್ಟ್ರೀಯತೆಯ ಪ್ರತೀಕ ಎನ್ನುತ್ತಾ ನಿಜವಾಗಿ ಕೋಮುವಾದಿಗಳೇ ಆತನನ್ನು ಒಂದು ಸಾಮಾನ್ಯ ಮತೀಯ ಪ್ರತೀಕದ ಮಟ್ಟಕ್ಕಿಳಿಸಿದ್ದಾರೆ - ತಮ್ಮ ರಾಜಕೀಯ ಲಾಭಕ್ಕಾಗಿ ಎಂಬುದೀಗ ಇನ್ನೊಂದು ರೀತಿಯಲ್ಲಿ ಎಲ್ಲರಿಗೂ ಸ್ಪಷ್ಟವಾಗಿದೆ.

'ಸಹಮತ್'ನ ಆ ಪ್ರದರ್ಶನದಲ್ಲಿ ನಮ್ಮ ದೇಶದಲ್ಲಿ 'ರಾಮಾಯಣ' ದ ವಿಭಿನ್ನ ಆವೃತ್ತಿಗಳು ಜನಮಾನಸದಲ್ಲಿ ಹೇಗೆ ವ್ಯಾಪಿಸಿವೆ ನಮ್ಮದು ಹೇಗೆ ಬಹುಮುಖಿ ಮಿಶ್ರ ಸಂಸ್ಕೃತಿ ಎಂಬುದನ್ನು ತೋರಿಸಲಾಗಿದ್ದು 'ರಾಮಾಯಣ'ದ ಹಲವು ಆವೃತ್ತಿಗಳಲ್ಲಿ ಒಂದಾದ 'ದಶರಥ ಜಾತಕ ಕಥೆ'ಯನ್ನು ಪ್ರಸ್ತಾಪಿಸಲಾಗಿತ್ತು. ಈ ಜಾತಕ ಕಥೆಯ ಪ್ರಕಾರ ರಾಜಾ ದಶರಥನ ಹಿರಿಯ ಹೆಂಡತಿಯಿಂದ ಆತನಿಗೆ ಮೂವರು ಮಕ್ಕಳು ಹುಟ್ಟಿದರು. ರಾಮ ಪಂಡಿತ್, ಲಕ್ಷ್ಮಣ ಮತ್ತು ಸೀತೆ. ರಾಮ ವನವಾಸದಿಂದ ಹಿಂದಿರುಗಿ ಬಂದ ಮೇಲೆ ರಾಮ-ಸೀತೆಗೆ ಪಟ್ಟಾಭಿಷೇಕ ವಾಗುತ್ತದೆ. ಇದರಲ್ಲಿ ಆಗಿನ ಸಮಾಜ ತಪ್ಪೇನೂ ಕಂಡಿರಲಿಲ್ಲ. ಏಕೆಂದರೆ ರಾಜವಂಶದ "ಶುದ್ಧತೆ"ಯನ್ನು ಕಾಪಾಡಲು ಈ ಸಂಪ್ರದಾಯವನ್ನು ಆಗಿನ ಸಮಾಜ ಒಪ್ಪಿಕೊಂಡಿತ್ತು ಎಂಬುದು ಆರ್.ಎಸ್.ಎಸ್.ನವರು "ಖೋಟಾ ಜಾತ್ಯಾತೀತವಾದಿಗಳು" ಎಂದು ತಿರಸ್ಕರಿಸಲಾರಗ ಇತಿಹಾಸಕಾರರೂ ಬಹಳ ಹಿಂದೆಯೂ ಒಪ್ಪಿಕೊಂಡಿದ್ದ ತಥ್ಯ ಎಂಬುದು ಈಗ ಹಲವರ ಅರಿವಿಗೆ ಬಂದಿದೆ.

1970ರಲ್ಲಿ ವಿವೇಕಾನಂದ ಶಿಲಾ ಸ್ಮಾರಕ ಸಮಿತಿ ಪ್ರಕಟಿಸಿದ "ವಿಶ್ವ ವಿಚಾರ ಹಾಗೂ ಸಂಸ್ಕೃತಿಗೆ ಭಾರತದ ಕೊಡುಗೆ" ಎಂಬ ಗ್ರಂಥದಲ್ಲಿ ಈ "ದಶರಥ ಜಾತಕ" ದ ಬಗ್ಗೆ ವಿವರವಾದ ಪ್ರಸ್ತಾಪವಿದೆ ಎಂದು ಬಹುಶಃ ಈಗಲಾದರೂ ಬಿಜೆಪಿ- ವಿಎಚ್‌ಪಿ ಮುಖಂಡರ ಅರಿವಿಗೆ ಬಂದಿದೆಯೋ ಇಲ್ಲವೋ? ಅರಿವಿಗೆ ಬಂದಿದ್ದರೇನಂತೆ ಆ ಪುಸ್ತಕವನ್ನು ಬರೆದವರು, ಪ್ರಕಟಿಸಿದವರು ಕೂಡಾ ಹಿಂದೂ- ವಿರೋಧಿಗಳು, ಖೋಟಾ ಜಾತ್ಯಾತೀತವಾದಿಗಳು, ನಾಸ್ತಿಕರು ಎಂದು ಸಂಘ ಪರಿವಾರದವರು ಬೊಬ್ಬಿಡಬಹುದಲ್ಲವೇ? ಇಲ್ಲಿ ಹಾಗೆ ಬೊಬ್ಬಿಡುವಂತಿಲ್ಲ. ಏಕೆಂದರೆ ಆ ಗ್ರಂಥದ ಸಂಪಾದಕರು ಯಾರೂ ಬಿಜೆಪಿ 'ಖೋಟಾ ಜಾತ್ಯಾತೀತವಾದಿಗಳ' ವಿಧದಲ್ಲಿ ಬರುವುದಿಲ್ಲ, ಈ ಗ್ರಂಥಕ್ಕೆ ಮುನ್ನುಡಿ ಬರೆದವರು ಬಿಜೆಪಿಯವರೇ "ವಸ್ತುನಿಷ್ಠ ಇತಿಹಾಸಕಾರ" ಎಂದು ಪ್ರಶಂಸಿಸುವ ಪ್ರೊ. ಆರ್.ಸಿ. ಮುಜುಂದಾರ್. ಎಲ್ಲಕ್ಕೂ ಮಿಗಿಲಾಗಿ ಅದನ್ನು ಪ್ರಕಟಿಸಿದ "ದಾನಿ"ಗಳಲ್ಲಿ ಪ್ರಮುಖರೆಂದವರೆ ವಿ.ಹೆಚ್.ಪಿ.ಯ ಅಧ್ಯಕ್ಷ ವಿ.ಹೆಚ್. ದಾಲ್ಮಿಯಾ. ಅಲ್ಲದೆ ವಿ.ಹೆಚ್.ಪಿ. ಬೆಂಬಲಿಗರಾದ ಹಲವು 'ಹಿಂದೂ' ಬಂಡವಾಳಶಾಹಿಗಳೂ ಆ ದಾನಿಗಳ ಪಟ್ಟಿಯಲ್ಲಿದ್ದಾರೆ. ಇವರನ್ನೆಲ್ಲಾ ಹಿಂದೂ- ವಿರೋಧಿಗಳು, ನಾಸ್ತಿಕರು ಎಂದು ಸಂಘ ಪರಿವಾರದ ನಾಯಕಮಣಿಗಳು ಹೇಳುತ್ತಾರೆಯೇ ಎಂದು ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಒಬ್ಬ ಪರಿಣತರು ಪ್ರಶ್ನಿಸಿದ್ದಾರೆ. ರಾಜಕೀಯ ಅಧಿಕಾರ ಗಿಟ್ಟಿಸುವಲ್ಲಿ ನಾಚಿಕೆ ಮರ್ಯಾದೆಯ ಪ್ರಶ್ನೆಯಲ್ಲಿ ಎಂದು ಈ ಪರಿವಾರದ ಜನ ತಮ್ಮಲ್ಲೇ ಗೊಣಗಿಕೊಳ್ಳುತ್ತಿರಬಹುದು!

ಮಕ್ಕಳ ಅಸ್ಥಿಪಂಜರದ ಮೇಲೆ ಹರಿದು ಹೋಗುತ್ತಿದೆ 7 ಲಕ್ಷ ಲೀಟರ್ ಡೈರಿ ಹಾಲು

ಸ್ವಾತಂತ್ರ್ಯ ಸಿಕ್ಕ 48 ನೇ ವರ್ಷದಲ್ಲಿ ನೋಡುತ್ತೀರಾ- ಕೋಟ್ಯಾವಧಿ ಮುದ್ದು ಮಕ್ಕಳ ಎಲುಬಿನ ಪಂಜರ ನಗುತ್ತಿದೆ ನೋಡಿ. ಕೋಟ್ಯಾವಧಿ ಮುದ್ದು ಮಕ್ಕಳ ತಾಯಂದಿರ ಕಣ್ಣೀರ ಹೊಳೆ ಕೋಡಿಯಾಗಿ ಹರಿಯುತ್ತಿದೆ ನೋಡಿ.

ಹೊಟ್ಟೆಗೆ ಒಂದು ಹನಿ ಹಾಲಿಲ್ಲದೆ ಚಿಕ್ಕಮಕ್ಕಳು ಸಾಲು ಸಾಲಾಗಿ ಸಾವನ್ನಪ್ಪುತ್ತಿರುವಾಗನೆರೆ ರಾಜ್ಯ ಮಹಾರಾಷ್ಟ್ರದಲ್ಲಿ ಪ್ರತಿದಿನ 7 ಲಕ್ಷ ಲೀಟರ್ ಹಾಲು ಸಮುದ್ರ ಸೇರುತ್ತಿದೆ. ಚರಂಡಿ ಸೇರುತ್ತಿದೆ. ಎಂಥ ದಾರುಣ ಚಿತ್ರ ನೀವೇ ನೋಡಿ. ಒಂದು ಕಡೆ ಮಕ್ಕಳ ಹೆಣ ಭೂಮಿ ತಾಯಿಯ ಒಡಲನ್ನು ಸೇರುತ್ತಿರುವುದನ್ನು ನೋಡುತ್ತಿದೇವೆ. ಮತ್ತೊಂದು ಕಡೆ ಹಾಲಿನ ಹೊಳೆ ಸಮುದ್ರದಲ್ಲಿ ವಿಲೀನವಾಗುವುದನ್ನು ಕಾಣುತ್ತಿದ್ದೇವೆ. ಇದು ಕನಸಲ್ಲ ವಾಸ್ತವ ಸಂಗತಿ.

ಮಹಾರಾಷ್ಟ್ರದಲ್ಲಿ ಪ್ರತಿದಿನ ಒಟ್ಟು 36 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ. ಅದರ ಪೈಕಿ ಡೇರಿ ಅಭಿವೃದ್ಧಿ ಇಲಾಖೆ ಕೇವಲ 29 ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸಿ ಬಳಸುತ್ತಿದೆ. ಉಳಿದ 7 ಲಕ್ಷ ಲೀಟರ್ ಹಾಲು ಚರಂಡಿ ಮೂಲಕ ಸಮುದ್ರ ಸೇರುತ್ತಿದೆ. ಅಂದರೆ ಮಹಾರಾಷ್ಟ್ರ ಸರಕಾರ ಪ್ರತಿವರ್ಷ ಐವತ್ತು ಸಾವಿರ ಲೀಟರ್ ಹಾಲನ್ನು ನಿರುಪಯುಕ್ತಗೊಳಿಸುತ್ತಿದೆ. ಒಂದು ಲೀಟರ್ ಹಾಲನ್ನು 8 ಮಕ್ಕಳಿಗೆ ಕುಡಿಸಬಹುದೆಂದು ಲೆಕ್ಕ ಹಾಕಿದರೆ ಪ್ರತಿವರ್ಷ ಮಹಾರಾಷ್ಟ್ರ ಸರಕಾರ 400 ಸಾವಿರ ಮಕ್ಕಳಿಗೆ ಪೌಷ್ಟಿಕ ಆಹಾರ ನಿರಾಕರಿಸಿ ಕೊಲ್ಲುತ್ತಿದೆ ಎಂದರ್ಥ. ಇದು ಕಾಂಗ್ರೆ ಆಳುತ್ತಿರುವ ಮಹಾರಾಷ್ಟ್ರ ಸರಕಾರದ ಜನಪರ ಮಹಾಕಾರ್ಯವೆಂದು ಬಣ್ಣಿಸಬೇಕಾಗಿದೆ.

ಐವತ್ತು ಸಾವಿರ ಲೀಟರ್ ಹಾಲು ಯಾಕೆ ಸಮುದ್ರ-ಚರಂಡಿ ಪಾಲು ಮಾಡುತ್ತೀರೆಂದು ಕೇಳಿದರೆ "ಕೆಟ್ಟಿರುವ ಹಾಲು" ಎಂಬ ಸರಳ ಉತ್ತರ ಡೇರಿ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಕೇಳಿಬರುತ್ತದಲ್ಲದೆ ಪ್ರತಿದಿವಸ 7 ಲಕ್ಷ ಲೀಟರ್ ಹಾಲು ಕೆಡಲಿಕ್ಕೆ ಕಾರಣ ಏನು ಎಂಬುದನ್ನು ಅವರು ವಿವರಿಸುವುದಿಲ್ಲ. ಅಂದರೆ ಅಧಿಕಾರಿಗಳು ಅಪ್ಪಟ್ಟ ಸುಳ್ಳು ಹೇಳುತ್ತಿದ್ದಾರೆ ಎಂದು ಅರ್ಥ. ಇಷ್ಟೊಂದು ಪ್ರಮಾಣದ ಹಾಲನ್ನು ಹಾಳು ಮಾಡದೆ ಅದರಿಂದ ಹಾಲಿನ ಪುಡಿ ತಯಾರಿಸಬಹುದು ಬಡವರಿಗೆ, ಹಸಿದವರಿಗೆ ನೀಡಬಹುದು. ಸಾರ್ವಜನಿಕ ಆಸ್ಪತ್ರೆಗಳಿಗೆ ವಿತರಿಸಬಹುದಲ್ಲ. ಹಾಗೆ ಮಾಡಿ ದಿನನಿತ್ಯ ಸಾವಿಗೀಡಾಗುತ್ತಿರುವ ಬಡ ಮಕ್ಕಳ ಜೀವ ಉಳಿಸಬಹುದಲ್ಲ. ಈ ಒಳ್ಳೆ ವಿಚಾರ ಆಳುವ ಕಾಂಗ್ರೆ ಸರಕಾರಕ್ಕೆ ಯಾಕೆ ಮೂಡಿ ಬರುತ್ತಿಲ್ಲ?

ಹಾಲನ್ನು ಸಂಸ್ಕರಣ ಮಾಡಿ ಬೆಣ್ಣೆ ಚೀಸ್ ಮತ್ತಿನ್ನಿತರ ವಸ್ತುಗಳನ್ನು ತಯಾರಿಸಬಹುದಾಗಿದೆ. ಆ ಮೂಲಕ ಪೌಷ್ಠಿಕ ಆಹಾರವನ್ನು ಜನರಿಗೆ ಒದಗಿಸಬಹುದಾಗಿದೆ. ಉದ್ಯೋಗದ ಅವಕಾಶ ಕಲ್ಪಿಸಬಹುದಾಗಿದೆ.

ಕೇಂದ್ರ ಸರಕಾರದ ನೀತಿ ಎಷ್ಟು ಜನ ವಿರೋಧಿಯಾಗಿದೆ, ಎಷ್ಟು ಅಸಮಂಜಸವಾಗಿದೆ ಎಂಬ ವಿಷಯ ಡೇರಿ ಅಭಿವೃದ್ಧಿ ಪ್ರಾಧಿಕಾರಿಗಳ ಹೇಳಿಕೆಯಿಂದ ತಿಳಿದುಕೊಳ್ಳಬಹುದು. "ಹಾಲು ಮತ್ತು ಅದರ ಉತ್ಪನ್ನಗಳ ಸಂಸ್ಕರಣ ಘಟಕ ತೆರೆಯುವದಕ್ಕೆ ಅನುಮತಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಅರ್ಜಿಗಳು ಅಧಿಕಾರಿಗಳ ಅನುಮತಿ ಕಾಯುತ್ತಿರುವಾಗ ಸರಕಾರ ಪ್ರಸ್ತಾವನೆಗಳಿಗೆ ಅನುಮತಿ ನೀಡಲು ಮನಸ್ಸು ಮಾಡುತ್ತಿಲ್ಲ. ಹಾಲು ಸಂಸ್ಕರಣೆ ಹೆಚ್ಚಿನ ಘಟಕ ತೆರೆಯುವುದಕ್ಕೆ ನಾವು ಸಿದ್ದರಿದ್ದರೂ ಕೇಂದ್ರ ಸರಕಾರದ ನಿಲುವಿನಿಂದಾಗಿ ನಾವ ಅಸಹಾಯಕರಾಗಿದ್ದೇವೆ" ಎಂದು ಮಹಾರಾಷ್ಟ್ರ ಸರಕಾರದ ಅಧಿಕಾರಿಯ ಅಭಿಮತ. ಇದರಿಂದಾಗಿ ಪ್ರತಿದಿನ ಸರಕಾರಕ್ಕೆ 50 ಲಕ್ಷ ರೂಪಾಯಿ ನಷ್ಟವಾಗುತ್ತಿದೆಯಂತೆ.

ಮಹಾರಾಷ್ಟ್ರ ಸರಕಾರ ಅಮೇರಿಕದ ಮಾದರಿಗೆ ಮನಸೋತಿದೆಯೇ? ಜಗತ್ತಿನ ಬಹಳಷ್ಟು ದೇಶಗಳ - ಸೋಮಾಲಿಯ ಒಂದು ಉದಾಹರಣೆ ಕೋಟ್ಯಾವಧಿ ಜನ ಹೊಟ್ಟೆಗೆ ಕೂಳಿಲ್ಲದೆ ಸಾವನ್ನಪ್ಪುತ್ತಿರುವ ಸುದ್ದಿಗಳನ್ನು ಚಿತ್ರಗಳನ್ನು ಪ್ರತಿದಿನ ನೋಡುತ್ತಿದ್ದೇವೆ. ಅಮೇರಿಕದಲ್ಲಿ ಸಾಕಷ್ಟು ಗೋಧಿ ಬೆಳೆಯುತ್ತಿದೆ. ಅಲ್ಲಿಯ ಸಾಮ್ರಾಜ್ಯಶಾಹಿ ಸರಕಾರ ಸೋಮಾಲಿಯಾದಂಥ ದೇಶಗಳಿಗೆ ಗೋಧಿ ಕಳುಹಿಸಿ ಸಹಾಯ ಮಾಡಿ ಜೀವ ಉಳಿಸುತ್ತಿಲ್ಲ. ಅದರ ಬದಲಾಗಿ ತಾವು ಬೆಳೆಯುವ ಗೋಧಿಯನ್ನು ಸಮುದ್ರದಲ್ಲಿ ಚೆಲ್ಲುತ್ತಿದೆ ಎಂಥ ಅನ್ಯಾಯ. ಜಗತ್ತಿನ ಹಲವಾರು ದೇಶಗಳಲ್ಲಿ ಜನ ಹೊಟ್ಟೆಗಿಲ್ಲದೆ ಉಪವಾಸ ವನವಾಸ ಅನುಭವಿಸುತ್ತಿರುವಾಗ, ಸಾವಿನ ದವಡೆಯಲ್ಲಿ ಸಿಕ್ಕಿಕೊಂಡಿರುವಾಗ ಅಮೇರಿಕನ್ ಸಾಮ್ರಾಜ್ಯಶಾಹಿ ತನ್ನ ದೇಶದಲ್ಲಿ ಬೆಳೆದ ಗೋಧಿಯನ್ನು ಸಮುದ್ರಕ್ಕೆ ಚೆಲ್ಲಿ ಜನದ್ರೋಹ ಬಗೆಯುತ್ತದೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ಮಾದರಿಯೇ ಮಹಾರಾಷ್ಟ್ರ ಸರಕಾರದ್ದೇ ಎಂಬ ಪ್ರಶ್ನೆ ಕೇಳಬೇಕಾಗಿದೆ. ಹಾಗಿದ್ದಲ್ಲಿ ಅದು ಅತ್ಯಂಥ ನಾಚಿಕೆ ಕೇಡಿಯಾದ ದೇಶ ದ್ರೋಹಿಯಾದ ಧೋರಣೆಯಾಗಿದೆಂದು ಅತ್ಯಂತ ಕಠಿಣ ಶಬ್ದಗಳಿಂದ ಟೀಕಿಸಬೇಕಾಗಿದೆ.

ಪ್ರಧಾನ ಮಂತ್ರಿ ನರಸಿಂಹರಾಯರೇ ಡಂಕೆಲ್ ಸೂಚನೆಗಳು ನಮ್ಮ ದೇಶದ ಒಕ್ಕಲತನವನ್ನು ನಾಶಮಾಡಿ ಬರಡುಗೊಳಿಸುತ್ತದೆ. ಅನ್ನಕ್ಕಾಗಿ ಅಮೇರಿಕವನ್ನು ಅವಲಂಬಿಸುವಂತೆ ಮಾಡುತ್ತದೆಂಬ ಎಚ್ಚರಿಕೆ ನೀಡಿದ್ದೆವು ನಿಮ್ಮನ್ನು ಬಿಟ್ಟು ಇಡೀ ದೇಶವೇ ಬೊಬ್ಬಿಡುತ್ತಿದೆ. ಡಂಕೆಲ್ ಪ್ರಸ್ತಾವನೆಗಳು ಬೇಡ. ಅದನ್ನು ಧಿಕ್ಕರಿಸಿ ಎಂದು. ಈಗ ನೋಡಿ ನರಸಿಂಹರಾಯರೇ! ಡಂಕೆಲ್ ಕಣ್ಣು ಹಾಲಿನ ಮೇಲೂ ಬಿದ್ದಿದೆ. ಹಸಿದ ಮಕ್ಕಳ ಹೊಟ್ಟೆಗೆ ಬೀಳಬೇಕಾಗಿದ್ದ ಏಳು ಲಕ್ಷ ಲೀಟರ್ ಹಾಲು ಪ್ರತಿದಿನ ಸಮುದ್ರ ಸೇರುತ್ತಿದೆ ಗೊತ್ತೆ? ಡಂಕೆಲ್‌ನನ್ನು ಅಪ್ಪಿಕೊಳ್ಳುತ್ತೀರಾ, ಮಕ್ಕಳ ಹೊಟ್ಟೆ ತಣಿಸುತ್ತೀರಾ ನರಸಿಂಹರಾಯರೇ! ನೀವೇ ಹೇಳಿ ಏನು ಮಾಡುತ್ತೀರಿ?

-- ಎನ್.ಕೆ. ಉಪಾಧ್ಯಾಯ



ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

5

-- ವಿ.ಜೆ.ಕೆ. ನಾಯರ್

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿ ಬರುತ್ತಿದೆ.

ಕಳೆದ ನಾಲ್ಕು ವಾರಗಳಿಂದ 'ಐಕ್ಯರಂಗ'ದ ಈ ಪುಟಗಳಲ್ಲಿ ಅಗತ್ಯ ಮಾಹಿತಿಗಳನ್ನು ಒದಗಿಸಲಾಗಿತ್ತು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಈ ಲೇಖನ ಮಾಲೆಯ ಈ ಕೊನೆಯ ಲೇಖನ ನವಂಬರ್ 22ರ ಅನಿರ್ದಿಷ್ಟ ಧರಣಿಯವರೆಗೆ ನಡೆದ ಹೋರಾಟಗಳ ಒಂದು ಸ್ಥೂಲ ನೋಟವನ್ನು ನೀಡಿದೆ.

ಕರ್ನಾಟಕದಲ್ಲಿ ಕನಿಷ್ಟ ಕೂಲಿ ಹೋರಾಟಗಳು

ಎಲ್ಲಾ ಕಾರ್ಮಿಕರಿಗೆ ಕನಿಷ್ಟ ಕೂಲಿಯನ್ನು ಪರಿಷ್ಕರಿಸಬೇಕು ಎಂಬ ಒತ್ತಾಯವನ್ನು ಸಿಐಟಿಯು ನಮ್ಮ ರಾಜ್ಯದಲ್ಲಿ 1983ರಲ್ಲಿ ಎತ್ತಿತ್ತು. ಈಗಾಗಲೇ ಹೇಳಿರುವಂತೆ 1979 ರಲ್ಲಿ ಬೆಂಗಳೂರಿನಲ್ಲಿ ಮಾಂಸಾಹಾರಿ ಹೋಟೆಲು ಕಾರ್ಮಿಕರನ್ನು ಒಂದೇ ವೇಳೆಗೆ ಸಂಘಟಿಸಿ 8 ಗಂಟೆ ಕೆಲಸದ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರಕಾರದ ವಿರುದ್ಧ ಶಕ್ತಿಶಾಲೀ ಆಂದೋಲನವನ್ನು ನಡೆಸಿದ ಅನುಭವದಿಂದ ಇದು ಬೆಳೆದು ಬಂತು. 1983ರಲ್ಲಿ ಸಿಐಟಿಯು ರಾಜ್ಯ ಮಂಡಳಿ ಹಾಸನದಲ್ಲಿ ಸಭೆ ಸೇರಿ ಎಲ್ಲಾ ಉದ್ಯೋಗಗಳಿಗೆ ಕನಿಷ್ಟ ಕೂಲಿಯನ್ನು ಹೆಚ್ಚಿಸಿ ಪರಿಷ್ಕರಿಸಬೇಕೆಂದು ಒತ್ತಾಯಿಸಿ ಚಳುವಳಿ ನಡೆಸಲು ನಿರ್ಧರಿಸಿತು. ಈ ಕರೆಗೆ ಸ್ಪಂದಿಸಿ ರಾಜ್ಯಾದ್ಯಂತ ಬೃಹತ್ ಮತಪ್ರದರ್ಶನಗಳು ನಡೆದವು. [illegible]ಕ್ಕೆ ವ್ಯಾಪಕ ಪ್ರಚಾರವೂ ದೊರೆಯಿತು.

1989ರಲ್ಲಿ ಒಂದು ಸರಿಯಾದ ಯೋಜನೆಯೊದಿಗೆ ಈ ಬೇಡಿಕೆಯನ್ನು ಮತ್ತೆ ಎತ್ತಲಾಯಿತು. ಮೊದಲಿಗೆ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಅಸಂಘಟಿತ ಕಾರ್ಮಿಕರ ಒಂದು ರಾಜ್ಯ ಮಟ್ಟದ ಸಮಾವೇಶ ನಡೆಯಿತು. ಈ ಪ್ರಚಾರ-ಪ್ರಕ್ಷೋಭೆಯ ಯೋಜನೆಗೆ ಸಂಘಟಿತ ಕಾರ್ಮಿಕರ ಸಭೆ ಕರೆಯಲಾಯಿತು. ಈ ಹೋರಾಟದ ಮಹತ್ವವನ್ನು ವಿವರಿಸಲಾಯಿತು. ಈ ವಿವರಣೆಯಿಂದ ಕರ್ನಾಟಕದಲ್ಲಿ ಬ್ಯಾಂಕ್ ನೌಕರರ ಸಂಘಟನೆ ಬಿ.ಇ.ಎಫ್.ಐ ಹಾಗೂ ವಿಮಾ ನೌಕರರ ಸಂಘಟನೆ ಎ.ಐ.ಐ.ಇ.ಎ. ಈ ಹೋರಾಟದಲ್ಲಿ ದೊಡ್ಡ ಸಹಾಯ ನೀಡಿದರು. ಅವರ ನೆರವಿಲ್ಲದೆ ಈ ಆಂದೋಲನ ಸರಿಯಾದ ರೀತಿಯಲ್ಲಿ ಆರಂಭಗೊಳ್ಳುತ್ತಿರಲಿಲ್ಲ. ಬೆಂಗ[illegible]ರು ಹಾಗೂ ಪ್ಲಾಂಟೇಶನ್ ಪ್ರದೇಶಗಳಲ್ಲೂ ಬೃಹತ್ ಪ್ರಚಾರ ನಡೆಯಿತು. ಹದಿನೈದು ದಿನಗಳ ಜೀಪ್ ಜಾಥಾ ನಡೆಯಿತು.

ಆಗಸ್ಟ್ 28, 29 ಹಾಗೂ 30, 1989 ರ ಮೂರು ದಿನದ ಮುಷ್ಕರಕ್ಕೆ ಸಿಐಟಿಯು ರಾಜ್ಯ ಸಮಿತಿ ಕರೆ ನೀಡಿತು. 3 ದಿನಗಳ ಮುಷ್ಕರದ ಕೊನೆಯ ದಿನ "ಭಾರತ್ ಬಂದ್" ಆಚರಣೆ ನಡೆದ ದಿನವೂ ಆಗಿತ್ತು. ಈ ಮುಷ್ಕರ ಬೆಂಗಳೂರಿನಲ್ಲಿ ಹಾಗೂ ಪ್ಲಾಂಟೇಶನ್ ಪ್ರದೇಶಗಳಲ್ಲಿ ಇತರ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನಡೆಯಿತು.

ಈ ನಡುವೆ ದಿಲ್ಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ 1050ರೂ. ಕನಿಷ್ಟ ಕೂಲಿಗಾಗಿ ನವೆಂಬರ್ 1988ರಲ್ಲಿ ನಡೆದ ಹೋರಾಟದ ಯಶಸ್ಸು ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ಮೇಲೆ ಪ್ರಭಾವ ಬೀರಿತು. 1983ರಲ್ಲಿ ಕರ್ನಾಟಕದಲ್ಲಿ ಸಾಮೂಹಿಕ ಮತ ಪ್ರದರ್ಶನಗಳನ್ನು ನೋಡಿ ತಾವು ಈ ಹೋರಾಟದ ಮಾರ್ಗ ರೂಪಿಸಿದುದಾಗಿ ದಿಲ್ಲಿ ಸಂಗಾತಿಗಳು ಹೇಳುತ್ತಾರೆ. ದಿಲ್ಲಿಯಲ್ಲಿ ನವಂಬರ್ 1988 ರಲ್ಲಿ 14 ಲಕ್ಷ ಕಾರ್ಮಿಕರು ಒಂದು ವಾರ ಮುಷ್ಕರ ನಡೆಸಿದರು. ದಿಲ್ಲಿ ಆಡಳಿತ ಎಲ್ಲಾ ಕಾರ್ಮಿಕರಿಗೆ 750 ರೂ. ಕನಿಷ್ಟ ಕೂಲಿಯ ಸೂಚನೆ ಪ್ರಕಟಿಸುವಂತಾಯಿತು. ದಿಲ್ಲಿ ಹೋರಾಟದಲ್ಲಿ ಭಾಗಿಗಳಾಗಿದ್ದ ಫರಿದಾಬಾದ್‌ನ ಕಾರ್ಮಿಕರ ಒತ್ತಾಯದಿಂದ ಆಗ ಹರ್ಯಾಣಾದ ಮುಖ್ಯಮಂತ್ರಿಯಾಗಿದ್ದ ದೇವಿಲಾಲ್ ಕೂಡಾ ಹಿಂದೆ ಬೀಳಲಿಲ್ಲ. ಹರ್ಯಾಣದಲ್ಲಿ 800 ರೂ. ಕನಿಷ್ಟ ಕೂಲಿಯನ್ನು ನಿಗದಿ ಪಡಿಸುವುದಾಗಿ ಪ್ರಕಟಿಸಿದರು. ಪಂಜಾಬಿನಲ್ಲೂ ಸಿಐಟಿಯು ನೇತೃತ್ವದಲ್ಲಿ ಚಟುವಟಿಕೆ ಆರಂಭವಾಯಿತು. ಇತರ ಕೇಂದ್ರ ಕಾರ್ಮಿಕ ಸಂಘಟನೆಗಳೂ ಸೇರಿಕೊಡವು. ಅಲ್ಲೂ ಅದೇ ಮಟ್ಟದ ಕನಿಷ್ಟ ಕೂಲಿಯನ್ನು ಗಳಿಸುವುದು ಸಾಧ್ಯವಾಯಿತು. ಇದು ಸಿಐಟಿಯು ಅಖಿಲ ಭಾರತ ಮಟ್ಟದಲ್ಲಿ ಅಸಂಘಟಿತ ಕಾರ್ಮಿಕರ ಹೋರಾಟವನ್ನು ಕೈಗೆತ್ತಿಕೊಳ್ಳಲು ಒತ್ತಾಸೆ ನೀಡಿತು.

ಈ ರಂಗದಲ್ಲಿ ಅಖಿಲ ಭಾರತ ಆಂದೋಲನವನ್ನು ರೂಪಿಸುವ ಪ್ರಯತ್ನಗಳಲ್ಲಿ ನಾವು ಆರಂಭದಿಂದಲೇ ಭಾಗವಹಿಸಿದ್ದೆವು. ಹುಬ್ಬಳ್ಳಿಯಲ್ಲಿ ನಡೆದ ಸಿಐಟಿಯುನ 6 ನೇ ರಾಜ್ಯ ಸಮ್ಮೇಳನ ದಿಲ್ಲಿ ಮಾದರಿ ಚಳುವಳಿಯನ್ನು ಕಟ್ಟಿ ಬೆಳೆಸುವ ಕರೆ ನೀಡಿತು. ಅಖಿಲ ಭಾರತ ಪ್ರಯತ್ನಗಳೊಂದಿಗೆ ಸಂಯೋಜಿಸಿಕೊಂಡು ಇದನ್ನು ಮಾಡಲು ಪ್ರಯತ್ನಿಸಿದೆವು. ಕೇಂದ್ರ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಂಯೋಜಕ ಸಮಿತಿ ಈ ಹೋರಾಟದಲ್ಲಿ ಆಸಕ್ತಿ ತಳೆಯುವಂತೆ ಅಖಿಲ ಭಾರತ ಮಟ್ಟದಲ್ಲಿ ಸಿಐಟಿಯು ನಡೆಸಿದ ಪ್ರಯತ್ನ ಫಲಕಾರಿಯಾಗಲಿಲ್ಲ. ಆದರೆ ಆಗಾಗ ನೀಡಿದ ಹಲವು ಕರೆಗಳನ್ನು ನಾವು ಜ್ಯಾರಿಗೊಳಿಸಿದೆವು. ಇದು ರಾಜಕೀಯ ಬಿರುಗಾಳಿಯೆದ್ದಿದ್ದ ಕಾಲ. ಸರಕಾರಗಳಲ್ಲಿ ಹಲವು ಬದಲಾವಣೆಗಳು ಹಾಗೂ ಮತ್ತೆ-ಮತ್ತೆ ನಡೆದ ಚುನಾವಣೆಗಳಿಂದಾಗಿ ಆ ಕಡೆ ಗಮನ ನೀಡಬೇಕಾಯಿತು. ಆದರೆ ನಾವು ಈ ಪ್ರಶ್ನೆಯ ಮಹತ್ವವನ್ನು ಸತತವಾಗಿ ಚರ್ಚಿಸುತ್ತಾ ನಮ್ಮ ಕಾರ್ಯ ನಿರ್ವಹಣೆಯ ಶೈಲಿಯನ್ನು ಬದಲಿಸಲು ಪ್ರಯತ್ನಿಸುತ್ತಾ ಈ ಪ್ರಶ್ನೆಯ ಅರಿವು ನಮಗಿರುವಂತೆ ಮಾಡಿಕೊಳ್ಳುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದೆವು.

ಅಸಂಘಟಿತ ವಲಯಗಳ ಕಾರ್ಮಿಕರಿಗಾಗಿ ಹೋರಾಟದ ಕಾರ್ಯಕ್ರಮ ನಿರ್ದಿಷ್ಟ ರೂಪ ಪಡೆಯಲಾರಂಭಿಸಿದ್ದು ಬೆಂಗಳೂರಿನಲ್ಲಿ ಅಕ್ಟೋಬರ್ 18-21, 1992ರಲ್ಲಿ ನಡೆದ ಸಿಐಟಿಯುವಿನ 7ನೇ ರಾಜ್ಯ ಸಮ್ಮೇಳನದ ನಂತರ. ನಮ್ಮ ಕೆಲಸದ ಶೈಲಿಯನ್ನು ಬದಲಿಸುವಲ್ಲಿ ತಕ್ಕ ಮಟ್ಟಿನ ಯಶಸ್ಸು, ಹಾಗೂ ನವೆಂಬರ್ 1992ರಲ್ಲಿ ಪಶ್ಚಿಮ ಬಂಗಾಳದ ಪಣಿಹಾಟಿಯಲ್ಲಿ ಅಖಿಲ ಭಾರತ ಅಸಂಘಟಿತ ಕಾರ್ಮಿಕರ ಸಮಾವೇಶದ ಯಶಸ್ಸು ಈ ದಾರಿಯಲ್ಲಿ ಮುಂದುವರೆಯಲು ನೆರವಾಯಿತು. ನಂತರ ನಾವು ಅಖಿಲ ಭಾರತ ಕಾರ್ಯಕ್ರಮಗಳನ್ನು ಹಾಗೂ ನಮ್ಮದೇ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಇದರಿಂದಾಗಿ 1993 ರಲ್ಲಿ ನಿರಂತರ ಚಟುವಟಿಕೆ ನಡೆಯುತ್ತಿದೆ.

ಮಾರ್ಚ್ 15, 1993ರಂದು ನಾವು ಒಂದು ರಾಜ್ಯವ್ಯಾಪಿಯಾದ ಅಸಂಘಟಿತ ಕಾರ್ಮಿಕರ ಮುಷ್ಕರ ನಡೆಸಿ ಕಾರ್ಮಿಕ ಮಂತ್ರಿಗೆ ಒಂದು ಸ್ಮರಣ ಪತ್ರ ಅರ್ಪಿಸಿದೆವು. ಇದು ಈ ಪ್ರಶ್ನೆಯ ಸ್ಪಷ್ಟ ಚಿತ್ರ ನೀಡುವ ಸ್ಮರಣ ಪತ್ರವಾಗಿತ್ತು. ಮುಂದಿನ ಪ್ರಚಾರ- ಪ್ರಕ್ಷೋಭೆಗೆ ಇದು ಆಧಾರವಾಯಿತು. ನಂತರ ಅಖಿಲ ಭಾರತ ಕರೆಗಳನ್ನೆತ್ತಿಕೊಂಡು ಹಲವು ಸಮಾವೇಶಗಳನ್ನು ನಡೆಸಿದೆವು. ಲೋಕಸಭಾಧ್ಯಕ್ಷರಿಗೆ ನೀಡುವ ಅರ್ಜಿಗೆ ಸಹಿ ಸಂಗ್ರಹಿಸುವ ಕೆಲಸದಲ್ಲಿ ಗಂಭೀರವಾಗಿ ತೊಡಗಿದೆವು. ದೇಶಾದ್ಯಂತ ಈ ಅರ್ಜಿಗೆ ಸಂಗ್ರಹಿಸಿದ ಸಹಿಗಳಲ್ಲಿ ನಮ್ಮ ರಾಜ್ಯದ ಪಾಲು ಹಾಗೂ ಸಮಯಕ್ಕೆ ಸರಿಯಾಗಿ ಅದನ್ನು ಸಂಗ್ರಹಿಸಿದ್ದು ಗಮನಾರ್ಹವಾಗಿತ್ತು ಎಂದು ಸ್ವಲ್ಪ ಮಟ್ಟಿನ ತೃಪ್ತಿಯಿಂದಲೇ ಹೇಳಬಹುದು. ನಂತರ ಕಾರ್ಯಾಚರಣೆಗಳಿದೆವು. ನಮ್ಮ ಹಲವು ಕಾರ್ಯಕರ್ತರನ್ನು ಈ ವಲಯದಲ್ಲಿ ಕೆಲಸಕ್ಕೆ ಹಚ್ಚಿದೆವು. ಕೆಲವು ಸಂಘಟಿತ ಕಾರ್ಮಿಕರನ್ನು ಇದರಲ್ಲಿ ತೊಡಗಿಸಿ ಜುಲೈ 14, 1993ರ ಯಶಸ್ವಿ ಮುಷ್ಕರ ನಡೆಸಿದೆವು. ನಂತರ ಆಗಸ್ಟ್ 19 ರ ಜೈಲ್ ಭರೋ ಹಾಗೂ ಸೆಪ್ಟೆಂಬರ್ 9ರ ಭಾರತ್ ಬಂದ್‌ಗೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ತೊಡಗಿದೆವು. ಇವೆರಡೂ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದವು. ಅಸಂಘಟಿತ ಕಾರ್ಮಿಕರ ಹೋರಾಟ ಸಂಘಟಿಸಿದುದರ ಪ್ರಭಾವ ಸೆಪ್ಟೆಂಬರ್ 9, 1993 ರ ಭಾರತ್ ಬಂದ್‌ನ ಯಶಸ್ಸಿನ ಮೇಲೂ ಬಿದ್ದಿದೆ ಎಂಬುದನ್ನೀಗ ಗಮನಿಸಬಹುದು.

ಜುಲೈ 14 ರಂದು ವಿಧಾನಸೌಧ ದೆದುರು ಬೃಹತ್ ರ‍್ಯಾಲಿ ನಡೆಸಿ ಮುಖ್ಯಮಂತ್ರಿಗಳಿಗೆ ಒಂದು ಸ್ಮರಣ ಪತ್ರ ಸಲ್ಲಿಸಿದಾಗ ಅವರು ನಮ್ಮನ್ನು ಪ್ರತ್ಯೇಕವಾಗಿ ಭೇಟಿ ಮಾಡುವ ಸೌಜನ್ಯ ತೋರಿದರು - ಆದರೆ ಕೆಲವು ಕ್ಷಣಗಳ ಹೊತ್ತು ಮಾತ್ರ. ತಮ್ಮ ಪಕ್ಷದ ಬಂಡೆದ್ದ ಶಾಸಕರನ್ನು ಭೇಟಿಯಾಗಿ ಅವರು ಹೈಕಮಾಂಡನ್ನು ಭೇಟಿಯಾಗಲು ದಿಲ್ಲಿಗೆ ಧಾವಿಸಬೇಕಿತ್ತು. ಜುಲೈ 20, 1993 ರಂದು ನಮ್ಮನ್ನು ಮತ್ತೆ ಭೇಟಿಯಾಗಿ ಕನಿಷ್ಟ ಕೂಲಿಯ ಬಗ್ಗೆ ಗಂಭೀರವಾಗಿ ಚರ್ಚಿಸುವ ಆಶ್ವಾಸನೆ ನೀಡಿದರು. ಆದರೆ ಜಯಲಲಿತಾರವರ ಉಪವಾಸ ಮುಷ್ಕರದಿಂದ ಆ ಭೇಟಿ ನಡೆಯಲಿಲ್ಲ. ನಂತರ ಇನ್ನೊಂದು ಭೇಟಿ ನಿಗದಿ ಮಾಡುವ ನಮ್ಮ ಪ್ರಯತ್ನಗಳು ಯಾವವೂ ಫಲಿಸಲಿಲ್ಲ. ಈ ಹಿನ್ನೆಲೆಯಲ್ಲೇ ನಾವು ನವೆಂಬರ್ 22, 1993 ರಿಂದ ವಿಧಾನಸೌಧದೆದರು ಅನಿರ್ದಿಷ್ಟ ಕಾಲದವರೆಗೆ ಸಾಮೂಹಿಕ ಧರಣಿ ನಡೆಸುವ ನಿರ್ಧಾರ ಮಾಡಿದೆವು.

ನಮ್ಮ ಬೇಡಿಕೆಗಳು ಪೂರೈಸುವವರೆಗೆ ನಮ್ಮ ಹೋರಾಟಗಳನ್ನು ನಾವು ಸಡಿಲಗೊಳಿಸುವುದಿಲ್ಲ. ಈಗಾಗಲೇ ಕರಡು ಸೂಚನೆ ಪ್ರಕಟಿಸಿರುವ ಉದ್ಯೋಗಗಳಲ್ಲಿ ಅಂದರೆ ಕಾಫಿಕ್ಯೂರಿಂಗ್, ಪ್ರಿಂಟಿಂಗ್ ಪ್ರೆಸ್, ಜಿನ್ನಿಂಗ್, ಸೆರಾಮಿಕ್ ಸಾಮಗ್ರಿಗಳು, ಚರ್ಮ ಹದಮಾಡುವುದು, ಸಿಹಿತಿಂಡಿ ಉತ್ಪಾದನೆ, ಅರಣ್ಯಗಾರಿಕೆ, ಕೃಷಿ, ಹೋಟೇಲುಗಳು ಇತ್ಯಾದಿಗಳಲ್ಲಿ ಕನಿಷ್ಟ ಕೂಲಿ ಸಲಹಾ ಸಮಿತಿ ಈಗಾಗಲೇ ಶಿಫಾರಸು ಮಾಡಿದ ಮಟ್ಟದಲ್ಲಿ ಮತ್ತು ಸಿನೆಮಾ ಕಾರ್ಮಿಕರಿಗೆ ಈಗಾಗಲೇ ಕೊಡುತ್ತಿರುವವ ಮಟ್ಟದಲ್ಲಿ ಸರಕಾರ ಅಂತಿಮ ನೋಟಿಫಿಕೇಷನ್ ಪ್ರಕಟಿಸುವಂತೆ ಮಾಡುವಲ್ಲಿ ಯಶಸ್ವಿಯಾದರೆ ಅದೊಂದು ಸಾಧನೆಯಾಗುತ್ತದೆ. ಬೀಡಿ, ಪ್ಲಾಂಟೇಶನ್, ರೇಶ್ಮೆ ಬಟ್ಟೆ, ಕೈಮಗ್ಗ, ಪವರ್‌ಲೂಮ್, ಹೆಂಚು, ಅಗರಬತ್ತಿ ಇತ್ಯಾದಿಗಳಲ್ಲಿ ಸರಕಾರ ಅಂತಹುದೇ ಮಟ್ಟದಲ್ಲಿ ಕರಡು ಸೂಚನೆ ಪ್ರಕಟಿಸುವಂತೆಯೂ ಮಾಡಬೇಕಾಗಿದೆ. ನಿಜವಾಗಿ ಇತರ ಎಲ್ಲಾ ಉದ್ಯೋಗಗಳಲ್ಲಿ ಇಂತಹ ಪ್ರಕಟಣೆಯಾಗುವಂತೆ ಮಾಡಬೇಕಾಗಿದೆ. ಈ ಎಲ್ಲಾ ಸಂದರ್ಭಗಳಲ್ಲೂ ಈ ಕೂಲಿದರಗಳನ್ನು ಅಂತಿಮವಾಗಿ ನೋಟಿಫೈ ಮಾಡಿಸಲು, ನಂತರ ಇವಕ್ಕೆ ಮಾಲಕರ ವಿರೋಧವನ್ನು

ಪುಟ 4ನೋಡಿ

ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ತಾತ್ವಿಕ ಜಯ ಧರಣಿ ಸತ್ಯಾಗ್ರಹ ಅಂತ್ಯ

ಬಡತನವನ್ನೇ ನಿರ್ಮೂಲನೆ ಮಾಡಲು ತೀರ್ಮಾನ ಮಾಡಿದ್ದೇವೆ ಎಂದು ಹೇಳುವ ಸರ್ಕಾರ ಕಾರ್ಮಿಕರಿಗೆ ಬಡತನ ಮಟ್ಟಕ್ಕಿಂತಲೂ ಕೆಳಮಟ್ಟದ ಕನಿಷ್ಟ ಕೂಲಿಯನ್ನು ನಿಗದಿಪಡಿಸುವುದು ಸರಿಯಲ್ಲ ಎಂಬ ಸಿಐಟಿಯು ವಾದವನ್ನು ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿ ಅವರು ಒಪ್ಪಿಕೊಳ್ಳುವ ಮೂಲಕ ಸಿಐಟಿಯು ಕೈಗೊಂಡಿರುವ ಅಸಂಘಟಿತ ವಲಯದ ಕಾರ್ಮಿಕರ ಹೋರಾಟಕ್ಕೆ ತಾತ್ವಿಕ ಜಯ ಸಿಕ್ಕಂತಾಗಿದೆ. ನವೆಂಬರ್ 22 ರಿಂದ ಕಬ್ಬನ್ ಪಾರ್ಕಿನಲ್ಲಿ ಧರಣಿ ನಡೆಸುತ್ತಿದ್ದ ರಾಜ್ಯದ ಅಸಂಘಟಿತ ಕಾರ್ಮಿಕ ಬೇಡಿಕೆಗಳನ್ನು ಚರ್ಚಿಸಲು ನವೆಂಬರ್ 27 ರಂದು ಸಂಜೆ 7 ಗಂಟೆಗೆ ವಿಧಾನ ಸೌಧದಲ್ಲಿ ಮುಖ್ಯ ಮಂತ್ರಿಯವರು ಕರೆದಿದ್ದ ಸಭೆಯಲ್ಲಿ ಶ್ರೀ ವೀರಪ್ಪಮೊಯಿಲಿ ಅವರು ಮಾತನಾಡುತ್ತಾ 1991 ರಲ್ಲಿ ಕನಿಷ್ಟ ವೇತನ ಪರಿಷ್ಕರಿಸುವಾಗ ಬೀಡಿ ಮತ್ತು ಪ್ಲಾಂಟೇಷನ್ ಕಾರ್ಮಿಕರಿಗೆ ಸರ್ಕಾರದಿಂದ ಅನ್ಯಾಯವಾಗಿದೆ ಎಂಬ ಸಿಐಟಿಯು ಅಭಿಪ್ರಾಯಕ್ಕೆ ತಮ್ಮ ಸಹಮತ ವ್ಯಕ್ತಪಡಿಸಿದರಲ್ಲದೆ ಈ ಅನ್ಯಾಯವನ್ನು ಡಿಸೆಂಬರ್ ಕೊನೆಯೊಳಗಾಗಿ ಸರಿಪಡಿಸಲು ಕ್ರಮ ಕೈಗೊಳ್ಳಬೇಕೆಂದು ಕಾರ್ಮಿಕ ಸಚಿವಾಲಯಕ್ಕೆ ಆದೇಶ ನೀಡಿದರು. ಸಭೆಯಲ್ಲಿ ಭಾಗವಹಿಸಿದ್ದ ಕಾರ್ಮಿಕ ಮಂತ್ರಿ ಶ್ರೀ ಬ್ಲೇಸಿಯಸ್ ಡಿಸೋಜ ಮಾತನಾಡಿ ಕೆಲವು ಕೈಗಾರಿಕೆಗಳಿಗೆ ಐದುವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಕನಿಷ್ಟ ವೇತನ ಪರಿಷ್ಕರಣೆ ಮಾಡಲಾಗಿಲ್ಲ ಎಂದು ಒಪ್ಪಿಕೊಂಡರು. ಕೈಮಗ್ಗ ಮತ್ತು ಹೋಟೆಲ್ ಕೈಗಾರಿಕೆಗಳನ್ನು ಒಳಗೊಂಡಂತೆ ಒಟ್ಟು 13 ಕೈಗಾರಿಕೆಗಳ ಕನಿಷ್ಟ ಕೂಲಿ ಪರಿಷ್ಕರಣೆಯನ್ನು ಶೀಘ್ರದಲ್ಲಿಯೇ ಮಾಡುವುದಾಗಿ ತಿಳಿಸಿದ ಅವರು ಅಂಗಡಿ, ಪ್ಲಾಯ್‌ವುಡ್, ಸಾಮಿಲ್ ಮತ್ತು ಕಟ್ಟಡ ನಿರ್ಮಾಣ ಕೈಗಾರಿಕೆಗಳ ಕನಿಷ್ಟ ವೇತನವನ್ನು ಇಂದೇ ಪ್ರಕಟಿಸಿರುವುದಾಗಿ ಹೇಳಿದರು. ಕಾರ್ಮಿಕ ಕಾರ್ಯದರ್ಶಿ ಶಿವಾನಂದ ಮತ್ತು ಕಾರ್ಮಿಕ ಆಯುಕ್ತ ಮುಕ್ತಿಯಾರ್ ಅಹಮ್ಮದ್ ಸಭೆಯಲ್ಲಿ ಹಾಜರಿದ್ದರು.

ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಕೈಗಾರಿಕೆಯ ಕನಿಷ್ಟ ವೇತನದ ಕರಡನ್ನು 1988 ರಲ್ಲಿ ಪ್ರಕಟಿಸಲಾಗಿದ್ದರೂ ಇಲ್ಲಿಯವರೆಗೆ ಅದನ್ನು ಅಂತಿಮಗೊಳಿಸದೆ ಇರುವ ಬಗ್ಗೆ ಸಿಐಟಿಯು ಪ್ರತಿನಿಧಿಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ನೇಕಾರರು ಪೀಸ್‌ರೇಟ್‌ನಲ್ಲಿ ಕೂಲಿ ಪಡೆಯುವುದರಿಂದ ಅವರಿಗೆ ಗ್ಯಾರಂಟೀಡ್ ವೇತನ ನೀಡುವುದನ್ನು ಕನಿಷ್ಟ ವೇತನ ಅಧಿಸೂಚನೆಯಲ್ಲಿ ಸೇರಿಸಬೇಕೆಂದು ಮತ್ತು ತುಟ್ಟಿ ಭತ್ಯೆ ದರವನ್ನು 2.5 ಪೈಸೆ ಬದಲಾಗಿ 5 ಪೈಸೆ ಮಾಡಬೇಕೆಂದು ಸಿಐಟಿಯು ಮುಖಂಡರು ಸರ್ಕಾರಕ್ಕೆ ಸಲಹೆ ಮಾಡಿದರು. ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ಮಧ್ಯಪ್ರವೇಶಿಸಿ ಡಿಸೆಂಬರ್ 20ರ ಒಳಗಾಗಿ ಕೈಮಗ್ಗ ಕಾರ್ಮಿಕರ ಕನಿಷ್ಟ ವೇತನದ ಅಂತಿಮ ಪ್ರಕಟಣೆ ಹೊರಡಿಸುವಂತೆ ಕಾರ್ಮಿಕ ಮಂತ್ರಿಗಳಿಗೆ ಸೂಚನೆ ನೀಡಿದರು. ನೇಕಾರರಿಗೆ ಗ್ಯಾರಂಟೀಡ್ ವೇತನ ನಿಗದಿಯಾದರೆ ಅವರು ನೂಲು ಪೂರೈಕೆ ಇಲ್ಲದೆ ನಿರುದ್ಯೋಗಕ್ಕೆ ತುತ್ತಾಗುವ ದಿನಗಳಿಗೆ ಪರಿಹಾರ ಪಡೆಯಲು ಸಾಧ್ಯವಾಗುವುದು.

ಹೋಟೆಲ್ ಕಾರ್ಮಿಕರ ಪ್ರಶ್ನೆಯನ್ನು ಎತ್ತಿಕೊಂಡು ಸಿಐಟಿಯು ಮುಖಂಡರು 1990 ಮತ್ತು 1991 ರಲ್ಲಿ ಪ್ರಕಟಿಸಲಾದ ಕರಡು ಸೂಚನೆಗಳಲ್ಲಿ ಅಡಕವಾಗಿರುವ ಕಾರ್ಮಿಕ ವಿರೋಧಿ ಅಂಶಗಳನ್ನು ಸರ್ಕಾರದ ಮುಂದಿಟ್ಟರು. 1990ರ ಸೂಚನೆಯಲ್ಲಿ ಸಂಬಳ ಕಡಿಮೆ ಮಾಡುವ ಪ್ರಸ್ತಾಪವಿತ್ತು. 1991 ರ ಸೂಚನೆಯಲ್ಲಿ ಹೋಟೆಲ್ ಕಾರ್ಮಿಕರಿಗೆ ಕೊಡಲಾಗುತ್ತಿರುವ ಆಹಾರದ ಬಾಬತ್ತು ಸಂಬಳದಿಂದ ಶೇಕಡಾವಾರು ದರದಲ್ಲಿ ಕಡಿತ ಮಾಡುವ ಪ್ರಸ್ತಾಪವಿತ್ತು. ಸರ್ಕಾರ ಇತ್ತೀಚೆಗೆ ಸಿನೆಮಾ ಕಾರ್ಮಿಕರಿಗೆ ದಿನಕ್ಕೆ ರೂ. 46.64 ವೇತನ ಹಾಗೂ 3.5 ಪೈಸೆ ದರದಲ್ಲಿ ತುಟ್ಟಿಭತ್ಯೆಯನ್ನು ನಿಗದಿಪಡಿಸಿದೆ. ಹೋಟೆಲ್ ಕಾರ್ಮಿಕರಿಗೂ ಕನಿಷ್ಟ ಸಿನೇಮಾ ಕಾರ್ಮಿಕರಿಗೆ ನಿಗದಿಪಡಿಸಿದಷ್ಟು ಕನಿಷ್ಟ ವೇತನವನ್ನು ಪ್ರಕಟಿಸಿ ಅವರಿಗಾಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಸಿಐಟಿಯು ಪ್ರತಿನಿಧಿಗಳು ಆಗ್ರಹಿಸಿದ್ದರು. ಹೋಟೆಲ್ ಸೇರಿದಂತೆ ಮುದ್ರಣ, ಕಾಫಿಕ್ಯೂರಿಂಗ್, ಅರಣ್ಯ, ಕಾಟನ್ ಜಿನ್ನಿಂಗ್, ಚರ್ಮದ ಕೆಲಸ, ಪಿಂಗಾಣಿ, ಅಕ್ಕಿ, ಬೇಳೆ ಹಿಟ್ಟಿನ ಗಿರಣಿಗಳು, ಪೆಪ್ಪರ್‌ಮಿಂಟ್ ತಯಾರಿಕೆ ಮೊದಲಾದ ಕೈಗಾರಿಕೆಗಳ ಕನಿಷ್ಟ ವೇತನವನ್ನು ಡಿಸೆಂಬರ್ ಕೊನೆಯೊಳಗಾಗಿ ಪ್ರಕಟಿಸುವುದಾಗಿ ಕಾರ್ಮಿಕ ಮಂತ್ರಿಗಳು ಭರವಸೆ ನೀಡಿದರು. ಕಾರ್ಮಿಕರನ್ನು ಪ್ರತಿನಿಧಿಸಿ ಸಿಐಟಿಯು ಪದಾಧಿಕಾರಿಗಳಾದ ಕಾಂ. ಸೂರ್ಯನಾರಾಯಣರಾವ್, ವಿ.ಜೆ.ಕೆ. ನಾಯರ್, ಎಸ್.ಕೆ. ಉಪಾಧ್ಯಾಯ, ಮಹಮ್ಮದ್ ದಸ್ತಗೀರ್ ಮತ್ತು ನಿತ್ಯಾನಂದ ಸ್ವಾಮಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಮುಖ್ಯಮಂತ್ರಿ ಮತ್ತು ಕಾರ್ಮಿಕ ಮಂತ್ರಿಗಳು ನೀಡಿದ ನಿರ್ದಿಷ್ಟ ಭರವಸೆಯ ಆಧಾರದಲ್ಲಿ ನವೆಂಬರ್ 22 ರಿಂದ ಆರಂಭಿಸಲಾಗಿದ್ದ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲಾಯಿತು.

ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ಲಭಿಸಿದ ಈ ಪ್ರಥಮ ಗೆಲುವು ತಾತ್ವಿಕ ದೃಷ್ಟಿಯಿಂದ ಮಹತ್ವದ ಗೆಲುವು ಆಗಿದೆ. ಈ ಹೋರಾಟದ ಮೂಲಕ ಯಾವುದೇ ಕೈಗಾರಿಕೆಯ ಕನಿಷ್ಟ ವೇತನ ಬಡತನದ ಮಟ್ಟಕ್ಕಿಂತ ಅಂದರೆ ಈಗ ಬೆಲೆ ಸೂಚ್ಯಾಂಕದ 1,309 ಪಾಯಿಂಟುಗಳಿಗೆ ರೂ. 37.50 ಕ್ಕಿಂತ ಕೀಳಾ ಕಡಿಮೆ ಇರಬಾರದು ಎಂಬುವ ತತ್ವವನ್ನು ಸರ್ಕಾರ ಒಪ್ಪಿಕೊಳ್ಳುವಂತಾಯಿತು. ಕಾನೂನು ಪ್ರಕಾರ ನೇಮಿಸಲ್ಪಡುವ ಕನಿಷ್ಟ ವೇತನಾ ಸಲಹಾ ಸಮಿತಿಯ ಸರ್ವಾನುಮತದ ಶಿಫಾರಸ್ಸನ್ನು ಸರ್ಕಾರ ಕಡೆಗಣಿಸುವಂತಿಲ್ಲ

ಪುಟ 6ನೋಡಿ

ಕಾಂಗ್ರೆಸ್ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ

ಜನತಾಪಕ್ಷ ಪ್ರಥಮ ಸಲ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ರಾಮಕೃಷ್ಣ ಹೆಗಡೆ ಸರಕಾ
ರದಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದ ಅಬ್ದುಲ್ ನಜೀರ್ ಸಾಬ್‌ರವರ ಮುತುವರ್ಜಿ ಹಾಗೂ
ದೃಢ ನಿರ್ಧಾರದಿಂದ "ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕ್ ಪಂಚಾಯತ್ ಸಮಿತಿ, ಮಂಡಲ
ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಕಾಯಿದೆ 1983"ನ್ನು ವಿಧಾನ ಸಭೆ ಮತ್ತು ವಿಧಾನಪರಿಷ
ತ್ತಿನ ಸದಸ್ಯರನ್ನೊಳಗೊಂಡ ಜಂಟೀ ಸೆಲೆಕ್ಟ್ ಕಮಿಟಿಯ ಶಿಫಾರಸುಗಳೊಂದಿಗೆ ಸ್ವೀಕಾರ ಮಾಡಲಾಗಿತ್ತು.
ಜಂಟೀ ಸೆಲೆಕ್ಟ್ ಕಮಿಟಿಯಲ್ಲಿ ಅಂದು ಶಾಸಕರಾಗಿದ್ದ ಸಿಪಿಐ(ಎಂ) ಮುಖಂಡ, ಎಸ್. ಸೂರ್ಯನಾರಾ
ಯಣರಾವ್ ಕೂಡಾ ಇದ್ದರು. ಎರಡು ವರ್ಷಗಳ ನಂತರ ಆಗಸ್ಟ್ 14, 1985 ರಿಂದ ಈ ಕಾಯಿದೆ
ರಾಜ್ಯದಲ್ಲಿ ಜ್ಯಾರಿಯಲ್ಲಿ ಬಂದಿತ್ತು. ಈ ಕಾಯಿದೆಗನುಸಾರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾ
ಯತಿಗಳಿಗೆ ಚುನಾವಣೆ ನಡೆಯಿತು. ಏಪ್ರಿಲ್ 1, 1987 ರಿಂದ ಅವು ಅನುಷ್ಠಾನಕ್ಕೆ ಬಂದವು. ನಾಲ್ಕು
ವರ್ಷಗಳ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆ ಸರಕಾರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್
ಗಳಿಗೆ ತಮ್ಮ ಐದು ವರ್ಷದ ಕಾಲಾವಧಿಯ ಆಡಳಿತೆಯನ್ನು ಪೂರೈಸಲು ಅವಕಾಶಕೊಡದೆ ಅವುಗಳನ್ನೆಲ್ಲ
ರದ್ದುಗೊಳಿಸಿ ಆಡಳಿತಾಧಿಕಾರಿಗಳನ್ನು ನೇಮಿಸಿತು.

ಅಧಿಕಾರಕ್ಕೆ ಬಂದ ಕಾಂಗ್ರೆ ಸರಕಾರ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಚುನಾವಣೆಗಳನ್ನು
ಮುಂದೂಡುತ್ತಾ ಬಂದು ಗ್ರಾಮಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಪಂಚಾಯತ್ ರಾಜ್ ವ್ಯವಸ್ಥೆ
ಯಾವ ರೀತಿ ಕೆಲಸ ಮಾಡಬೇಕೆಂಬ ಮಾರ್ಗ ಸೂಚನೆಗಳನ್ನೊಳಗೊಂಡ ಸಂವಿದಾನಕ್ಕೆ 72 ನೇ ತಿದ್ದು
ಪಡಿಗನುಸಾರ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಶಾಸನದ ಬದಲು ಸಮಗ್ರವಾದ
ಒಂದು ಹೊಸ ಶಾಸನವನ್ನು 30 ಏಪ್ರಿಲ್ 1993 ರಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ
1993 ಎಂಬ ಹೆಸರಿನಲ್ಲಿ ಜ್ಯಾರಿ ತಂದಿತು. ಈ ಅಧಿನಿಯಮದಂತೆ ಇದೇ ಡಿಸೆಂಬರ್ 29ರಂದು ಗ್ರಾಮ
ಪಂಚಾಯತಿಗೆ, 1994 ಜನವರಿಯಲ್ಲಿ ತಾಲ್ಲೂಕ್ ಮತ್ತು ಜಿಲ್ಲಾ ಪಂಚಾಯತುಗಳಿಗೆ ಚುನಾವಣೆ ನಡೆ
ಯಲಿದೆ. ಅಧಿಕಾರ ವಿಕೇಂದ್ರೀಕರಣದ ಮಂತ್ರ ಪಠಿಸುವುದರಲ್ಲಿ ಬೇಸರ ಪಡದ, ಅದೇ ಸಮಯದಲ್ಲಿ
ಅಧಿಕಾರ ವಿಕೇಂದ್ರೀಕರಣದ ಕತ್ತು ಹಿಸುಕುವ ಕಾಂಗ್ರೆ ಪಕ್ಷ ಚುನಾವಣೆಗಳನ್ನು ಮುಂದೂಡುವುದರಲ್ಲಿ
ನಿಸ್ಸೀಮತೆ ಪಡೆದಿದೆ. ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಚುನಾವಣೆ ಹಗಲು ಕನಸಾಗಿಯೇ
ಉಳಿದಿತ್ತು. ಸುಪ್ರೀಂ ಕೋರ್ಟಿನ ಆದೇಶ ವಿರೋಧ ಪಕ್ಷಗಳ ಒಪ್ಪಂದಕ್ಕೆ ಮಣಿದು ಅದು ಚುನಾವಣೆ
ಘೋಷಿಸಲಾಗಿದೆ.

ಈ ಸಂದರ್ಭದಲ್ಲಿ ಕಾಂಗ್ರೆಸ್(ಐ) ಪಂಚಾಯತೀ ರಾಜ್ಯದ ಬಗ್ಗೆ ಮತ್ತೆ-ಮತ್ತೆ ಹಿಂಜರಿಕೆಯನ್ನೇಕೆ ತೋರುತ್ತಿದೆ. ಈಗ ಅದರ ಮೇಲೆ ಎಂತಹ ಒತ್ತಡ ಬಂದಿದೆ ಹಾಗೂ ಕರ್ನಾಟಕದಲ್ಲಿ 1993ರ ಕಾಯ್ದೆ ಹಾಗೂ ಹಿಂದೆ 1983ರ ಕಾಯ್ದೆಗಳ ಮುಖ್ಯ ಅಂಶಗಳೇನು ಎಂದು

ಕಾಂ. ಎನ್.ಕೆ.ಉಪಾಧ್ಯಾಯ ಪರಿಶೀಲಿಸಿದ್ದಾರೆ.

ಕಾಂಗ್ರೆಸ್ ಮತ್ತು ಸ್ಥಳೀಯ ಸಂಸ್ಥೆಗಳ ಸಂಬಂಧವೆಂದರೆ "ಎಣ್ಣೆ ಸೀಗೇಕಾಯಿ" ಯಂತೆ ಎಂದರೆ ತಪ್ಪಾಗಲಾರದು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಬೇರೆ ಬೇರೆ ರಾಜ್ಯಗಳಲ್ಲಿ ಆಡಳಿತೆ ನಡೆಸುತ್ತ ಬಂದ ಕಾಂಗ್ರೆಸ್ ಪಕ್ಷ ತಾನು ಅಧಿಕಾರದಲ್ಲಿರುವ ತನಕ ಆ ಸಂಸ್ಥೆಗಳಿಗೆ ಚುನಾವಣೆ ನಡೆಸಲೇ ಇಲ್ಲ. ತನ್ನ ಪಕ್ಷದೊಳಗಿನ ಆಂತರಿಕ ಕಚ್ಚಾಟ, ಗುಂಪುಗಾರಿಕೆ ಹಾಗೆಯೇ ಚುನಾವಣೆಗಳಾದರೆ ತನ್ನ ಪಕ್ಷ ಅಧಿಕಾರ ಕಳೆದುಕೊಳ್ಳುವ ಭೀತಿ, ವಿರೋಧ ಪಕ್ಷಗಳ ಗೆಲುವಿನ ಅಂಜಿಕೆಯಿಂದಾಗಿ ಚುನಾವಣೆಗಳನ್ನು ಮುಂದೂಡುತ್ತಲೇ ಬಂದಿದ್ದಾರೆ. ಕುಂಟು ನೆಪಗಳನ್ನು ಮುಂದೆ ಮಾಡುವುದರಲ್ಲಿ ತಮ್ಮ ಪ್ರಾವೀಣ್ಯತೆಯನ್ನು ತೋರ್ಪಡಿಸಿದ್ದಾರೆ. ನಾಗರೀಕರ ಹಕ್ಕುಗಳನ್ನು ಹತ್ತಿಕ್ಕುವುದರಲ್ಲಿ ನಾಚಿಕೆಗೇಡಿತನವನ್ನು ಪ್ರದರ್ಶಿಸಿದ್ದಾರೆ. ಜನರ, ವಿರೋಧ ಪಕ್ಷಗಳ ಪ್ರತಿರೋಧವನ್ನು ಲೆಕ್ಕಿಸದೆ ಸ್ಥಳೀಯ ಸಂಸ್ಥೆಗಳ ಅಸ್ತಿತ್ವವನ್ನೇ ನಾಶಗೊಳಿಸಿದ್ದಾರೆ.

ಗ್ರಾಮ ಮಟ್ಟದ ಪ್ರಜಾಪ್ರಭುತ್ವದ ಕುರಿತು- ಪಂಚಾಯತ್ ರಾಜ್ಯದ ಕುರಿತು ಕಾಂಗ್ರೆಸ್ ಎಷ್ಟು ಅನಾಸಕ್ತಿಯನ್ನು ಹೊಂದಿದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಓದುಗರ ಮುಂದಿಡಬಹುದು. 1950 ರಿಂದ 1988 ರವರೆಗೆ ಕಾಂಗ್ರೆಸ್ ಪಕ್ಷದ ಅತಿ ಪ್ರಭಾವ ಶಾಲಿಯಾದ, ದೇಶದಲ್ಲಿಯೇ ಅತ್ಯಂತ ದೊಡ್ಡದಾದ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಸರಕಾರ ಪಂಚಾಯತ್ ಚುನಾವಣೆಗಳನ್ನೇ ನಡೆಸಲಿಲ್ಲ. ಓರಿಸ್ಸಾದಲ್ಲಿ 1967 ರಿಂದಲೂ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ ನಿರಾಕರಿಸಲಾಗಿತ್ತು. ಹೋದ ವರ್ಷ ಜನತಾದಳ ಅಧಿಕಾರಕ್ಕೆ ಬಂದ ನಂತರವೇ ಗ್ರಾಮ ಪಂಚಾಯಿತಿ ಮತ್ತು ಪಂಚಾಯತ್ ಸಮಿತಿಗಳಿಗೆ ಚುನಾವಣೆಗಳು ನಡೆದವು. ಮತ್ತೊಂದು ಕಾಂಗ್ರೆಸ್ಸಿನ ಭದ್ರಕೋಟೆಯಾದ ಮಹಾರಾಷ್ಟ್ರದಲ್ಲಿ ಕಳೆದ 12 ವರ್ಷಗಳ ದೀರ್ಘಕಾಲ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ ಆಗಲಿಲ್ಲ. ಹೀಗೆ ಕಾಂಗ್ರೆಸ್ ಆಡಳಿತೆಯಲ್ಲಿ ದಶಕಗಳ ತನಕ ಚುನಾವಣೆ ನಡೆಸದೆ ಪಂಚಾಯತ್ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಲಾಗಿದೆ.

ಪಂಚಾಯತ್ ವ್ಯವಸ್ಥೆಯ ಕುರಿತು ಕಾಂಗ್ರೆಸ್ ಅನಾಸಕ್ತಿ ಯಾಕೆ?

...ಭೂ ಮಾಲಕರ ...
ಪ್ರದೇಶದಲ್ಲಿಯು ಸ್ವಹಿತ ...
ಸುವ, ಅವರನ್ನೇ ಅವಲ...
ಕಾಂಗ್ರೆಸ್ ಪಕ್ಷವಾಗಿದೆ. ...
ವ್ಯವಸ್ಥೆಯಿಂದಾಗಿ ಈ ...
ಅಪಾಯ ಉಂಟಾಗಬ...
ಯಬಂದದ್ದಾದರೆ ಅಂ...
ಸಂಪೂರ್ಣ ಮುಟ್ಟುಗೋ...
ಕಾಂಗ್ರೆಸ್ ಹೇಸಿಲ್ಲ ಹೇ...
ಬಂಡವಾಳಶಾಹಿ ಭೂಮ...
ಓಡಿತದ ಎಂಥ ಸಮಾಜ...
ಸ್ಥಳೀಯ ಸಂಸ್ಥೆಗಳಿಗೆ ಪ...
ಯಾದ ಸಕಾಲಿಕ ಚುನಾ...
ಆಡಳಿತ ನಡೆಸಲು ...
ದದ್ದಾದರೆ ಅಸ್ತಿತ್ವದಲ್ಲಿರು...
ಶಾಹಿ- ಭೂಮಾಲಕ ವ್ಯ...
ಕುಂಟಾಗುವುದು ಸಹಜ...
ವುದು ಸ್ವಾಭಾವಿಕ. ಯಾ...
ಮುಖಂಡರು ಬೆಳೆದು ...
ಕಾರಕ್ಕಾಗಿ, ಸ್ವಂತ ಹಿತಕ್ಕಾ...
ರಾಜಕೀಯ ನಡೆಸುತ್ತಾರೆ...
ಪರಿಸ್ಥಿತಿ ಬದಲಾಗುತ್ತದೆ. ...
ದಲೇ ಕಾಂಗ್ರೆಸ್ ಆಡಳಿ...
ವ್ಯವಸ್ಥೆಗೆ ಮುಟ್ಟುಗೋಲು...

ಪಶ್ಚಿಮ ಬಂಗಾಳ...

ಇಷ್ಟು ಮಾತ್ರವಲ್ಲ...
ನೇತೃತ್ವದ ಎಡರಂಗ ಸ...

ಕರ್ನಾಟಕದಲ್ಲಿ ಪಂಚಾಯತೀ ರಾಜ್ಯ ವ್ಯವಸ್ಥೆ

1983ರ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಕಾಯಿದೆ

ಆಗಸ್ಟ್ 14, 1985 ರಿಂದ ಈ ಕಾಯ್ದೆ ನಮ್ಮ ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿತ್ತು. ಆದರೆ ಗ್ರಾಮ ಮಟ್ಟದ ಜನರಿಗೆ ಹೆಚ್ಚಿನ ಅಧಿಕಾರ ಕೊಟ್ಟು ಅಧಿಕಾರ ವಿಕೇಂದ್ರೀಕರಣದ ದೊಬ್ಬೆ ಹಾಕುತ್ತಿರುವ ಕೇಂದ್ರ ಕಾಂಗ್ರೆ ಸರಕಾರ ಈ ಮಸೂದೆಗೆ ಮಂಜೂರಾತಿ ನೀಡಲು ಎರಡು ವರ್ಷ ತಡಮಾಡಿತು. ಅನಂತರ ಚುನಾವಣೆ ನಡೆದು ಏಪ್ರಿಲ್ 1, 1987 ರಿಂದ ಜಿಲ್ಲಾ ಪರಿಷತ್-ಮಂಡಲ ಪಂಚಾಯತ್ ವ್ಯವಸ್ಥೆ ಜ್ಯಾರಿ ಬಂತು. ಈ ಕಾಯಿದೆ ಮೂರು ಹಂತದ ಪಂಚಾಯತ್ ವ್ಯವಸ್ಥೆಯನ್ನೊಳಗೊಂಡಿದೆ. ಅದರಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾಯಿತ ಅಂಗಗಳು. ತಾಲೂಕು ಸಮಿತಿ ನೇಮಕಾತಿ ಅಂಗ. ಇವುಗಳಲ್ಲದೆ ಚಿಕ್ಕಪುಟ್ಟ ವ್ಯಾಜ್ಯಗಳನ್ನು ಬಗೆಹರಿಸಲು ನ್ಯಾಯ ಪಂಚಾಯಿತಿ ನೇಮಿಸುವ ವ್ಯವಸ್ಥೆಯನ್ನೂ ಹೊಂದಿದೆ. ಈ ಕಾಯ್ದೆ ಪ್ರಕಾರ ಮಂಡಲ ಪಂಚಾಯತಿಯ ಜನ ಸಂಖ್ಯೆ 8 ರಿಂದ 12 ಸಾವಿರ. ಪ್ರತಿ 400 ಜನ ಸಂಖ್ಯೆಗೆ ಒಬ್ಬ ಸದಸ್ಯ ಪ್ರತಿನಿಧಿಗಳ ಸಂಖ್ಯೆ 10 ರಿಂದ 32 ಅದರ ಅವಧಿ 5 ವರ್ಷ. ಚುನಾಯಿತ ಸದಸ್ಯರಲ್ಲಿ ಮಹಿಳೆಯರಿಗೆ ಶೇ. 25 ರಷ್ಟು ಮೀಸಲಾತಿ. ಮೀಸಲಾತಿಯಲ್ಲಿ ಒಂದು ಸ್ಥಾನ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ಮಹಿಳೆಗೆ. ಹಿಂದುಳಿದ ವರ್ಗದವರು ಚುನಾಯಿತರಾಗದಿದ್ದರೆ ಆ ವರ್ಗದವರಲ್ಲಿ ಇಬ್ಬರನ್ನು ಸದಸ್ಯರನ್ನಾಗಿ ನಾಮಕರಣ ಮಾಡುವ ಹಕ್ಕು ರಾಜ್ಯ ಸರ್ಕಾರಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶೇ. 18 ರಷ್ಟು ಮೀಸಲಾತಿ.

ಮಂಡಲ ಪಂಚಾಯತಿಯ ಹದ್ದಿಯೊಳಗಿರುವ ಪ್ರತಿಗ್ರಾಮದಲ್ಲಿಯೂ ಆರು ತಿಂಗಳಿಗೊಂದು ಸಲ ಗ್ರಾಮ ಸಭೆಯನ್ನು ಮಂಡಲ ಪಂಚಾಯತಿಯವರು ನಡೆಸಬೇಕು. ಗ್ರಾಮದ ಎಲ್ಲ ವ್ಯಕ್ತಿಗಳು ಅದರಲ್ಲಿ ಭಾಗವಹಿಸತಕ್ಕದ್ದು. ಗ್ರಾಮಸಭೆಯಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು, ಅದಕ್ಕೆ ಉತ್ತೇಜನ ನೀಡುವುದು, ಗ್ರಾಮದಲ್ಲಿ ಚರಂಡಿ ತೋಡುವ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು, ಅದಕ್ಕೆ ಮಂಜೂರಾತಿ ನೀಡುವುದು ಸಮುದಾಯ ಕಾರ್ಯಕ್ರಮಗಳ ಸಲುವಾಗಿ ಸ್ವಯಂ ಸೇವೆಗಳನ್ನು ಸಜ್ಜುಗೊಳಿಸುವುದು, ಅವುಗಳಿಗೆ ವಸ್ತು ಮತ್ತು ನಗದು ರೂಪದಲ್ಲಿ ಸಹಾಯ ನೀಡುವುದು, ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೆರವು ನೀಡುವುದು.

ಮಂಡಲ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಹಿಂದಿನ ಜನಗಣತಿಯಲ್ಲಿ ದೊರೆತ ಸಂಖ್ಯೆಯ ಆಧಾರದಲ್ಲಿ ಮಂಡಲ ವ್ಯಾಪ್ತಿಯಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೆ ಐದು ರೂಪಾಯಿ ದರದಂತೆ ಮಂಜೂರ ಮಾಡತಕ್ಕದ್ದು. ಆದರೆ ಸರಕಾರವು ಹೀಗೆ ಮಂಜೂರು ಮಾಡಿದ ಮೊಬಲಗಿನ ಶೇ. 25 ಭಾಗವನ್ನು ಜಿಲ್ಲಾ ಪರಿಷತ್ತಿಗೆ ಸಂದಾಯ ಮಾಡತಕ್ಕದ್ದು.

ಜಿಲ್ಲಾಪರಿಷತ್ತು: ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ಪ್ರತಿಯೊಂದು ತಾಲೂಕಿನಿಂದ ಚುನಾಯಿತರಾಗತಕ್ಕ ಸದಸ್ಯರ ಸಂಖ್ಯೆಯನ್ನು ಪ್ರತಿ 35 ಸಾವಿರ ಜನ ಸಂಖ್ಯೆಗೆ ಒಬ್ಬ ಸದಸ್ಯರಂತೆ ನಿಗದಿಪಡಿಸಲಾಗಿದೆ.

ನ್ಯಾಯಮಂಡಳಿ: 12ನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ಮೊಕದ್ದಮೆಗಳ ವಿಲೇವಾರಿಗಾಗಿ ಸರಕಾರವು ಜಿಲ್ಲಾಪರಿಷತ್ತಿನ ಶಿಫಾರಸಿನ ಮೇರೆಗೆ ಪ್ರತಿಯೊಂದು ಮಂಡಲದಲ್ಲಿ ಮಂಡಲ ಪಂಚಾಯತಿಗಳನ್ನು ರಚಿಸಬಹುದು. ಐದು ಮಂದಿ ಚುನಾಯಿತ ಸದಸ್ಯರನ್ನು ಅದು ಹೊಂದಿರಬೇಕು.

1983ರ ಕಾಯಿದೆಯಂತೆ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತು ಚುನಾಯಿತ ಘಟಕಗಳಾಗಿ ತಾಲೂಕ ಸಮಿತಿ ನೇಮಿಸಿದ ಘಟಕವಾಗಿ, ನ್ಯಾಯ ಮಂಡಳಿ, ಪಂಚಾಯತ್ ಸದಸ್ಯರಿಂದ ನೇಮಿಸಲ್ಪಟ್ಟ ಘಟಕವಾಗಿತ್ತು.

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ನೋಡೋಣ.

1993 ರ ಕಾಯಿದೆ ಮೂರು ಚುನಾಯಿತ ಘಟಕಗಳನ್ನು ಹೊಂದಿದೆ. ಗ್ರಾಮ ಪಂಚಾಯತ್, ತಾಲೂಕ್ ಪಂಚಾಯತ್, ಜಿಲ್ಲಾ ಪಂಚಾಯತ್‌ಗಳು. ಮೂರು ಘಟಕಗಳಿಗೂ ಪಂಚಾಯತ್ ಎಂಬ ಹೆಸರಿಡಲಾಗಿದೆ. ಇದರಲ್ಲಿ ನ್ಯಾಯ ಮಂಡಳಿಯಿಲ್ಲ.

"ಜನರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವ ಮತ್ತು ಗ್ರಾಮಾಣಾಭಿವೃದ್ಧಿ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಇತ್ತೀಚಿನ ಸಂವಿಧಾನ ತಿದ್ದುಪಡಿಗನುಸಾರವಾಗಿ ರಾಜ್ಯದಲ್ಲಿ ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳು ಇರುವ ಮೂರು ಹಂತದ ಪ್‌ಚಾಯತ್ ರಾಜ್ ವ್ಯವಸ್ಥೆಯನ್ನು ಸ್ಥಾಪಿಸಲು, ಪ್ರಸ್ತುತ ಇರುವ ಶಾಸನದ ಬದಲು ಸಮಗ್ರವಾದ ಹೊಸ ಶಾಸನವನ್ನು ತರುವುದು ಅವಶ್ಯವಾದುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1933 ರನ್ನು ತರಲಾಗಿದೆ" ಎಂದು ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

ಗ್ರಾಮಪಂಚಾಯತಿ: ಒಂದು ಗ್ರಾಮ ಪಂಚಾಯತಿ ಐದು ಸಾವಿರದಿಂದ ಏಳು ಸಾವಿರದವರೆಗೆ ಜನಸಂಖ್ಯೆಯನ್ನು ಹೊಂದಬಹುದು ಪಂಚಾಯಿತಿ ಪ್ರದೇಶದ ಜನಸಂಖ್ಯೆಯ ಪ್ರತಿ ನಾಲ್ಕು ನೂರಕ್ಕೆ ಒಬ್ಬ ಸದಸ್ಯ ಆರಿಸಲ್ಪಡಬೇಕು. ಅನುಸೂಚಿತ ಜಾತಿಗಳ ಪಂಚಾಯಿತಿಯ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಶೇ. 15ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಅನುಸೂಚಿತ ಪಂಗಡಗಳ ಸಂದರ್ಭದಲ್ಲಿ ಮೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಮೂರನೇ ಒಂದರಷ್ಟು ಸ್ಥಾನ ಹಿಂದುಳಿದ ವರ್ಗಕ್ಕೆ ಸೇರತಕ್ಕದ್ದು. ಈ ಮೂರು ಮೀಸಲಿಟ್ಟಿರುವ ಸ್ಥಾನಗಳಲ್ಲಿ ಮತ್ತು ಮೀಸಲಿಟ್ಟಿರದ ಸ್ಥಾನಗಳಲ್ಲಿ ಮೂರನೇ ಒಂದರಷ್ಟು ಕಡಿಮೆಯಿಲ್ಲದ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು. 1983ರ ಕಾಯಿದೆಯಂತೆ ಹಿಂದುಳಿದ ವರ್ಗದವರು ಆರಿಸಿಬಾರದಿದ್ದರೆ, ಸರಕಾರದವರು ಆ ವರ್ಗದವರನ್ನು ನಾಮಕರಣ ಮಾಡುವ ಅಧಿಕಾರ ಈ ಕಾಯಿದೆಯಲ್ಲಿಲ್ಲ.

1983ರ ಕಾಯಿದೆಯಂತೆಯೇ ಮಂಡಲ ಪಂಚಾಯಿತಿಗಳು ಆರು ತಿಂಗಳಿಗೊಂದು ಸಲ ಗ್ರಾಮ ಸಭೆಯನ್ನು ಕರೆಯತಕ್ಕದ್ದು. ಗ್ರಾಮ ಸಭೆಯನ್ನು ಕರೆಯಲು ತಪ್ಪಿದ್ದಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯು ಗ್ರಾಮಸಭೆಯನ್ನು ಕರೆಯತಕ್ಕದ್ದು ಎಂಬ ಅಂಶ ಹೊಸ ಕಾಯಿ...

ಕರ್ನಾಟಕದಲ್ಲಿ ಕನಿಷ್ಟ ಕೂಲಿ ಹೋರಾಟಗಳು

ಪುಟ 3ರಿಂದ

ಎದುರಿಸಲು, ಅವರು ಎಲ್ಲಾ ರೀತಿಗಳಲ್ಲಿ, ಹೈಕೋರ್ಟಿನಲ್ಲೂ ಒಡ್ಡ ಬಹುದಾದ ಸವಾಲುಗಳನ್ನು ಎದುರಿಸಲು, ನೋಟಿಫೈ ಆದ ಕೂಲಿದರಗಳನ್ನು ಜ್ಯಾರಿಗೊಳಿಸುವಂತೆ ಮಾಡುವಲ್ಲಿ ನಮ್ಮ ಸಂಘಟನೆಯನ್ನು ಬಲಪಡಿಸಲು ಹೋರಾಟ ಮುಂದುವರಿಸಬೇಕಾಗುತ್ತದೆ.

ಈ ಕೊನೆಯ ಅಂಶ ಸಾಧನೆಯಾಗಬೇಕಾದರೆ ಪ್ರತಿ ವಲಯದಲ್ಲೂ ಸಂಘಟನೆ ಬೇಕಾಗಿದೆ. ಈ ಕೆಲವು ವಲಯಗಳಲ್ಲಿ ನಮ್ಮ ಅನುಭವ, ಹೋರಾಟದ ಇತಿಹಾಸ ವ್ಯಾಪಕವಾಗಿದೆ. ಇಲ್ಲಿ ಇಂತಹ ಒಂದೆರಡು ವಲಯಗಳನ್ನು ಇತರರಿಗೆ ಉದಾಹರಣೆಯಾಗಿ ಹಾಗೂ ಇತರ ವಲಯಗಳು ಇಂತಹ ಅಥವಾ ಇದಕ್ಕಿಂತ ಉತ್ತಮವಾದ ಪ್ರಯತ್ನಗಳನ್ನು ನಡೆಸುವ ಅಗತ್ಯವನ್ನು ಎತ್ತಿ ತೋರಲು ಮುಂದೆ ಕೊಡುತ್ತಿದ್ದೇವೆ.

ಕರ್ನಾಟಕದಲ್ಲಿ ಬೀಡಿ ಕಾರ್ಮಿಕರ ಹೋರಾಟ

ಕರ್ನಾಟಕದಲ್ಲಿ ಬೀಡಿ ಕಾರ್ಮಿಕರ ಹೋರಾಟಕ್ಕೆ 50 ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ. ದೇಶಕ್ಕೆ ಸ್ವಾತಂತ್ರ್ಯ ಸಿಗುವುದಕ್ಕಿಂತಲೂ ಮುಂಚೆಯೇ ಇದು ಆರಂಭವಾಗಿತ್ತು. ಬೀಡಿ ಉದ್ದಿಮೆ ಹಾಗೂ ಬೀಡಿ ಕಾರ್ಮಿಕರ ಆಂದೋಲನದ ಮುಖ್ಯ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆ. ಬೀಡಿ ಕಾರ್ಮಿಕರ ಆಂದೋಲನದ ಉಗಮವಾದದ್ದು ದಕ್ಷಿಣ ಕನ್ನಡದ ಪಕ್ಕದಲ್ಲಿರುವ ಮಲಬಾರಿನಲ್ಲಿ. 1957 ಹಾಗೂ 1967 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿ ಮಂಡಳದ ಆಳ್ವಿಕೆ, ಅಲ್ಲಿಯ ಕಾರ್ಮಿಕ ಆಂದೋಲನದ ಒತ್ತಡದಿಂದಾಗಿ ಮಂಗಳೂರು ಗಣೇಶ್ ಬೀಡಿ ವರ್ಕ್ಸ್ ಕೇರಳದಲ್ಲಿ ತನ್ನ ಘಟಕಗಳನ್ನು ಮುಚ್ಚಿ ಉತ್ಪಾದನೆಯನ್ನು ಮೊದಲು ಕರ್ನಾಟಕಕ್ಕೆ ವರ್ಗಾಯಿಸಿತು, ನಂತರ ತಮಿಳುನಾಡು, ಆಂಧ್ರಗಳಿಗೂ ವರ್ಗಾಯಿಸಿತು.

ಉದ್ದಿಮೆಯ ಬೆಳವಣಿಗೆ, ಕಾರ್ಮಿಕ ಆಂದೋಲನದ ಬೆಳವಣಿಗೆ, ಮಾಲಕರ ತಂತ್ರಗಳು, ಮತ್ತು ಅದಕ್ಕೆ ನಮ್ಮ ಪ್ರತಿತಂತ್ರಗಳು ನಮ್ಮ ಆಂದೋಲನವನ್ನು ಬೆಳೆಸಿದವು. 1962 ರಲ್ಲಿ ಮಂಗಳೂರಿನಲ್ಲಿ ಪ್ರಥಮ ಸಮ್ಮೇಳನ ನಡೆದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಸ್ಥಾಪನೆಗೊಂಡಿತು. ,ನಂತರ 1972ರಲ್ಲಿ ತುಮಕೂರಿನಲ್ಲಿ 1977ರಲ್ಲಿ ಬೆಂಗಳೂರಿನಲ್ಲಿ, 1982ರಲ್ಲಿ ಬಂಟ್ವಾಳದಲ್ಲಿ, ಮಂಗಳೂರಿನಲ್ಲಿ 1986 ರಲ್ಲಿ ಹಾಗೂ ಮತ್ತೆ 1993ರಲ್ಲಿ ಸಮ್ಮೇಳನಗಳು ನಡೆದವು.

'ಬೀಡಿ ಹಾಗೂ ಸಿಗಾರ್ ಕಾರ್ಮಿಕರ (ಉದ್ಯೋಗ ಪರಿಸ್ಥಿತಿ) ಶಾಸನ' 1967 ರಲ್ಲಿ ಬಂತು. ಆದರೆ ರಾಜ್ಯ ಸರಕಾರ ಈ ಶಾಸನದಡಿ ನಿಯಮಗಳನ್ನು ರೂಪಿಸಿದ್ದು 1969 ರಲ್ಲಿ. ನಮ್ಮ ಚಳುವಳಿಗಳಿಂದಾಗಿ 1974ರಲ್ಲಿ ಒಂದು ಒಪ್ಪಂದವಾಯಿತು. ಸಂಬಳವಲ್ಲದೆ, **8.33%** ಬೋನಸ್ ವಾರ್ಷಿಕವಾಗಿ ಕೊಡಲು 5.7 ದರದಲ್ಲಿ ರಜಾದ ಬದಲು ನಗದು ಹಣ, **2.88%** ರಜಾ ಸಂಬಳ ಕೊಡಲು (ಒಟ್ಟು **16.21%**) ಮಾಲಕರು ಒಪ್ಪಿದರು. 1977ರಲ್ಲಿ ಬೀಡಿ ಕಾರ್ಮಿಕರಿಗೆ ಭವಿಷ್ಯ ನಿಧಿ (ಪ್ರಾವಿಡೆಂಟ್ ಫಂಡ್) ಶಾಸನ ಅನ್ವಯವಾಗುವಂತೆ ಮಾಡಲಾಯಿತು. ಇವನ್ನೆಲ್ಲಾ ವಿವಿಧ ಹೋರಾಟಗಳ ಮೂಲಕ ಬೀಡಿ ಕಾರ್ಮಿಕರು ಸರಿಯಾಗಿ ಸಂಘಟಿತರಾಗಿರುವ ಕೆಲವಡೆ ಜ್ಯಾರಿಗೊಳಿಸಲಾಗಿದೆ. 1972ರ ನಮ್ಮ ಒತ್ತಾಯದಿಂದಾಗಿ 'ಬೀಡಿ ಕಾರ್ಮಿಕರ ಕಲ್ಯಾಣನಿಧಿ ಶಾಸನ' ಹಾಗೂ 'ಬೀಡಿ ಕಾರ್ಮಿಕರ ಕಲ್ಯಾಣ ಸೆಸ್ ಶಾಸನ' ಬಂದವು. ಎರಡೂ 1976 ರಲ್ಲಿ ಬಂದವು ಆದರೆ ಅದರ ಪ್ರಯೋಜನ ಪಡೆಯುವಲ್ಲಿ ನಾವು ಯಶಸ್ವಿಯಾಗಲಿಲ್ಲ. ಅದಕ್ಕಾಗಿ ನಮ್ಮ ಕಾರ್ಯಶೈಲಿಯನ್ನು ಬದಲಿಸಬೇಕಾಗಿದೆ. ಹೋರಾಟಗಳನ್ನು ನಡೆಸುವುದರೊಂದಿಗೇ ಸಹಕಾರಿ ಆಂದೋಲನವನ್ನು ರೂಪಿಸಬೇಕಾಗಿದೆ.

ಸಂಬಳದ ಪ್ರಶ್ನೆಯನ್ನು ನಾವು ಸತತವಾಗಿ ಎತ್ತಿಕೊಳ್ಳುತ್ತಿದ್ದೇವೆ. ದಕ್ಷಿಣ ಕನ್ನಡದಲ್ಲಿ ನಮ್ಮ ಶಕ್ತಿಗೆ ಕಾರಣ ಅಲ್ಲಿ ಶಕ್ತಿಶಾಲೀ ಚಳುವಳಿ ನಡೆಸಿದ್ದು. ಅದು ರಾಜ್ಯದ ಇತರೆಡೆಗಳಲ್ಲಿನ ಬೀಡಿ ಕಾರ್ಮಿಕರಿಗೂ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸಿದೆ. ನಿಜವೇತನ ಕಮ್ಮಿಯಾಗದಂತೆ ನೋಡಿಕೊಳ್ಳುವಲ್ಲಿ ಈ ಆಂದೋಲನ ಯಶಸ್ವಿಯಾಗಿದೆ. ಆದರೆ ನಿಜವೇತನದಲ್ಲಿ ಸುಧಾರಣೆಯಾಗುವಂತೆ ಮಾಡಲು ಇನ್ನೂ ಸಾಧ್ಯವಾಗಿಲ್ಲ. ಅದೀಗ ಸದ್ಯದ ಘಟ್ಟದಲ್ಲಿ ನಾವು ಪೂರೈಸಬೇಕಾದ ಕರ್ತವ್ಯ.

1977ರಲ್ಲಿ ಕೂಲಿ ಬೆಲೆಸೂಚ್ಯಂಕದ 260 ಪಾಯಿ... ಟುಗಳಲ್ಲಿ ರೂ. 5.20. 1982ರಲ್ಲಿ ಅದು 370 ಪಾಯಿ... ಟುಗಳಲ್ಲಿ ರೂ. 7-40, 1992ರಲ್ಲಿ 967 ಪಾಯಿಂಟುಗಳ... ರೂ. 19.65 ಹಾಗೂ ಸದ್ಯ 1309 ಪಾಯಿಂಟುಗಳಲ್ಲಿ ರೂ... 26. 31. ಈ ಎಲ್ಲಾ ಅವಧಿಗಳಲ್ಲಿ ತುಟ್ಟಿಭತ್ಯೆ ಹೆಚ್ಚಳ ಪ್ರ... ಪಾಯಿಂಟಿಗೆ 2 ಪೈಸೆ. ಈ ಮಟ್ಟವನ್ನು ಉಳಿಸಿಕೊಂಡ... ನಮ್ಮ ಆಂದೋಲನದ ಗಮನಾರ್ಹ ಶಕ್ತಿಯಿಂದಾಗಿ. ಪ್ರತಿ... ಲವೂ ಸರಕಾರದ ಕೂಲಿ ನಿಗದಿಮಾಡುವ ವ್ಯವಸ್ಥೆ ಸಂಬ... ಮಟ್ಟವನ್ನು ಇಳಿಸುವಂತೆ ಮಾಡುವಲ್ಲಿ ಮಾಲಕರು ಯ... ಸ್ವಿಯಾದರು. ಈ ಮೂಲಕ ಅವರು ಭಾರತೀಯ ಸಂವಿಧಾ... ನದ ನೀತಿಗಳಿಗೆ ವಿರುದ್ಧವಾಗಿ ವರ್ತಿಸಿದರು. ಆದರೆ ನ... ದೃಢ ಹೋರಾಟ ಹಾಗಾಗದಂತೆ, ಸಂಬಳ ಹಿಂದಿದ್ದ ಮಟ್ಟ... ಇಳಿಯದಂತೆ ತಡೆಹಿಡಿಯಿತು.

ಇತ್ತೀಚಿನ ವರ್ಷಗಳಲ್ಲಿ ಬೀಡಿ ಕಾರ್ಮಿಕರ ಗ... ನಾರ್ಹ ಹೋರಾಟಗಳೆಂದರೆ ಎಪ್ರಿಲ್ 1981ರ ಮುಷ್ಕ... ಹಾಗೂ 1989ರ ಮುಷ್ಕರ ಕಾರ್ಯಾಚರಣೆ. 1981ರ... ಮುಷ್ಕರದ ಪರಿಣಾಮವಾಗಿ ಮಾಲಕರು ಕಾರ್ಖಾನೆಗಳ... ಮುಚ್ಚಿದರು. ಆದರೆ ಉತ್ಪಾದಕರ ಸಂಘದ ಅಧ್ಯಕ್ಷರ ನಿ... ಸದ ಮುಂದೆ 3000 ಕಾರ್ಮಿಕರ ಸಾಮೂಹಿಕ ಉಪವಾ... ಈ ಹಗಲು ರಾತ್ರಿಯೆನ್ನದೆ ನಡೆದ ಉಪವಾಸದಲ್ಲಿ ಮಹಿ... ಕಾರ್ಮಿಕರೂ ಭಾಗವಹಿಸಿದ್ದರು. ಕಾರ್ಮಿಕರಿಗೆ 40 ಪೈ... ಹೆಚ್ಚಳ ಮಾತ್ರವೇ ಎಂಬ ಸರ್ಕಾರದ ಪ್ರಸ್ತಾಪಕ್ಕೆ ಬದಲ... 1.ರೂ. ಹೆಚ್ಚಳಕ್ಕೆ ಒಪ್ಪುವಂತೆ ಮಾಡಿದರು. ಈ ಹೋರಾ... ನಡೆದರೂ ಸರಕಾರದ ನೋಟಿಫಿಕೇಶನ್ ಕೆಳಗಿನ ಮ... ದಲ್ಲೇ ಬಂತು. 1989ರ ಹೋರಾಟದಲ್ಲಿ ಮುಖಂಡ...

ಬಂಗಾಲದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಪಂಚಾಯತ್‌ಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟಿದೆ. ನಿಜವಾದ ಅರ್ಥದಲ್ಲಿ ಗ್ರಾಮ ಮಟ್ಟದಲ್ಲಿ ಅಧಿಕಾರ ಹಸ್ತಾಂತರಿಸಿ ಪ್ರಜಾಪ್ರಭುತ್ವವನ್ನು ಉಳಿಸಿದೆ. ಪಶ್ಚಿಮ ಬಂಗಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸ್ಥಿರವಾಗಿ, ಬಲಶಾಲಿಯಾಗಿ ಜೀವಂತ ಉಳಿಯಲು ಮುಖ್ಯಕಾರಣವೇನೆಂದರೆ ಎಡರಂಗ ಸರಕಾರ ಪುರೋಗಾಮಿ ಭೂಸುಧಾರಣೆಯನ್ನು ಜಾರಿಯಲ್ಲಿ ತಂದದ್ದೇ ಆಗಿದೆ. ಗ್ರಾಮಾಂತರ ಪ್ರದೇಶದ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯೇ ಪಂಚಾಯತ್ ರಾಜ್ ವ್ಯವಸ್ಥೆಗೆ ಹೊಸ ಜೀವ ತಂದಂತಾಗಿದೆ. ಮಾತ್ರವಲ್ಲ ಜನರು ಪಾಲ್ಗೊಳ್ಳುವ ಪ್ರಜಾಪ್ರಭುತ್ವದ ಮುಖವಾಣಿಯಾಗಿದೆ. ಸಕಾಲದಲ್ಲಿ ನಡೆಯುವ ಚುನಾವಣೆ ಈ ವ್ಯವಸ್ಥೆಗೆ ಮತ್ತಷ್ಟು ಬಲ ನೀಡಿದೆ.

ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ, ಭೂ ಸುಧಾರಣೆಯ ಜವಾಬ್ದಾರಿಯ ಜೊತೆಯಲ್ಲಿಯೇ ಅಧಿಕಾರ ವಿಕೇಂದ್ರೀಕರಣದ ನಿಜವಾದ ಅರ್ಥದಲ್ಲಿ ಜಿಲ್ಲಾ ಪರಿಷತ್ -ಮಂಡಲ ಪಂಚಾಯತ್‌ಗಳಿಗೆ ಆರೋಗ್ಯ, ಶಿಕ್ಷಣ, ಗ್ರಾಮಾಭಿವೃದ್ಧಿ, ಚಿಕ್ಕ ನೀರಾವರಿ, ಜಿಲ್ಲಾ ಮಟ್ಟದ ಯೋಜನೆ ತಯಾರಿಕೆ ಮತ್ತು ಅದರ ಜ್ಯಾರಿ ಮೊದಲಾದ ಜವಾಬ್ದಾರಿಗಳನ್ನು ವಹಿಸಿಕೊಡಲಾಗಿದೆ.

ಸಂವಿಧಾನದ 64 ನೇ ಮತ್ತು 72ನೇ ತಿದ್ದುಪಡಿಗಳು

ಅಧಿಕಾರ ವಿಕೇಂದ್ರೀಕರಣದ ಕುರಿತು ಮಾತ್ರವಲ್ಲ ತನ್ನ ಆರ್ಥಿಕ ಧೋರಣೆಯಿಂದಾಗಿ ರಾಜೀವಗಾಂಧಿ ಆಡಳಿತೆಯ ಕುರಿತು ಜನರಲ್ಲಿ ಅಸಮಾಧಾನ ಹೆಚ್ಚತೊಡಗಿದಾಗ ಅಂಥ ಪರಿಸ್ಥಿತಿಯಲ್ಲಿ ರಾಜೀವ್‌ಗಾಂಧಿಯವರು ಹಿಂದಿನಂತೆಯೇ ತನ್ನ ಬತ್ತಳಿಕೆಯಿಂದ ಬಾಣ ತೆಗೆದು ತನ್ನ ಸರಕಾರ ಸಂವಿಧಾನದ ತಿದ್ದುಪಡಿತಂದು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಿ ಜನರ ಕೈಗೆ ಅಧಿಕಾರ ಹಸ್ತಾಂತರಿಸುತ್ತೇವೆಂದು ಘೋಷಿಸಿದರು.

1989ರಲ್ಲಿ ಸಂವಿಧಾನಕ್ಕೆ 64ನೇ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಮಂಡಿಸಿ ತಮ್ಮ ಪಕ್ಷದ ಬಹುಮತದಿಂದ ಅದನ್ನು ಪಾಸುಮಾಡಿಸಿಕೊಂಡರು. ರಾಜ್ಯ ಸಭೆಯಲ್ಲಿ ವಿರೋಧ ಪಕ್ಷಗಳ ಬಹುಮತದ ವಿರೋಧದಿಂದಾಗಿ ಅದು ಬಿದ್ದು ಹೋಯಿತು. ಸಿಪಿಐ(ಎಂ) ಪಕ್ಷವನ್ನೊಳಗೊಂಡ ಇತರ ಎಲ್ಲಾ ವಿರೋಧ ಪಕ್ಷಗಳು 64ನೇ ತಿದ್ದುಪಡಿಯನ್ನು ಬಲವಾಗಿ ವಿರೋಧಿಸಿದವು. ಈ ತಿದ್ದುಪಡಿ ಮೂಲಕ ರಾಜೀವ್ ಗಾಂಧಿಯವರು 'ಪಂಚಾಯತ್ ರಾಜ್ಯ'ದ ಹೆಸರಲ್ಲಿ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಮೇಲೆ ಇರತಕ್ಕ ರಾಜ್ಯ ಸರಕಾರದ ಹಕ್ಕುಗಳನ್ನು ಅತಿಕ್ರಮಿಸಿ,

ಪುಟ 6ಕ್ಕೆ

...ಮ ಸಭೆಯಲ್ಲಿ ಏನು ಮಾಡಬೇಕೆಂಬ ...ಬದಲಾವಣೆಯಿಲ್ಲ.

...ಂಚಾಯತ್: ತಾಲೂಕಿನ ಜನ... ಸಾವಿರಕ್ಕೆ ಒಬ್ಬನಂತೆ ಚುನಾಯಿತ ಸದ... ಡಿರಬೇಕು. ಒಂದು ಲಕ್ಷಕ್ಕಿಂತ ಹೆಚ್ಚಿ... ಯಿರುವ ತಾಲೂಕುಗಳಿಗೆ ಕನಿಷ್ಠ 11 ...ಯಿತ ಸದಸ್ಯರಿರತಕ್ಕದ್ದು. ಮೀಸಲಾತಿ. ... ಮಹಿಳೆಯರಿಗೆ ಗ್ರಾಮ ಪಂಚಾಯಿತಿ... ಯಮವನ್ನೇ ಇಲ್ಲಿಯೂ ಅನುಸರಿಸಲಾ...

...ನಾಯಿತ ಸದಸ್ಯರಲ್ಲದೆ ತಾಲೂಕು... ನಲ್ಲಿ ಆ ತಾಲೂಕಿನ ಲೋಕಸಭಾ ಸದ... ನಸಭಾ ಸದಸ್ಯರು, ರಾಜ್ಯಸಭಾ ಮತ್ತು ...ನ ಪರಿಷತ್ತಿನ ಸದಸ್ಯರು, ಅಸಿಸ್ಟೆಂಟ್ ...ಟಿ ಎತ್ತುವ ಮೂಲಕ ನಿರ್ಧರಿಸುವಂತೆ ...ದ ಅವಧಿಗೆ, ಸರದಿಯ ಪ್ರಕಾರ ತಾಲೂ... ಚಾಯಿತಿಗಳ ಅಧ್ಯಕ್ಷರುಗಳ ಸಂಖ್ಯೆಯ ...ದರಷ್ಟು ಅಧ್ಯಕ್ಷರುಗಳು ತಾಲೂಕು ...ು ಸದಸ್ಯರಾಗುತ್ತಾರೆ.

...ಕ್ಷ, ಉಪಾಧ್ಯಕ್ಷರ ...ವಣೆಯಲ್ಲಿ ಮೀಸಲಾತಿ

...ು ಪಂಚಾಯಿತಿ ಅಧ್ಯಕ್ಷ ಮತ್ತು ಉಪಾ... ವಣೆಯಲ್ಲಿ ಮೀಸಲಾತಿ ಪದ್ಧತಿ ತರಲಾ...

...ತಿಯು ಅನುಸೂಚಿತ ಜಾತಿಗಳಿಗಾಗಿ ... ಅಧ್ಯಕ್ಷ ಮತ್ತು ಉಪಾದ್ಯಕ್ಷ ಹುದ್ದೆಗಳ ...ು ಶೇ. 15ಕ್ಕಿಂತ ಕಡಿಮೆ ಇರತಕ್ಕದಲ್ಲ, ಅನುಸೂಚಿತ ಪಂಗಡಗಳಿಗಾಗಿ ಶೇ. 3 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ, ಮೂರನೇ ಒಂದರಷ್ಟು ಹುದ್ದೆಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡತಕ್ಕದ್ದು. ಮತ್ತು ಇವುಗಳಲ್ಲಿ ಮೂರನೇ ಒಂದರಷ್ಟು ಕಡಿಮೆ ಇಲ್ಲದಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು. ಈ ರೀತಿ ಮೀಸಲಿರಿಸಿರುವ ಹುದ್ದೆಗಳನ್ನು ಬೇರೆ ಬೇರೆ ತಾಲೂಕು ಪಂಚಾಯಿತಿಗಳಿಗೆ ಸರದಿ ಪ್ರಕಾರ ಹಂಚಿಕೆ ಮಾಡತಕ್ಕದ್ದು.

ಜಿಲ್ಲಾ ಪಂಚಾಯಿತಿ: ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳನ್ನು ಹೊರತುಪಡಿಸಿ ಪ್ರತಿಯೊಂದು ತಾಲೂಕಿನಿಂದ 40 ಸಾವಿರ ಜನಸಂಖ್ಯೆಗೆ ಒಬ್ಬನಂತೆ ಕೊಡಗು, ಉತ್ತರ ಕನ್ನಡ, ಮತ್ತು ಚಿಕ್ಕಮಗಳೂರು ಜಿಲ್ಲೆಯಿಂದ ಮೂವತ್ತು ಸಾವಿರ ಜನಸಂಖ್ಯೆಗೆ ಒಬ್ಬನಂತೆ ಆರಿಸಲ್ಪಟ್ಟ ಸದಸ್ಯರು, ಜಿಲ್ಲಾ ಪಂಚಾಯಿತಿ ಸದಸ್ಯರಾಗುತ್ತಾರೆ. ಮೀಸಲಾತಿ ಮತ್ತು ಮಹಿಳೆಯರ ಸಂಖ್ಯೆ ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಷ್ಟೇ ಇರುತ್ತದೆ. ತಾಲೂಕು ಪಂಚಾಯಿತಿಗಳಂತೆಯೇ ಮೀಸಲಾತಿ ಮತ್ತು ಮಹಿಳೆಯರ ಸ್ಥಾನಗಳನ್ನು ಸರದಿಯ ಪ್ರಕಾರ ಜಿಲ್ಲೆಯಲ್ಲಿರುವ ವಿವಿಧ ಚುನಾವಣಾ ಕ್ಷೇತ್ರಗಳಿಗೆ ಹಂಚಿಕೆ ಮಾಡತಕ್ಕದ್ದು.

ತಾಲೂಕು ಪಂಚಾಯಿತಿಯಲ್ಲಿರುವಂತೆಯೇ ಅನುಸೂಚಿತ ಜಾತಿಗಳಲ್ಲಿರುವ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇ. 15 ರಷ್ಟು, ಅನುಸೂಚಿತ ಪಂಗಡಗಳಿಗೆ ಶೇ. 3 ರಷ್ಟು, ಮೂರನೇ ಒಂದರಷ್ಟು ಹಿಂದುಳಿದ ವರ್ಗಗಳಿಗೆ, ಮೂರನೇ ಒಂದರಷ್ಟು ಮಹಿಳೆಯರಿಗೆ ಮೀಸಲಿಡತಕ್ಕದ್ದು. ಮೀಸಲಿರಿಸಿರುವ ಈ

ಪುಟ 6ಕ್ಕೆ

ವಿಶ್ವಬ್ಯಾಂಕ್ ಎದುರು ಮತ್ತೆ ಭಾರತದ ಬಿಕ್ಷಾಪಾತ್ರೆ

-- ಜಿ.ಎಸ್. ಮಣಿ



ನರಸಿಂಹರಾವ್ ಸರಕಾರದ 30ನೇ ತಿಂಗಳಲ್ಲಿ

ಭಾರತ ಮತ್ತೆ ವಿಶ್ವಬ್ಯಾಂಕಿಗೆ ಸಲಾಮು ಹೊಡೆಯುತ್ತಿದೆ. ಐನೂರು ಮಿಲಿಯ ಡಾಲರುಗಳ ಸಾಲಕ್ಕಾಗಿ ಭಾರತ ವಿಶ್ವಬ್ಯಾಂಕ್ ಅನ್ನು ಯಾಚನೆ ಮಾಡುತ್ತಿದೆ. ಈ ಯಾಚನೆಯೆಂದರೆ ಬರೀ ಒಂದು ಅರ್ಜಿಯಲ್ಲ. ಇದು ಆರ್ಥಿಕ ಅವಮಾನದ ಒಂದು ಸರಣಿ. ನಮ್ಮ ಸಾರ್ವಭೌಮತೆಯನ್ನೇ ಗೇಲಿ ಮಾಡುವ ಪ್ರಕ್ರಿಯೆ. ಹೇಗೆ ಎಂದಿರಾ?

ವಿಶ್ವಬ್ಯಾಂಕ್ ಸಾಲಕ್ಕಾಗಿ ಬರುವ ಯಾವುದೇ ದೇಶಕ್ಕೂ ತನ್ನ ಷರತ್ತುಗಳನ್ನು ವಿಧಿಸದೇ ಸಾಲ ನೀಡುವುದಿಲ್ಲ. ಈ ಷರತ್ತುಗಳು ದೇಶದ ಸಾರ್ವಭೌಮತ್ವವನ್ನೇ ಒತ್ತೆಯಿಡುವಂತೆ ಮಾಡುತ್ತವೆ. ಈಗ ಸದ್ಯಕ್ಕೆ 500 ಮಿಲಿಯ ಡಾಲರುಗಳ ಸಾಲ ಮಂಜೂರು ಮಾಡಲು ವಿಶ್ವಬ್ಯಾಂಕ್ ನಮ್ಮ ಹಣಕಾಸು ವಲಯದ ಸುಧಾರಣೆಯ ಷರತ್ತನ್ನು ಹಾಕುತ್ತಿದೆ. ಈ ಸಾಲದ ಹೆಸರೇ ಫೈನಾಂಷಿಯಲ್ ಸೆಕ್ಟರ್ ಎಡ್ಜಸ್ಟ್‌ಮೆಂಟ್ ಲೋನ್ (ಅಂದರೆ ಹಣಕಾಸು ವಲಯದ ಹೊಂದಾಣಿಕೆ ಸಾಲ -FSAL)

ಹಣಕಾಸು ವಲಯದ ಸುಧಾರಣೆ/ಉದಾರೀಕರಣದ ಎಂದರೆ ಖಾಸಗಿ ಬ್ಯಾಂಕುಗಳಿಗೆ ಮುಕ್ತ ಅವಕಾಶ ನೀಡುವುದು ಪರೋಕ್ಷವಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಕೊಲೆ ಮಾಡುವುದು, ಬ್ಯಾಂಕುಗಳ ವ್ಯವಹಾರ /ವಹಿವಾಟಿನ ಮೇಲಿನ ನಿರ್ಬಂಧ ತೆಗೆದುಹಾಕುವುದು, ವಿದೇಶೀ ಬಂಡವಾಳಿಗರಿಗೆ ಭಾರತೀಯ ಬ್ಯಾಂಕುಗಳಲ್ಲಿ ಪಾಲು ಹೊಂದಲು ಅವಕಾಶ ಕೊಡುವುದು ಇವೆಲ್ಲ ಸೇರಿರುತ್ತವೆ.

ವಿಶ್ವಬ್ಯಾಂಕ್‌ನ ಭಾರತದಲ್ಲಿನ ಅಧಿಕಾರಿ ಒಕ್ಷೆಮೆನಾಲ್ ಹೇಳುತ್ತಾನೆ "ಭಾರತ ಸರ್ಕಾರ ಏನು ಮಾಡುವುದೆಂದು ನಾವು ಕಾದು ನೋಡುತ್ತಿದ್ದೇವೆ"

ಹೇಗಿದೆ ಸಾಲಗಾರರ ಜಾಲ?

ಮುಚ್ಚಲಿರುವ ಬದುಕಿನ ಅವಕಾಶಗಳು

ಈ ಅವಕಾಶಗಳೇನು ಗೊತ್ತೆ? ಬ್ಯಾಂಕ್ ಶಾಖೆಗಳು. ದೇಶದಾದ್ಯಂತ ಐನೂರು ಬ್ಯಾಂಕ್ ಶಾಖೆಗಳು ಇದೇ ಡಿಸೆಂಬರ್ ಕೊನೆಯ ವೇಳೆಗೆ ಅಥವಾ ಮುಂದಿನ ಮಾರ್ಚ್ ಕೊನೆಯ ವೇಳೆಗೆ ಮುಚ್ಚಲಿವೆಯಂತೆ. ಕಾರಣ?

ಈ ಶಾಖೆಗಳು ನಷ್ಟದಲ್ಲಿವೆಯಾದ್ದರಿಂದ. ಹಿಂದೆ 'ವರ್ಗ ಬ್ಯಾಂಕಿಂಗ್' ಎಂದರೆ ಶ್ರೀಮಂತ ವರ್ಗಗಳಿಗೆ ಬ್ಯಾಂಕುಗಳು ಮೀಸಲಾಗಿದ್ದವು ಆದರೆ 1969 ರ ನಂತರ ಜನಸಮೂಹಗಳಿಗೆ ಬ್ಯಾಂಕಿಂಗ್ ಸೌಲಭ್ಯಗಳು ದೊರಕುವಂತಾದವು. ಈಗ ಶಾಖೆಗಳ ಮುಚ್ಚುವಿಕೆ ಪ್ರಾರಂಭವಾದರೆ ಮತ್ತೆ 'ವರ್ಗ ಬ್ಯಾಂಕಿಂಗ್' ಬರುವ ಸೂಚನೆ ಅದು.

ಮುಚ್ಚಲಿರುವ ಈ 500 ಶಾಖೆಗಳಲ್ಲಿ ಸರಾಸರಿ ಪ್ರತಿ ಶಾಖೆಯಲ್ಲಿ ಹತ್ತು ಜನ ನೌಕರರಿದ್ದಾರಂತೆ. ಅಂದರೆ ಐದು ಸಾವಿರ ನೌಕರರ ಭವಿಷ್ಯ ಡೋಲಾಯಮಾನ. ಪ್ರತಿ ಶಾಖೆ ಹತ್ತು ಸಾವಿರ ಜನರಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುತ್ತದೆ ಎಂದು ಕೊಂಡರೂ ಸುಮಾರು 50 ಲಕ್ಷ ಜನ ಬ್ಯಾಂಕಿಂಗ್ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಹಣಕಾಸು ವಲಯದ ಸುಧಾರಣೆ ಪ್ರಾರಂಭವದಾದ ಕೂಡಲೇ ಇಂತಹ ಭಯಂಕರ ಪರಿಣಾಮವೆಂದರೆ ಮುಂದೆ ಹೆಚ್ಚಿನ ಸುಧಾರಣಾ ಕ್ರಮಗಳನ್ನು ಸರ್ಕಾರ ಕೈಗೊಂಡರೆ ಇನ್ನೆಂತಹ ಘೋರ ಪರಿಣಾಮಗಳನ್ನು ದುಡಿವ ಬಡಜನತೆ ಎದುರಿಸಬೇಕೋ?

ಹಣಕಾಸು ಖೋತಾ ಎಂಬ ಭೂತ

ವಿಶ್ವಬ್ಯಾಕ್ ಮತ್ತು ಐ.ಎಂ.ಎಫ್ ಪ್ರಕಾರ ಈ ಖೋತಾ ಬಜೆಟ್‌ಗಳಿಂದಾಗಿ ದೇಶದಲ್ಲಿ ಹಣದುಬ್ಬರ ಉಂಟಾಗುತ್ತದೆ. ಅದಕ್ಕಾಗಿ ಸರ್ಕಾರಿ ವೆಚ್ಚಗಳನ್ನು ಕಡಿಮೆ ಮಾಡಬೇಕೆಂಬ ಷರತ್ತನ್ನು ಅವು ಸಾಲ ನೀಡುವಾಗ ಹಾಕಿದವು. ನಮ್ಮ ಕೇಂದ್ರ ಸರ್ಕಾರ ಈ ಷರತ್ತುಗಳನ್ನು ಒಪ್ಪಿಕೊಂಡಿತು.

ಬ್ಯಾಂಕ್-ಫಂಡ್‌ಗಳು ಈ ಹಣಕಾಸು ಖೋತಾ ಕಡಿಮೆ ಮಾಡಲು ಗುರಿಯನ್ನು ನಿಗದಿಪಡಿಸಿದವು. ಆ ಪ್ರಕಾರ ಈ ವೇಳೆಗೆ ಹಣಕಾಸು ಖೋತಾ ಶೇ. 4.7 ಕ್ಕೆ ಇಳಿಯಬೇಕಾಗಿತ್ತು. ಆದರೆ ಅದು ಇಳಿಯಲಿಲ್ಲ.

ಇತ್ತೀಚಿನ ಅಧ್ಯಯನಗಳ ಪ್ರಕಾರ ಈ ವರ್ಷದ ಕೊನೆಯ ವೇಳೆಗೆ ಈ ಖೋತಾ ಶೇ. 6.2ಕ್ಕೆ ಏರಲಿದೆಯಂತೆ.

ಸರ್ಕಾರ ಈ ಖೋತಾ ಕಡಿಮೆ ಮಾಡಲು ಅನುಸರಿಸುತ್ತಿರುವ ಕ್ರಮವೆಂದರೆ ಸಹಾಯಧನಗಳನ್ನು ಕಡಿಮೆ ಮಾಡುವುದು ಅಂದರೆ ರೈತರ ರಸಗೊಬ್ಬರ, ಜನತೆಯ ಆಹಾರ, ಸೀಮೆಎಣ್ಣೆ, ಅಡಿಗೆ ಅನಿಲ ಇತ್ಯಾದಿಗಳ ಮೇಲೆ ನೀಡುವ ಸಹಾಯಧನವನ್ನು ತೆಗೆದುಹಾಕುವುದು. ಈಗಾಗಲೇ ಸಹಾಯಧನಗಳನ್ನು ಕಡಿತ ಮಾಡಿರುವ ಸರ್ಕಾರ ಇನ್ನೂ ಹೆಚ್ಚಿನ ಕಡಿತ ಮಾಡಿದರೆ ಅದರ ಪರಿಣಾಮ ಊಹಿಸಿಕೊಳ್ಳಿ, ಮುಂದೆ ಬಡವರು ಖಾಯಂ ಉಪವಾಸ ಮಾಡುವ ಪರಿಸ್ಥಿತಿ ಬರಬಹುದೇ?

ಭಾರತಕ್ಕೆ ಹರಿದು ಬರಲಿರುವ ವಿ(ಷ)ದೇಶಿ ಬಂಡವಾಳ

ಆರ್ಥಿಕ ಉದಾರೀಕರಣದ ಜೊತೆಗೆ ವಿದೇಶೀ ಬಂಡವಾಳ ಹರಿದು ಬರಬೇಕು ಮತ್ತು ಆದ್ದರಿಂದ ದೇಶದ ಆದಾಯ ಹೆಚ್ಚಿ ದೇಶ ಪ್ರಗತಿ ಹೊಂದಬೇಕು. ಇದು ಸ್ಥೂಲವಾಗಿ ಉದಾರೀಕರಣದ ಉದ್ದೇಶ.

ಅಮೇರಿಕದ ಟೆಲಿವಿಷನ್ ಸಂಸ್ಥೆ ಸಿಎನ್‌ಎನ್‌ನ (ಇರಾಕ್ ಯುದ್ಧವನ್ನು ಪ್ರಸಾರ ಮಾಡಿದ ಸಂಸ್ಥೆ) ಅಧಿಕಾರಿ ಡಾಬ್ಸ್, ಎನ್ನುವಾತ ಅಮೇರಿಕದ ಬಂಡವಾಳಿಗರು ಭಾರತದಲ್ಲಿ ಹಣ ಹೂಡುವ ಆಸಕ್ತಿ ಹೊಂದಿದ್ದಾರೆ ಎಂದಿದ್ದಾನೆ. ಆದರೆ ಆರ್ಥಿಕ ಸುಧಾರಣೆಯನ್ನು ತ್ವರಿತವಾಗಿ ಮಾಡುತ್ತಿಲ್ಲವಾದ್ದರಿಂದ ಅವರು ಹಿಂದೇಟು ಹಾಕುತ್ತಿದ್ದಾರಂತೆ.

ಆತನ ಪ್ರಕಾರ ವಿದೇಶ ಬಂಡವಾಳ ಹೂಡಿಕೆಯ ಮೇಲಿನ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿದರೆ ಈ ವಿದೇಶಿ ಬಂಡವಾಳ ದೊಡ್ಡ ಪ್ರಮಾಣದಲ್ಲಿ ಹರಿದು ಬರುತ್ತದಂತೆ.

ಯಾವುದೇ ನಿರ್ಬಂಧವಿಲ್ಲದೆ ಬರುವ ಬಂಡವಾಳಕ್ಕೆ ಒಂದೇ ಉದ್ದೇಶವಿರುತ್ತದೆ. ಅದು ಲಾಭಬಡುಕತನ. ನಮ್ಮ ದೇಶೀ ಉದ್ದಿಮೆಗಳನ್ನು ನೆಲಸಮ ಮಾಡಿ ನಮ್ಮ ಮಾರುಕಟ್ಟೆಗಳನ್ನು ಆಕ್ರಮಿಸಿ ಹಂತಹಂತವಾಗಿ ನಮ್ಮ ಆರ್ಥಿಕ ವ್ಯವಸ್ಥೆಯನ್ನೇ ನಾಶಮಾಡುವುದು ಈ ಬಂಡವಾಳದ ಉದ್ದೇಶ.

ಅಲ್ಲವೆ ಇದು ವಿಷ ಬಂಡವಾಳ?

ರಿಸರ್ವ್ ಬ್ಯಾಂಕ್ ಗವರ್ನರರ ಎಚ್ಚರಿಕೆ

ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಡಾ.ಸಿ. ರಂಗರಾಜನ್ ಅಲ್ಪಾವಧಿ ಸಾಲ ತೆಗೆದು ಪಡೆಯುವುದರ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ವ್ಯಾಪಾರ ಬಾಕಿ ತೀರಿಸುವ ಸಲುವಾಗಿ ಅಲ್ಪಾವಧಿ ಸಾಲ ಪಡೆದ ಯಾವುದೇ ಅಭಿವೃದ್ಧಿಶೀಲ ದೇಶ ಉದ್ಧಾರವಾಗಿಲ್ಲ ಎಂದಿದ್ದಾರೆ ಅವರು.

ಭಾರತ ಸರ್ಕಾರ ಸಿಗಬಹುದಾದ ಎಲ್ಲ ಸಾಲಗಳನ್ನು ಪಡೆಯಲು ತುದಿಗಾಲ ಮೇಲೆ ನಿಂತಿರುವಾಗ ಮತ್ತು ಐ.ಎಂ.ಎಫ್. ವಿಶ್ವಬ್ಯಾಂಕುಗಳ ಎಲ್ಲ ಷರತ್ತುಗಳಿಗೆ ಮಣಿಯುತ್ತಿರುವಾಗ ಈ ಮಹತ್ವದ ಎಚ್ಚರಿಕೆ ಬಂದಿದೆ.

ಶೇರು ಹಗರಣ

ಶೇರು ಹಗರಣದ ವಿಚಾರಣೆ ನಡೆಸುತ್ತಿದ್ದ ಜಂಟಿ ಸಂಸದೀಯ ಸಮಿತಿ ಇನ್ನು ಕೆಲವೇ ದಿನಗಳಲ್ಲಿ ತನ್ನ ವರದಿಯನ್ನು ಸಲ್ಲಿಸಲಿದೆಯಂತೆ. ಇತ್ತೀಚಿನ ದಶಕಗಳಲ್ಲಿ ಅತ್ಯಂತ ದೊಡ್ಡದಾದ ಈ ಹಗರಣದ ವಿಚಾರಣೆ ನಿಜಕ್ಕೂ ಬಹಳ ಸಮಯ ತೆಗೆದುಕೊಂಡಿದೆ.

ಸಂಸದೀಯ ಸಮಿತಿ ಹಗರಣದಲ್ಲಿ ಪಾಲುದಾರರಾದ ವ್ಯಕ್ತಿಗಳ ಜವಾಬ್ದಾರಿಯನ್ನು ನಿಗದಿಪಡಿಸುವ ವಿಚಾರದಲ್ಲಿದೆ. ಹಗರಣದಲ್ಲಿ ಪಾತ್ರವುಳ್ಳ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ಪ್ರಕಟಿಸಲಾಗುವುದಂತೆ.

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಈ ವರದಿ ಮಂಡಿತವಾಗುತ್ತದೆ.

ಉಪವಾಸ ಸತ್ಯಾಗ್ರಹ ಹಾಗೂ ಸಾಮೂಹಿಕ ಕಾರ್ಯಾಚರಣೆಯಿಂದಾಗಿ ಹೆಚ್ಚಳ ದರ 80 ಪೈಸೆಗೇರಿತು.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕರು ಪಡೆದುಕೊಳ್ಳಲು ಸಾಧ್ಯವಾದ ಹೆಚ್ಚಳವನ್ನು ಹರಿಹರದಾಚೆಗೆ ಜ್ಯಾರಿ ಮಾಡಲಿಲ್ಲ. ಹುಬ್ಬಳ್ಳಿಯ ದರ್ಬಾರ್ ಬೀಡಿ ಕಾರ್ಖಾನೆಯಲ್ಲಿ ಸರ್ಕಾರ ಪ್ರಕಟಿಸಿದ ಕನಿಷ್ಠ ಕೂಲಿಯನ್ನು ಕೊಡುತ್ತಿರಲಿಲ್ಲ. ಅಲ್ಲಿ ತಮ್ಮ ಮುಖಂಡರ ನೀತಿಯನ್ನು ವಿರೋಧಿಸಿದ ಎ.ಐ.ಟಿ.ಯು.ಸಿಯ ಹತ್ತು ಕಾರ್ಯಕರ್ತರನ್ನು ವಜಾ ಮಾಡಲಾಯಿತು. ಆ ಕಾರ್ಖಾನೆಯಲ್ಲಿ ನಮ್ಮ ನೇತೃತ್ವದ ಹೋರಾಟದಿಂದ ಆ ಕಾರ್ಮಿಕರನ್ನು ಮತ್ತೆ ತೆಗೆದುಕೊಳ್ಳಲಾಯಿತು. ಬೆಳಗಾವಿ ಪ್ರದೇಶದ ಜಿಲ್ಲಾ ಕಾರ್ಮಿಕ ಆಯುಕ್ತರು ಈ ಬಗ್ಗೆ ಆಜ್ಞೆ ಹೊರಡಿಸಿದರು. ಅಲ್ಲಿ ಕನಿಷ್ಠ ಕೂಲಿಯನ್ನು ಜ್ಯಾರಿಮಾಡಿಸಲಾಯಿತು. 1974ರ ಬೋನಸ್ ಒಪ್ಪಂದವೂ ಆಯಿತು. ನಂತರ ಅಲ್ಲಿ ನಡೆದ ಹೋರಾಟ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಡುವಷ್ಟು ಸಮಾನ ಸಂಬಳ ಕೊಡಬೇಕೆಂಬ ಬಗ್ಗೆ ಚಳುವಳಿ ಆರಂಭಿಸಲಾಯಿತು.

ಹುಬ್ಬಳ್ಳಿಯಲ್ಲಿನ ಕೋಮುಘರ್ಷಣೆಗಳಿಂದಾಗಿ ಆಂದೋಲನ ಬೆಂಗಳೂರಿಗೆ ವರ್ಗವಾಯಿತು. ನೂರಾರು ಕಾರ್ಮಿಕರು ಮಳೆ, ಹಸಿವನ್ನು ಲೆಕ್ಕಿಸದೆ ಧರಣಿ ಕೂತರು. ಬಂಧನಕ್ಕೊಳಗಾಗಿ ಜೈಲಿನೊಳಗೆ ಇರುವುದಾಗಿ ಬೆದರಿಕೆ ಹಾಕಿ ಕನಿಷ್ಠ ಕೂಲಿ ನೋಟಿಫಿಕೇಶನ್‌ನ್ನು ಅವರು ಪಡೆದರು.

ಬೀಡಿ ಕಾರ್ಮಿಕರ ಆಂದೋಲನ ಕೋಲಾರದಲ್ಲೂ ಇತ್ತು, ಹರಿಹರ ತುಮಕೂರು- ಕುಣಿಗಲ್ ಇತ್ಯಾದಿ ಕಡೆಯೂ ಬಲವಾಗಿ ಇತ್ತು. ಈಗ ಅದು ಧಾರವಾಡ, ಬೆಳಗಾವಿ ಜಿಲ್ಲೆಗಳಿಗೆ ಬಿಜಾಪುರ ಜಿಲ್ಲೆಗೂ ಹಬ್ಬಲಾರಂಭಿಸಿದೆ. ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಮತ್ತೆ ಜೀವ ತುಂಬಿಕೊಳ್ಳುತ್ತಿದೆ.

ಬೀಡಿ ಕಾರ್ಮಿಕರು ಸತತವಾಗಿ ಕಾಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಬೇಕೆಂದು, ಸರಾಸರಿಗಿಂತ ಹೆಚ್ಚಿನ ರಿಜೆಕ್ಷನ್‌ಗಳ ವಿರುದ್ಧ, ಗ್ಯಾರಂಟಿ ಕನಿಷ್ಠ ಕೂಲಿಗಾಗಿ, ಕೆಲಸದ ಸರಿಯಾದ ದಾಖಲೆ ಹಾಗೂ ಇತರ ಸೌಲಭ್ಯಗಳಿಗಾಗಿ ಸತತವಾಗಿ ಹೋರಾಟ ನಡೆಸಿಕೊಂಡೇ ಬಂದಿದ್ದಾರೆ. ಅವರು ಈ ಎಲ್ಲಾ ವಲಯಗಳಲ್ಲಿ ತಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಬೇಕು ಹಾಗೂ ಈ ಸವಾಲುಗಳನ್ನು ಎದುರಿಸಲು ಮತ್ತು ಕಲ್ಯಾಣ ನಿಧಿಯ ಪ್ರಯೋಜನ ಪಡೆಯಲು ಸಹಕಾರಿ ಆಂದೋಲನವನ್ನೂ ಸಂಘಟಿಸಬೇಕು.

ಈ ಆಂದೋಲನ ಅಖಿಲ ಭಾರತ ಮಟ್ಟದಲ್ಲೂ, ಸ್ವತಂತ್ರವಾಗಿ ಅಸಂಘಟಿತ ವಲಯದ ಕಾರ್ಮಿಕ ಆಂದೋಲನದ ಸಂಪರ್ಕದೊಂದಿಗೆ ಬೆಳೆಯುತ್ತಿದೆ.

ಇತರ ಕಾರ್ಮಿಕರ ಹೋರಾಟ ಮತ್ತು ಹೋರಾಟದ ಅಭಾವ

ಇತ್ತೀಚೆಗೆ ಬೆಂಗಳೂರಿನ ಹೋಟೇಲ್ ಕಾರ್ಮಿಕರ ಹೋರಾಟದ ಬಗ್ಗೆ ಎರಡನೇ ಅಧ್ಯಾಯದಲ್ಲಿ ಹೇಳಲಾಗಿದೆ. ಬೀಡಿ ಕಾರ್ಮಿಕರ ಆಂದೋಲನದಂತೆ ಇದೂ ಸಾಕಷ್ಟು ಹಳೆಯದು. ಬೆಂಗಳೂರಿನಲ್ಲಿ 1960ರ ದಶಕದಲ್ಲೇ ಬೆಂಗಳೂರು ಡಿಸ್ಟ್ರಿಕ್ಟ್ ಹೋಟೇಲ್ ವರ್ಕರ್ಸ್ ಯೂನಿಯನ್ ಸಾಕಷ್ಟು ಚಟುವಟಿಕೆ ನಡೆಸಿತ್ತು. ಅದರ ಕಾರ್ಯಾಚರಣೆಯಿಂದಾಗಿ 1964ರಲ್ಲಿ ಕನಿಷ್ಠ ಕೂಲಿ ಪ್ರಕಟಣೆ ಹಾಗೂ ಆದರಿಂದಾಗಿ ಸುಪ್ರೀಂ ಕೋರ್ಟಿನಲ್ಲಿ ಚಂದ್ರಭವನ ಕೇಸ್ ನಡೆಯಿತು. 1967ರಲ್ಲಿ ಮತ್ತೊಮ್ಮೆ ಮಾಂಸಾಹಾರಿ ಹೋಟೆಲುಗಳ ಕಾರ್ಮಿಕರು ಆಂದೋಲನಕ್ಕೆ ಬಂದರು. ಪೋಲೀಸರು ಯೂನಿಯನ್ ಕಛೇರಿ ಪ್ರವೇಶಿಸಿ ಅಧ್ಯಕ್ಷರೂ ಸೇರಿದಂತೆ ಪ್ರತಿಯೊಬ್ಬರಿಗೂ ಹೊಡೆದರು. ಆದರೆ ಯೂನಿಯನ್ ತನ್ನ ಚಟುವಟಿಕೆಗಳನ್ನು ಮುಂದುವರೆಸಿತು. ನಂತರ ಅದು ಐ.ಸಿ.ಪಿ. (ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ) ಕೈಗೆ ಹೋಯಿತು ಈಗಿರುವ ಹೋಟೇಲ್ ಕಾರ್ಮಿಕರ ಸಂಘ 1978-79ರಲ್ಲಿ ಉದಯಗೊಂಡಿತು. ಅದರ ಚಟುವಟಿಕೆಗಳನ್ನು ಈಗಾಗಲೇ ವಿವರಿಸಲಾಗಿದೆ.

ದಕ್ಷಿಣ ಕನ್ನಡದಲ್ಲಿ ಹೆಂಚು ಕಾರ್ಮಿಕರ ಆಂದೋಲನ ಗಮನಾರ್ಹವಾದದ್ದು. ಆ ಜಿಲ್ಲೆಯಲ್ಲಿ ಅವರು ನಮ್ಮ ಆಂದೋಲನದ ಬೆನ್ನೆಲುಬಾಗಿದ್ದಾರೆ. ಈಗ ಅದು ಉತ್ತರ ಕರ್ನಾಟಕಕ್ಕೂ ಹಬ್ಬಿದೆ.

ಅಗರಬತ್ತಿಯಂತಹ ಇತರ ಹಲವು ಉದ್ಯೋಗಗಳಲ್ಲಿ ಅಸಂಘಟಿತ ಕಾರ್ಮಿಕರದ್ದು ಕರುಣಾಜನಕ ಪರಿಸ್ಥಿತಿ. ಪ್ಲಾಂಟೇಶನ್ ಕಾರ್ಮಿಕರ (ಮಲೆನಾಡು ಪ್ರದೇಶ), ಶಿಡ್ಲಘಟ್ಟ, ವಿಜಯಪುರ ಇತ್ಯಾದಿ ಕಡೆಗಳಲ್ಲಿ ರೇಶ್ಮೆ ಕಾರ್ಮಿಕರ ಸ್ಥಿತಿಯೂ ಇದೇ ರೀತಿಯದ್ದು. ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಸ್ಥಿತಿಯ ಬಗ್ಗೆ ಹೇಳಬೇಕಾಗಿಯೇ ಇಲ್ಲ.

ಪ್ರತಿಯೊಂದು ಜಿಲ್ಲೆಯಲ್ಲಿ ಯಾವ ವಿಭಾಗದ ಕಾರ್ಮಿಕರು ಒಂದೆಡೆ ಹೆಚ್ಚು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಗಮನಿಸಿ ಅವರನ್ನು ಸಂಘಟಿಸಲು ಹಾಗೂ ಅವರ ಜೀವನ ಹಾಗೂ ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಲು ಹೋರಾಟ ನಡೆಸಲು ಕಾರ್ಯಕರ್ತರನ್ನು ಕಳಿಸಬೇಕು.

ಮೂಲಭೂತವಾಗಿ ಹೋರಾಟ ಮತ್ತು ಸಂಘಟನೆ ಅವರ ಪರಿಸ್ಥಿತಿಯನ್ನು ಉತ್ತಮಗೊಳಿಸಬಹುದು. ಕಲ್ಯಾಣ ಮತ್ತು ಇತರ ವಲಯಗಳಲ್ಲಿನ ಚಟುವಟಿಕೆಗಳಿಂದಷ್ಟೇ ಅವು ಸುಧಾರಿಸಬಹುದು.

'ಬಡತನ ನಿವಾರಣೆಯ ಕಾರ್ಯಕ್ರಮ'ಗಳೇನೇ ಇದ್ದರೂ ಕೆಲಸ ಹಾಗೂ ಕೆಲಸದ ಫಲದೊರೆಯುವಂತೆ ಮಾಡಿದಾಗಲೇ ಬಡತನವನ್ನು ನಿವಾರಿಸಲು ಸಾಧ್ಯ ಎಂದು ಕರ್ನಾಟಕ ಸರಕಾರಕ್ಕೆ ಹೇಳೋಣ. ಈ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರೆ ಜನ ತಮ್ಮ ಜೀವನ ಪರಿಸ್ಥಿತಿಗಳನ್ನು ತಾವೇ ಉತ್ತಮಗೊಳಿಸಿಕೊಳ್ಳಬಲ್ಲರು.

ನಮ್ಮ ಜನ ಶ್ರಮಪಡುವಲ್ಲಿ, ಹಿಂದೆ ಇಲ್ಲ. ಅವರ ಶ್ರಮ ಬಡವಾಗಿಲ್ಲ ಹಾಗಿದ್ದರೆ ಕರ್ನಾಟಕದ ಸಂಪತ್ತು ಹಾಗೂ ಸಂಸ್ಕೃತಿಯೂ ಬಡವಾಗಿರುತ್ತಿತ್ತು.

ಶ್ರಮದ ಫಲವನ್ನು ಕಿತ್ತುಕೊಂಡು ನಮ್ಮ ಜನರನ್ನು ಬಡವರನ್ನಾಗಿ ಮಾಡಲಾಗಿದೆ. ಶ್ರಮದ ಫಲವನ್ನು ಕಿತ್ತುಕೊಳ್ಳುವುದನ್ನು ನಿಲ್ಲಿಸಿ. ಆಗ ಬಡತನ ಇರುವುದಿಲ್ಲ. ಜನ ಮತ್ತಷ್ಟು, ಇನ್ನಷ್ಟು ಕಷ್ಟಪಟ್ಟು ದುಡಿಯುತ್ತಾರೆ, ಹೆಚ್ಚೆಚ್ಚು ಉತ್ಪಾದಿಸುತ್ತಾರೆ. ತಮ್ಮದೇ ಬೆವರಿನ ಫಲವನ್ನು ಹೆಚ್ಚೆಚ್ಚಾಗಿ ಅನುಭವಿಸಲು ಅವರಿಗೆ ಅವಕಾಶಕೊಡಿ. ಆಗ ಬಡತನ ಇರಲು ಸಾಧ್ಯವಿಲ್ಲ.

ಜನಗಳು ತಮ್ಮ ಶ್ರಮದ ಫಲವನ್ನು ಅನುಭವಿಸುವಂತಾಗಲು- ತಮ್ಮದೇ ಬೆವರಿನ ಫಲವನ್ನು ಕಾದುಕೊಳ್ಳುವ ಸ್ವಾತಂತ್ರ್ಯ ಅವರಿಗಿದೆ ಎಂಬ ಆಶ್ವಾಸನೆಯನ್ನು ಕೊಡಲಿ ಹಾಗೂ ಇತರರಿಗೆ ಅದನ್ನು ಕಿತ್ತುಕೊಳ್ಳುವ ಹಕ್ಕನ್ನು ನಿರಾಕರಿಸಲಿ.

ಇದಕ್ಕಾಗಿ ಹೋರಾಟ ನಡೆಯುತ್ತಿದೆ. ಪ್ರತಿಯೊಬ್ಬ ...ಚಿತನೂ, ಪ್ರಜಾಪ್ರಭುತ್ವವಾದಿಯೂ ಈ ಹೋರಾಟದಲ್ಲಿ ಜತೆಗೂಡಲಿ.

ಮುಗಿಯಿತು

ಬಡರೈತರು, ಕೃಷಿ ಕೂಲಿಕಾರರ ಸಂಘಟನೆಯನ್ನು ವಿಸ್ತರಿಸುವ ಬಲಪಡಿಸುವ ಸ್ಪೂರ್ತಿ ತುಂಬಿದ ರಾಜ್ಯಮಟ್ಟದ ಯಶಸ್ವಿ ಶಾಲೆ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ ಜಂಟಿಯಾಗಿ ನವೆಂಬರ್ 20, 21, 22 ರಂದು ಬೆಂಗಳೂರಿನ ಕೋಣನಕುಂಟೆಯ ಶಿವಶಕ್ತಿ ಮಂಟಪದಲ್ಲಿ ತಮ್ಮ ಪ್ರಮುಖ ಕಾರ್ಯಕರ್ತರಿಗೆ ರಾಜ್ಯಮಟ್ಟದ ಶಾಲೆಯನ್ನು ಯಶಸ್ವಿಯಾಗಿ ನಡೆಸಿವೆ.

ರಾಜ್ಯದ ಹನ್ನೆರೆಡು ಜಿಲ್ಲೆಗಳಿಂದ 66 ಜನರು ಪಾಲ್ಗೊಂಡಿದ್ದರು. ಇದಲ್ಲದೆ 18 ಜನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು.

ನವೆಂಬರ್ 11, 1993 ರಂದು ಕಾಂ. ಜಿ.ಎನ್. ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಶಿಬಿರ ನಡೆಯಿತು. ಕಾಂ. ಎಸ್. ರಾಮಚಂದ್ರಪಿಳ್ಳೆ, ಅಖಿಲ ಭಾರತ ಕಿಸಾನ್ ಸಭಾ ಕಾರ್ಯದರ್ಶಿಗಳು ಪಾಠ ಮಾಡಿದರು. ಅಖಿಲ ಭಾರತ ಕಿಸಾನ್ ಸಭಾದ ಹುಟ್ಟು ಅದರ ಬೆಳವಣಿಗೆ, ಸ್ವಾತಂತ್ರ್ಯದ ಮೊದಲು ಹಾಗೂ ನಂತರದಲ್ಲಿ ಕಿಸಾನ್ ಸಬಾ ಹೋರಾಟಗಳು, ಧೋರಣೆಯಲ್ಲಿ ಆದ ಬದಲಾವಣೆ, ಕೇರಳ, ಪಶ್ಚಿಮ ಬಂಗಾಳ, ಇತರೆ ಮಹಾನ್ ಚಳುವಳಿಗಳು, ಇಂದು ಬಿಹಾರ, ಆಂಧ್ರ ಪ್ರದೇಶದಲ್ಲಿ ನಡೆದ ಭೂ ಚಳುವಳಿಗಳನ್ನು ವಿವರಿಸಿದರು.

ಈ ಹೋರಾಟದ ಪರಂಪರೆಯ ಅನುಭವದಲ್ಲಿ ರಾಷ್ಟ್ರವ್ಯಾಪಿ ಹೋರಾಟಗಳನ್ನು ವಿವರಿಸಿ, ಇಂದು ರಾಷ್ಟ್ರದ ಅಗ್ರಗಣ್ಯ ಸಂಘಟನೆಯಾಗಿ ಚೈನಾದ ನಂತರ ವಿಶ್ವದಲ್ಲಿ ದೊಡ್ಡ ಸಂಘಟನೆಯಾದ ಕಿಸಾನ್ ಸಭಾ, ಕೃಷಿಕೂಲಿಕಾರರನ್ನು ಪ್ರತ್ಯೇಕವಾಗಿ ಸಂಘಟಿಸಲು ಆದ ತೀರ್ಮಾನ ಹಾಗೂ ಅದರ ಜಾರಿಯ ಕುರಿತು ಹೇಳುತ್ತಾ, ರಾಷ್ಟ್ರದ ಮುಂದೆ "ಪರ್ಯಾಯ ಕೃಷಿ ನೀತಿಯನ್ನು ಮಂಡಿಸುವಷ್ಟು ಬೆಳೆದಿದೆ" ಎಂದರು. ಆದಾಗ್ಯೂ ಕರ್ನಾಟಕ ಹಾಗೂ ಇತರ ರಾಜ್ಯಗಳಲ್ಲಿ ಬೆಳೆಯುವ ಅವಕಾಶಗಳು ಹೇಗಿವೆಯೆಂದು ಹೇಳುತ್ತಲೇ, ರಾಜ್ಯದಲ್ಲಿ ಭೂಮಿ, ಕೂಲಿ, ನೀರಾವರಿ, ಇನ್ನಿತರ ರಾಜ್ಯದ ಪರಿಸ್ಥಿತಿ ಹಾಗೂ ಸಂಘಟನೆಯ ಆದಾರದಲ್ಲಿ ಮುನ್ನುಗ್ಗಿದರೆ, ಸಂಘಟನೆ ಬೆಳೆಯಲು ವಿಫುಲವಾದ ಅವಕಾಶಗಳಿವೆಯೆಂದು, ಸರಳವಾಗಿ ತಮ್ಮ ಸುದೀರ್ಘ ಅನುಭವದ ಆಧಾರದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಮನವರಿಕೆಯಾಗುವ ರೀತಿಯಲ್ಲಿ ಪಾಠ ಮಾಡಿದರು.

ನವೆಂಬರ್ 22, 1993 ರಂದು ಕಾಂ. ಪಿ. ರಾಮಚಂದ್ರರಾವ್ ಅಧ್ಯಕ್ಷತೆಯಲ್ಲಿ ಕಾಂ. ಜಿ.ಎನ್. ನಾಗರಾಜ್ ಅವರು ಪಾಠ ಮಾಡಿದರು. ರಾಜ್ಯದಲ್ಲಿರುವ ಪ್ರಸ್ತುತ ಭೂ ಸಂಬಂಧಗಳು, ಬ್ರಿಟಿಷ್ ಪೂರ್ವ ಹಾಗೂ ನಂತರದಲ್ಲಿ ಹಾಗೂ ಸ್ವಾತಂತ್ರ್ಯನಂತರದಲ್ಲಿ ಭೂ ಸಂಬಂಧಗಳು ಹೇಗೆ ಬದಲಾದವು ಅವುಗಳಿಗೆ ಬಂಡವಾಳ ಕೃಷಿಯಲ್ಲಿ ತೊಡಗಿಸಲು ಅಂದಿನ ಪರಿಸ್ಥಿತಿಗಳು ಹೇಗೆ ಅನುಕೂಲ ಪ್ರತಿಕೂಲವಾಗಿದ್ದವುಎಂಬುದನ್ನು ವಿವರವಾಗಿ ಸರಳವಾದ ತಿಳಿಸಿದರು.

ಜೊತೆಗೆ ಪಶ್ಚಿಮ ಬಂಗಾಳದಲ್ಲಿ ಹೇಗೆ ಎಡ ದೃಷ್ಟಿಕೋನದಲ್ಲಿ ರಾಜ್ಯವನ್ನು ಅಭಿವೃದ್ಧಿಗೊಳಿಸಲಾಗಿದೆಯೆಂದು ಅಂಕಿ ಅಂಶಗಳ ಸಹಿತ ವಿವರಿಸುತ್ತ, ಕರ್ನಾಟಕ ರಾಜ್ಯ ಬಂಡವಾಳಶಾಹಿ - ಭೂಮಾಲೀಕ ನೀತಿಯಿಂದಾಗಿ ಹೇಗೆ ರಾಜ್ಯ ಆರ್ಥಿಕವಾಗಿ, ಉತ್ಪಾದನೆಯಲ್ಲಿ ಕುಸಿಯುತ್ತಿದೆಯೆಂದು ಅಂಕಿ ಅಂಶಗಳನ್ನು ನೀಡುತ್ತಾ ಎಡ ದೃಷ್ಟಿಕೋಣದಲ್ಲಿ ರಾಜ್ಯವನ್ನು ಹೇಗೆ ಅಭಿವೃದ್ಧಿ ಗೊಳಿಸಬಹುದೆಂಬ ಚಿತ್ರಣವನ್ನು ನೀಡಿದರು.

ರಾಜ್ಯದಲ್ಲಿ ರೈತ-ಕೃಷಿಕೂಲಿಕಾರರ ಮಧ್ಯೆ ಕೆಲಸ ಮಾಡುವವರಿಗೆ ತಮ್ಮ ಸುತ್ತ ಮುತ್ತ ಏನಿದೆ, ಹೇಗಿದೆ ಮುಂದೆ ಹೇಗೆ ಹೋಗಬೇಕೆಂಬ ವೈಜ್ಞಾನಿಕ ಕಣ್ಣೋಟವನ್ನು ನೀಡಲು ಈ ಪಾಠ ಯಶಸ್ವಿಯಾಯಿತು.

ನವೆಂಬರ್ 23, 1993 ರಂದು ಕಾಂ. ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಕಾಂ. ಪಿ. ರಾಮಚಂದ್ರರಾವ್ ಪಾಠಮಾಡಿದರು.

20 ಸಂಘಟನಾ ಸೂತ್ರಗಳನ್ನು ತಮ್ಮ ದೀರ್ಘ ಅನುಭವದಲ್ಲಿ ರಾಜ್ಯ ಕೇಂದ್ರ, ಜಿಲ್ಲಾ ಸಮಿತಿ ತಾಲೂಕು ಸಮಿತಿ, ಗ್ರಾಮ ಸಮಿತಿ, ಸದಸ್ಯತ್ವ, ತರಬೇತಿ, ಕಾರ್ಯಕರ್ತರು, ಕಛೇರಿ, ಸಾಹಿತ್ಯ, ಹಣಕಾಸು, ಅಧ್ಯಯನ, ಜನರ ಸಮಸ್ಯೆಗಳು, ಸರಕಾರಿ ಯೋಜನೆಗಳು, ಹೀಗೆ ಹಲವಾರು ಮಗ್ಗಲುಗಳಿಂದ ತಮ್ಮ ದೀರ್ಘ ಅನುಭವದ ಆಧಾರದಲ್ಲಿ ಸಂಘಟನೆಯ ಪಾಠವನ್ನು ಶಾಲೆಗೆ ಬಂದವರು ತಮ್ಮ ದೌರ್ಬಲ್ಯವನ್ನು ಅರ್ಥಮಾಡಿಕೊಳ್ಳುವಂತೆ ವಿವರಿಸಿದರು.

ಕಾಂ. ಪಿ. ಜಗನ್ನಾಥ್ ಕೃಷಿ ಕೂಲಿಕಾರರ ಸಂಘಟನೆಯ ಕುರಿತು ಮಾತನಾಡಿದರು.

ರಾಷ್ಟ್ರಮಟ್ಟದಲ್ಲಿ ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯನ್ನು ಹುಟ್ಟು ಹಾಕಿ ಬೆಳೆಸಲು ಸರ್ವ ಪ್ರಯತ್ನ ಮಾಡುತ್ತಿದೆ. ಹಾಗೆಯೇ ಪ್ರಾಂತ ರೈತ ಸಂಘ ಪ್ರಾಂತ ಕೃಷಿ ಕೂಲಿಕಾರರ ಸಂಘವನ್ನು ಹುಟ್ಟಿಹಾಕಿದ್ದು ಅದರ ಬೆಳವಣಿಗೆಗೆ ಕೆಳ ಸಮಿತಿಗಳು ಏನು ಮಾಡಬೇಕಾಗಿದೆಯೆಂದು ವಿವರಿಸಿ ಮಾತನಾಡಿದರು. ಬಹುಸಂಖ್ಯಾತರಾಗಿರುವ ಕೃಷಿ ಕೂಲಿಕಾರರನ್ನು, ಬಡರೈತರನ್ನು ನಾವು ಸಂಘಟಿಸುವ ಮುಖಾಂತರ ಮಾತ್ರ ಉಳಿದ ರೈತರನ್ನು ಮುಟ್ಟಲು ಸಾಧ್ಯವೆಂಬ ತಿಳಿವಳಿಕೆ ಕಾರ್ಯಕರ್ತರಿಗೆ ಅವಶ್ಯಕತೆಯಿದ್ದು ಎರಡು ಸಂಘಟನೆಗಳು ಈ ದಿಕ್ಕಿನಲ್ಲಿ ಕೆಲಸ ನಿರ್ವಹಿಸಲು ಶಾಲೆ ಸ್ಪೂರ್ತಿದಾಯಕವಾಗಲೆಂದು ಕರೆಕೊಟ್ಟರು.

ರೇಷ್ಮೆ ಬೆಳೆಗಾರರ ರ್‍ಯಾಲಿಗೆ ಕರೆ

ಕಾಂ. ಕೆ.ಎಂ. ವೆಂಕಟೇಶ್, ರಾಜ್ಯ ರೇಷ್ಮೆ ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಒತ್ತಾಯಿಸಿ ಡಿಸೆಂಬರ್ 16, 1993 ರಂದು ಬೆಂಗಳೂರಿನಲ್ಲಿ ಪ್ರತಿಭಟನಾ ರ್‍ಯಾಲಿಯನ್ನು ನಡೆಸಲು ಕರೆಕೊಟ್ಟರು.

ಹೊಸ ಆರ್ಥಿಕ ನೀತಿಯ ಉದಾರೀಕರಣದ ನೀತಿಯಿಂದಾಗಿ, ಕಡಿಮೆ ಬೆಲೆಯಲ್ಲಿ ಸಿಗುತ್ತಿರುವ ರೇಷ್ಮೆಯನ್ನು ಚೈನಾ ಹಾಗೂ ಕೋರಿಯಾದಿದ ಖಾಸಗೀ ವ್ಯಕ್ತಿಗಳು, ಆಮದು ಮಾಡಿಕೊಳ್ಳುವುದರ ಜೊತೆ, ಕಳ್ಳಸಾಗಾಣಿಕೆಯಾಗಿಯೂ ತರಲಾಗುತ್ತಿದೆ. ಇದರಿಂದಾಗಿ ರಾಜ್ಯದ ರೇಷ್ಮೆ ಬೆಳೆಗಾರರು ತಯಾರಾಗುವ ಗೂಡು 220 ರೂದಿಂದ ಪ್ರತಿಕಿಲೋಗೆ 40 ರೂಗೆ ಇಳಿದಿದೆ. ಹಾಗೆಯೇ ರೇಷ್ಮೆಯ ಬೆಲೆ 800 ರೂ.ಗಿಳಿದಿದ್ದು, ಇಡೀ ರೇಷ್ಮೆ ಉದ್ದಿಮೆ ಮುಗ್ಗಟ್ಟಿಗೆ ಎಡೆಯಾಗಿದ್ದು. 30 ಲಕ್ಷ ರೈತ, ಕೃಷಿಕೂಲಿಕಾರರು ಸಂಕಷ್ಟದಲ್ಲಿದ್ದು, ಅದನ್ನು ನಿಲ್ಲಿಸಲು ಹಾಗೂ ಗೂಡಿಗೆ ಕನಿಷ್ಟ 150 ರೂ ಕೊಡುವಂತೆ ಒತ್ತಾಯಿಸಿ ಡಿಸೆಂಬರ್ 16, 1993 ರಂದು ರಾಜ್ಯ ಪದಾಧಿಕಾರಿಗಳ ಸಮಿತಿ ಹೋರಾಟಕ್ಕೆ ಕರೆಕೊಟ್ಟಿದ್ದು ಬೃಹತ್ ಸಂಖ್ಯೆಯಲ್ಲಿ ಬೆಂಗಳೂರಿಗೆ ರೈತರನ್ನು ದೌಡಾಯಿಸಲು ಕರೆ ನೀಡಿದರು.

ಕೊನೆಯದಾಗಿ ಕಾಂ. ಚಂದ್ರಶೇಖರ ಬಾಳೆ, ರಾಜ್ಯ ಸಮಿತಿಯ ಪದಾಧಿಕಾರಿಗಳ ತೀರ್ಮಾನವನ್ನು ವಿವರಿಸಿ ಜಾರಿ ಮಾಡಲು ಕರೆ ನೀಡಿದರು.

ಡಿಸೆಂಬರ್‌ನಲ್ಲಿ ಪ್ರಚಾರ ನಡೆಸಿ ಜನವರಿ ತಿಂಗಳವಿಡಿ ರೈತರ ಹಾಗೂ ಕೃಷಿ ಕೂಲಿಕಾರರ ಸದಸ್ಯತ್ವವನ್ನು ಜಂಟಿಯಾಗಿ ಎರಡು ಸಂಘಟನೆಗಳಿಗೆ ನೊಂದಾಯಿಸುವುದು ಅದಕ್ಕೆ ತಯಾರಿಯಾಗಿ ಚಟುವಟಿಕೆಯಿರುವ ಗ್ರಾಮಗಳು, ಆ ಗ್ರಾಮಗಳಲ್ಲಿರುವ ಕಾರ್ಯಕರ್ತರ ಪಟ್ಟಿಯನ್ನು ಈ ಕೂಡಲೇ ರಾಜ್ಯ ಸಮಿತಿಗೆ ಕಳಿಸುವುದು ಜಿಲ್ಲಾ ಸಮಿತಿ, ತಾಲೂಕು ಸಮಿತಿಗಳನ್ನು ಸೇರಿಸಿ, ಸದಸ್ಯತ್ವ ನೊಂದಾವಣೆಗೆ ಸ್ಕ್ವಾಡ್‌ಗಳನ್ನು ರಚಿಸುವುದು, ಫೆಬ್ರವರಿಯಿಂದ ಭೂಮಿ, ನೀರಾವರಿ, ಸಾಲ, ವಸತಿ, ರೇಷ್ಮೆ ಬೆಳೆಗಾರರ, ಹಾಲು ಉತ್ಪಾದಕರ ಪ್ರಶ್ನೆಗಳ ಮೇಲೆ ದೀರ್ಘ ಕಾಲಿಕವಾದ, ಸಂಘರ್ಷಾತ್ಮಕವಾದ ಹೋರಾಟಕ್ಕೆ ರಾಜ್ಯಾದ್ಯಂತ ತಯಾರಿಯಾಗಿ ಕೆಳಸ್ತರಗಳಲ್ಲಿ ಹೋರಾಟ ನಡೆಸುತ್ತಲೇ ರಾಜ್ಯ ಮಟ್ಟದ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ........

ಪುಟ 3ರಿಂದ

ಎಂಬವಾದವನ್ನು ಸರ್ಕಾರಕ್ಕೆ ಮನವರಿಕೆ ಮಾಡಲು ಸಾಧ್ಯವಾಯಿತು. ಒಂದು ಕೈಗಾರಿಕೆಯಿಂದ ಇನ್ನೊಂದು ಕೈಗಾರಿಕೆಗೆ ಕನಿಷ್ಟವೇತನದ ವಿಷಯದಲ್ಲಿ ಬಹಳ ಅಂತರ ಇರಬಾರದು ಎಂಬ ಉಚ್ಛನ್ಯಾಯಾಲಯದ ಸೂಚನೆಯನ್ನು ಸರ್ಕಾರದ ತಲೆಗೆ ಹೋಗುವಂತೆ ಮಾಡಲು ಸಾಧ್ಯವಾಗಿದೆ. ಬೆಲೆ ಏರಿಕೆಯನ್ನು ಸರಿದೂಗಿಸಲು ಅತಿ ಅವಶ್ಯವಾದ ತುಟ್ಟಿಭತ್ಯೆ ದರವನ್ನು 2 ಪೈಸೆಯಿಂದ 3 ಪೈಸೆಗೆ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿರುವುದು ಲಕ್ಷಾಂತರ ಅಸಂಘಟಿತ ಕಾರ್ಮಿಕರ ಹಿತದೃಷ್ಟಿಯಿಂದ ಮಹತ್ವದ ಸಾಧನೆಯಾಗಿದೆ. ಎಲ್ಲಕ್ಕೂ ಮುಖ್ಯವಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕೈಮಗ್ಗ, ಬೀಡಿ, ತೋಟ, ಕಾಫಿಕ್ಯೂರಿಂಗ್, ಹೋಟೆಲ್, ಗಾರ್ಮೆಂಟ್ಸ್, ಅಗರಬತ್ತಿ, ಅಂಗನವಾಡಿ, ಗಣಿ ಮೊದಲಾದ ಕೈಗಾರಿಕೆಗಳ ಕಾರ್ಮಿಕ ಸ್ತ್ರೀಪುರುಷರ ಪ್ರಜ್ಞೆಯನ್ನು ಹೆಚ್ಚಿಸಲು ಕಾರಣವಾದ ಈ ಹೋರಾಟ ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿಗೆ ಒಂದು ಹೊಸ ತಿರುವು ಕೊಡುವುದರಲ್ಲಿ ಸಂಶಯವಿಲ್ಲ.

ಸತ್ಯಾಗ್ರಹದ ಅಂತ್ಯದಲ್ಲಿ ನಡೆಸಲಾದ ಸಭೆಯಲ್ಲಿ ಮಾತನಾಡಿದ ಕಾಮ್ರೆಡ್ ಸೂರ್ಯನಾರಾಯಣರಾವ್ ಅವರು ಸರ್ಕಾರದ ಭರವಸೆಗಳ ಬಗ್ಗೆ ಯಾವುದೇ ಭ್ರಮೆಗಳನ್ನು ಇಟ್ಟುಕೊಳ್ಳಬಾರದೆಂದು ಸರ್ಕಾರ ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳಲು ವಿಫಲವಾದರೆ ನಮ್ಮ ಚಳುವಳಿಯನ್ನು ಮತ್ತೆ ತೀವ್ರಗೊಳಿಸಬೇಕಾಗುವುದೆಂದು ಹೇಳಿದರು. ಕಾಮ್ರೆಡ್ ವಿ.ಜೆ.ಕೆ.ನಾಯರ್ ಅವರು ಮಾತನಾಡಿ ಚಳಿ ಮತ್ತಿತರ ಅನಾನುಕೂಲತೆಗಳನ್ನು ಎದುರಿಸಿ ಆರು ದಿನಗಳವರೆಗೆ ನಡೆದ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದ ಕಾರ್ಮಿಕರನ್ನು ಅಭಿನಂದಿಸಿದರು. ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಹಾಗೂ ಇತರ ಸೌಕರ್ಯಗಳನ್ನು ಒದಗಿಸಿದ ಬೆಂಗಳೂರಿನ ಸಿಐಟಿಯು ಕಾರ್ಮಿಕ ಸಂಘಗಳಿಗೆ ಮತ್ತು ಇತರ ಸಹೋದರ ಸಂಘಟನೆಗಳಿಗೆ ಸತ್ಯಾಗ್ರಹಿಗಳ ಪರವಾಗಿ ಕಾಮ್ರೆಡ್ ನಿತ್ಯಾನಂದ ಸ್ವಾಮಿ ಕೃತಜ್ಞತೆ ಸಲ್ಲಿಸಿದರು.

ಕಾಂಗ್ರೆಸ್ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ

ಪುಟ 4ರಿಂದ

ದಿಲ್ಲಿಯಿಂದಲೇ ಸರ್ವಾಧಿಕಾರವನ್ನು ಚಲಾಯಿಸಿ, ಆ ಸಂಸ್ಥೆಗಳ ಮೇಲೆ ಕೇಂದ್ರದ ಸಂಪೂರ್ಣ ಹಿಡಿತ ಬರುವ ರೀತಿಯಲ್ಲಿ 64ನೇ ತಿದ್ದುಪಡಿ ತಂದಿದ್ದರು. ವಿಕೇಂದ್ರೀಕರಣದ ಬದಲು ಇನ್ನಷ್ಟು ಕೇಂದ್ರೀಕರಣ ತರುವ ಬಯಕೆ ಅದರದ್ದು. ರಾಜ್ಯ ಸರಕಾರಗಳ ಅಧಿಕಾರ ಮೊಟಕುಗೊಳಿಸುವ ಪ್ರತಿಯೊಂದು ಗ್ರಾಮಪರಿಷತ್ತು ಕೇಂದ್ರವನ್ನೇ ಅವಲಂಬಿಸುವಂತೆ ಮಾಡುವ ತಿದ್ದುಪಡಿ ಅದಾಗಿತ್ತು. ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತಿ, ಆ ಕಾರಣದಿಂದಲೇ ಗ್ರಾಮ ಪಂಚಾಯತಿ ಪ್ರಧಾನ, ಅಧ್ಯಕ್ಷರ ನೇರ ಚುನಾವಣೆ ನಡೆಯಬೇಕೆಂದು ಆ ತಿದ್ದುಪಡಿಯಲ್ಲಿತ್ತು. ಅದು ಸೋಲನ್ನನುಭವಿಸಿತು.

ನಾಲ್ಕು ವರ್ಷಗಳ ನಂತರ ಲೋಕಸಭೆಯಲ್ಲಿ 72ನೇ ತಿದ್ದುಪಡಿ ತರಲಾಯಿತು. ಅದು ಜಂಟೀ ಸೆಲೆಕ್ಟ್ ಕಮಿಟಿ ಮುಂದೆ ಹೋಯಿತು. ವಿರೋಧ ಪಕ್ಷಗಳ ತಿದ್ದುಪಡಿಗಳನ್ನು ಕಾಂಗ್ರೆ ಸರಕಾರ ಒಪ್ಪಿಕೊಂಡ ನಂತರ ಸಂವಿಧಾನ ತಿದ್ದುಪಡಿ ಪಾಸಾಯಿತು. ಕುಸಿಯುತ್ತಿರುವ ತನ್ನ ಪಕ್ಷದ ಪ್ರಭಾವವನ್ನು ಉಳಿಸುವ ಉದ್ದೇಶದಿಂದ ನರಸಿಂಹರಾವ್ ಸರಕಾರ 72ನೇ ತಿದ್ದುಪಡಿ ತಂದರು. ಪರಿಸ್ಥಿತಿ 1989ರಂತೆಯೇ ಕೈಮೀರುವ ಸಂಶಯ ಕಂಡಾಗ ಸಿಪಿಐ(ಎಂ) ಪಕ್ಷವನ್ನೊಳಗೊಂಡು ವಿರೋಧ ಪಕ್ಷಗಳ ತಿದ್ದುಪಡಿಗಳನ್ನು ನುಂಗಲಾರದ ತುತ್ತಿನಂತೆ ಕಂಡು ಬಂದರೂ ನುಂಗಲೇ ಬೇಕಾಯಿತು. ಆ ಕಾರಣದಿಂದ ವಿರೋಧ ಪಕ್ಷಗಳು ಬೆಂಬಲ ನೀಡಿದವು. ಕೇಂದ್ರ ಚುನಾವಣಾ ಆಯೋಗವೇ ರಾಜ್ಯಗಳಲ್ಲಿ ಪಂಚಾಯಿತಿಗಳ ಚುನಾವಣೆ ನಡೆಸಬೇಕು, ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಅವರೇ ಪಂಚಾಯಿತಿಗಳ ಲೆಕ್ಕ ಪತ್ರ ತಪಾಸಣೆ ಮಾಡಬೇಕೆಂಬ ಅತಿ ಮಹತ್ವದ ಅಂಶ 64 ನೇ ತಿದ್ದುಪಡಿಯಲ್ಲಿತ್ತು. 72 ನೇ ತಿದ್ದುಪಡಿಯಲ್ಲಿ ಅದನ್ನು ಕೈ ಬಿಡಲಾಗಿದೆ.

72ನೇ ತಿದ್ದುಪಡಿಯಲ್ಲಿ ಸ್ವಾಗತಾರ್ಹ ಅಂಶಗಳೇನು?

1. *ಸಂವಿಧಾನ ಆದೇಶದಂತೆ ಪಂಚಾಯತಿಗಳ ಚುನಾವಣೆಯನ್ನು ಐದು ವರ್ಷಕ್ಕೊಂದು ಸಲ ನಡೆಸಬೇಕು.*
2. *ಹರಿಜನ-ಗಿರಿಜನರಿಗೆ ಅವರವರ ಜನಸಂಖ್ಯೆಯನ್ನಾಧರಿಸಿ ಮೀಸಲಾತಿ ನೀತಿ*ಯನ್ನು ಸಮಗ್ರ ದೇಶಕ್ಕೆ ಅನುಸರಿಸಲು ಒಪ್ಪಿಗೆ.
3. ಎಲ್ಲಾ ಹಂತಗಳಲ್ಲಿ ಮಹಿಳೆಯರಿಗೆ ಮೂರರಲ್ಲಿ ಒಂದು ಭಾಗ ಸ್ಥಾನಗಳನ್ನು ಮೀಸಲಾತಿ.

ಇವುಗಳು ಮಾತ್ರವಲ್ಲ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಕೈಗೊಳ್ಳಬೇಕಾದ ಅಭಿವೃದ್ಧಿ ಕೆಲಸಗಳಿಗೆ ಹಣ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮತ್ತು ಅದಕ್ಕೆ ಬೇಕಾದ ಕಾಯಿದೆಗಳನ್ನು ರಾಜ್ಯ ಶಾಸನ ಸಭೆ ಮಂಜೂರಿ ಮಾಡಬೇಕಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಗೆ ಹೊಸ ಜೀವ ತುಂಬುವ ಅಂಶಗಳು 72 ನೇ ತಿದ್ದುಪಡಿಯಲ್ಲಿವೆ. ನಮ್ಮ ದೇಶದಲ್ಲಿ ನಿಜವಾದ ಫೆಡರಲ್ ವ್ಯವಸ್ಥೆಯನ್ನು ಹುಟ್ಟುಹಾಕುವುದಕ್ಕೆ ಅಗತ್ಯವಾದ ಅಧಿಕಾರ ವಿಕೇಂದ್ರೀಕರಣಕ್ಕೆ ಈ ತಿದ್ದುಪಡಿ ಒಂದು ಹೆಜ್ಜೆ ಮುಂದಾಗಿದೆಂದು ಮಾತ್ರ ಹೇಳಬಹುದು.

72ನೇ ತಿದ್ದುಪಡಿ ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆಪಡೆಯಲು ನರಸಿಂಹರಾವ್ ಸರಕಾರ ಪ್ರಮುಖ ರಾಜಕೀಯ ಪಕ್ಷಗಳ ಮತ್ತು ಕಾಂಗ್ರೆಯೇತರ ರಾಜ್ಯ ಸರಕಾರಗಳ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಬೇಕಾಯಿತು. ಕೇಂದ್ರದಲ್ಲಿಯೇ ಸರ್ವಾಧಿಕಾರ ಕೇಂದ್ರೀಕೃತವಾಗಬೇಕೆಂಬ ಕುತಂತ್ರವನ್ನು ಕೈಬಿಡಬೇಕಾಯಿತು. ಈ ತಿದ್ದುಪಡಿಯನ್ನು ಮಂಡಿಸಿದಾಗ ಪಶ್ಚಿಮ ಬಂಗಾಲ ಎಡಪಕ್ಷ ಮತ್ತು ಕರ್ನಾಟಕ ಜನತಾಪಕ್ಷ ಸರಕಾರದ ಅನುಭವಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿ ಬಂತು ಎಂಬುದನ್ನು ಗಮನಿಸತಕ್ಕದ್ದು.

72ನೇ ತಿದ್ದುಪಡಿ ಬರೇ ರೂಪರೇಷೆಯನ್ನು ಮಾತ್ರ ಸೂಚಿಸಿದೆ. ಅದರ ಆಧಾರದಲ್ಲಿ ರಾಜ್ಯ ಸರಕಾರಗಳು ತಮ್ಮದೇ ಆದ ಮಸೂದೆಗಳಿಗೆ ವಿಧಾನಸಭೆಗಳಲ್ಲಿ ಒಪ್ಪಿಗೆ ಪಡೆದು, ಅವುಗಳ ಅನುಷ್ಠಾನಕ್ಕೆ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಆಳುವ ರಾಜ್ಯಗಳು 72ನೇ ತಿದ್ದುಪಡಿಯನ್ನು ತಮ್ಮ ರಾಜ್ಯಗಳಲ್ಲಿ ಹೇಗೆ ಜ್ಯಾರಿಯಲ್ಲಿ ತರುತ್ತಾರೆಂಬುದರ ಮೇಲೆ ಗ್ರಾಮ ಪಂಚಾಯತಿ ವ್ಯವಸ್ಥೆಯ ಕುರಿತು ಅವರ ನಿಜವಾದ ನಿಷ್ಠೆಯನ್ನು ತೋರ್ಪಡಿಸಬೇಕಾಗಿದೆ.

ಕರ್ನಾಟಕದಲ್ಲಿ ಪಂಚಾಯತೀ ರಾಜ್ಯ ವ್ಯವಸ್ಥೆ

ಪುಟ 4ರಿಂದ

ಹುದ್ದೆಗಳನ್ನು ಬೇರೆ ಬೇರೆ ಜಿಲ್ಲಾ ಸಮಿತಿಗಳಿಗೆ ಸರದಿ ಪ್ರಕಾರ ಹಂಚಿಕೆ ಮಾಡತಕ್ಕದ್ದು.

ಅಧಿಕಾರ ಮೊಟಕುಗೊಳಿಸುವ ಹೊಂಚು

ಸಂಪೂರ್ಣ ಅಧಿಕಾರ ವಿಕೇಂದ್ರೀಕರಣ ಆಗಬೇಕೆಂಬ ಉದ್ದೇಶದಿಂದ ಗ್ರಾಮಮಟ್ಟದ ಚುನಾಯಿತ ಪ್ರತಿನಿಧಿಗಳು ಯಾವ ಅಡ್ಡಿ ಆತಂಕಗಳಿಲ್ಲದೆ ತಮ್ಮ ಅಧಿಕಾರವನ್ನು ಚಲಾಯಿಸಬೇಕೆಂಬ ಉದ್ದೇಶದಿಂದಲೇ ಸಂವಿಧಾನಕ್ಕೆ 72ನೇ ತಿದ್ದುಪಡಿ ತಂದಿರುವುದಾಗಿ 1993ರ ಜಿಲ್ಲಾ ಪಂಚಾಯತ್, ತಾಲೂಕ್ ಪಂಚಾಯತ್, ಗ್ರಾಮ ಪಂಚಾಯತ್ ಕಾಯಿದೆ ತಂದಿರುವುದಾಗಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ಹೇಳುತ್ತಾ ಬಂದರೂ ಕೂಡಾ ಈ ಕಾಯಿದೆ ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸಿ, ಅಧಿಕಾರಗಳ ಅಧಿಕಾರ ನಿರ್ಣಾಯಕವಾಗುವಂತೆ ಮಾಡಿದೆ.

1. ಗ್ರಾಮ ಪಂಚಾಯತಿ, ಮತ್ತು ಗ್ರಾಮ ಸಭೆಗಳನ್ನು ಪ್ರಧಾನರು ಕರೆಯದಿದ್ದಲ್ಲಿ ಪ್ರಾಧಿಕಾರ ಆ ಸಭೆಗಳನ್ನು ಕರೆಯಬಹುದೆಂಬ ಹೊಸ ಕಾಯಿದೆ ಹೇಳುತ್ತದೆ.
2. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಚುನಾಯಿತ ಸದಸ್ಯರ, ಅಧ್ಯಕ್ಷ, ಉಪಾಧ್ಯಕ್ಷರ, ನಡವಳಿಕೆ ಮತ್ತು ಆಡಳಿತೆ ಕುರಿತು, ಸಮಿತಿ ಸಭೆಗಳಲ್ಲಾದ ನಿರ್ಣಯಗಳ ವಿರುದ್ಧ ಸರಕಾರಕ್ಕೆ ದೂರು ನೀಡಲು ಅವಕಾಶ ಮಾಡಿಕೊಡಲಾಗಿದೆ. ಚುನಾಯಿತ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರಿಗಿಂತಲೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯ ಕೈ ಮೇಲಾಗಿ ಅಧಿಕಾರ ವಿಕೇಂದ್ರೀಕರಣದ ತತ್ವವನ್ನು ಮೊಟಕುಗೊಳಿಸಿದಂತಾಗಿದೆ.

ಅಧ್ಯಾಯ 16ರಲ್ಲಿ ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆಯ ಹೆಸರಿನಲ್ಲಿ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳನ್ನು ಸಂಪೂರ್ಣವಾಗಿ ಪರೀಕ್ಷಿಸುವ ಅಧಿಕಾರ ಸಂಬಂಧ ಪಟ್ಟ ಅಧಿಕಾರಿಗಳಿಗೆ ಕೊಡಲಾಗಿದೆ ಮಾತ್ರವಲ್ಲ ಅವರು ಹೊರಡಿಸುವ ಸೂಚನೆಗಳನ್ನು ಈ ಮೂರು ಘಟಕಗಳು ಪಾಲಿಸತಕ್ಕದ್ದು ಎಂದು ಹೇಳಲಾಗಿದೆ. ಆ ರೀತಿ ಪಾಲಿಸದಿದ್ದಲ್ಲಿ ಚುನಾಯಿತ ಘಟಕಗಳನ್ನು ರದ್ದುಪಡಿಸಿ ಸರಕಾರ ಆಡಳಿತಾಧಿಕಾರಿಯನ್ನು ನೇಮಿಸಬಹುದೆಂದಿದೆ. ಇದರ ಅರ್ಥ ಏನೆಂದರೆ ಯಾವುದೇ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಸರಕಾರ ಹೇಳಿದಂತೆ ನಡೆಯುವುದಿಲ್ಲವೋ, ನುಡಿಯುವುದಿಲ್ಲವೋ ಅಂಥವುಗಳ ಮೇಲೆ ಅಧಿಕಾರಿಗಳಿಂದ ಆರೋಪಗಳನ್ನು ಹೊರಿಸಿ, ಅವುಗಳನ್ನು ರದ್ದುಮಾಡುವ ಅಧಿಕಾರ ಸರಕಾರ ಹೊಂದಿದೆ. ಸರಕಾರಕ್ಕೆ ಮತ್ತು ಅಧಿಕಾರಿಗಳಿಗೆ ನೀಡಿರುವ ಈ ಅಧಿಕಾರ ಪಂಚಾಯಿತಿ ವ್ಯವಸ್ಥೆಯನ್ನೇ ಮುಟ್ಟುಗೋಲು ಹಾಕುತ್ತದೆ. ಜನರಿಂದ ಆರಿಸಿಬಂದ ಸದಸ್ಯರಿಗೆ ಜನಪರ ಕಾರ್ಯಗಳನ್ನು ಕೈಗೊಳ್ಳಲು ಅಡ್ಡಿಯಾಗುತ್ತಿದೆ. ಈ ಕಾರಣದಿಂದಲೇ ಈ ಅಧಿನಿಯಮ ಮಂಜೂರಾತಿಗಾಗಿ ವಿಧಾನಸಭೆ, ವಿಧಾನಪರಿಷತ್ತಿನಲ್ಲಿ ಬಂದಾಗ ವಿರೋಧ ಪಕ್ಷಗಳು ತಿದ್ದುಪಡಿಗಳನ್ನು ಮಂಡಿಸಿದಾಗ ಅವುಗಳನ್ನು ಸರಕಾರ ಕೂಡಲೇ ಒಪ್ಪಿಕೊಳ್ಳಲಿಲ್ಲ. ತಿದ್ದುಪಡಿಗಳನ್ನು ನಂತರ ಸೇರಿಸಲಾಗುವುದೆಂಬ ಆಶ್ವಾಸನೆ ಮಾತ್ರ ನೀಡಿದ್ದರು. ಇಂದಿಗೂ ಆ ತಿದ್ದುಪಡಿಗಳನ್ನು ಸರಕಾರ ಕಾಯಿದೆಯಲ್ಲಿ ಸೇರಿಸಿಲ್ಲ.

1993ರ ಕಾಯಿದೆ ಹಳೇಕಾಲದ ಗ್ರಾಮಪಂಚಾಯತಿಗಳನ್ನೇ ಹೋಲುತ್ತಿದೆ. ಸಂಪನ್ಮೂಲಗಳಿಲ್ಲದೆ ಸರಕಾರದಿಂದ ಧನ ಸಹಾಯ ಸಿಗದೆ ಆ ಪಂಚಾಯತಿಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಯಿತು. ಅನಂತರ ಗ್ರೂಪ್ ಪಂಚಾಯತಿ ರಚಿಸಲಾಯಿತು. ಅದೂ ಫಲ ನೀಡಲಿಲ್ಲ. ಪಶ್ಚಿಮ ಬಂಗಾಳದ ಮಾದರಿಯಲ್ಲಿ, ಪಶ್ಚಿಮ ಬಂಗಾಲದಲ್ಲಿ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿಗೆ ನೀಡಿದ ಅಧಿಕಾರ ಕರ್ನಾಟಕ 1983 ರ ಮಸೂದೆಯಲ್ಲಿಲ್ಲದಿದ್ದರೂ ಕೂಡ ಅದು ಉಪಯೋಗಕರ ಮಸೂದೆಯೆಂದು ಹೆಸರು ಪಡೆದಿತ್ತು. ಪಶ್ಚಿಮ ಬಂಗಾಲದ ಬದಲಾವಣೆ ಸಾಮಾಜಿಕ ವ್ಯವಸ್ಥೆಯಲ್ಲಿ ಗ್ರಾಮಗಳ ಮೇಲ್ವರ್ಗದ, ಸ್ವಹಿತ ಸಾಧಕ, ಪ್ರತಿಗಾಮಿ ಜನ ಆರಿಸಿ ಬರಲಿಕ್ಕೆ ಕಷ್ಟಕರವಾಗಿದೆ. ಬಡರೈತರು, ಕೃಷಿ ಕೂಲಿಗಾರರ, ಮಧ್ಯಮ ವರ್ಗದವರು ಹೆಚ್ಚಾಗಿ ಆರಿಸಿ ಬರುವುದರಿಂದ, ಸರಕಾರವೂ ಸಾಕಷ್ಟು ಹಣ ಸಹಾಯ ಮಾಡುತ್ತಿರುವುದರಿಂದ ಪಶ್ಚಿಮ ಬಂಗಾಲದಲ್ಲಿ ನಿಜವಾಗಿಯೂ ಅಧಿಕಾರ ವಿಕೇಂದ್ರೀಕರಣವಾಗಿರುವುದನ್ನು ನೋಡಬಹುದಾಗಿದೆ. ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಅಂಥ ಪರಿಸ್ಥಿತಿಯಿಲ್ಲದಿದ್ದರೂ ಕೂಡಾ ಪ್ರಯತ್ನ ಮಾಡಿದ್ದೇ ಆದರೆ ಸ್ವಲ್ಪ ಮಟ್ಟಿಗಾದರೂ ಬದಲಾವಣೆ ಉಂಟುಮಾಡಲು ಸಾಧ್ಯವಾಗಬಹುದು.

1983ರ ಕಾಯಿದೆಯಂತೆ ಚುನಾಯಿಸಲ್ಪಟ್ಟ ಮಂಡಲ ಪಂಚಾಯತಿಗಳು ಹಣದ ಅಭಾವದಿಂದಾಗಿ ತೊದರೆಗೊಳಪಡಬೇಕಾಯಿತು. ನೌಕರರಿಗೆ ತಿಂಗಳ ವೇತನ ಕೊಡಲು ಸಾಧ್ಯವಾಗದಂತ ಪರಿಸ್ಥಿತಿಯಿತ್ತು. ಹೊಸ ಕಾಯಿದೆಯಂತೆ ಹಳೇ ಪಂಚಾಯತಿಗಳ ಬದಲಾಗಿ 2-3 ಹಳ್ಳಿಗಳ ಗ್ರಾಮ ಪಂಚಾಯತಿ ನಿರ್ಮಿಸಿರುವುದರಿಂದ ಹಳೇ ಕಾಲದ ಪಂಚಾಯತಿ ವ್ಯವಸ್ಥೆಯ ದುರ್ದೆಶೆಯನ್ನೇ ಈಗಿನ ಹೊಸ ಗ್ರಾಮ ಪಂಚಾಯತಿಗಳು ಎದುರಿಸಬೇಕಾಗಿ ಬರಬಹುದು. ಒಂದು ಲಕ್ಷ ಅನುದಾನದಿಂದ ಏನು ಸಾಧಿಸಲು ಶಕ್ಯವಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಚುನಾವಣೆಯನ್ನೆದುರಿಸಬೇಕಾಗಿದೆ. ಅದಕ್ಕೆ ಬೇಕಾದ ತಯಾರಿ ಮಾಡಬೇಕಾಗಿದೆ. ಕಾಯಿದೆಯಲ್ಲಿ ಎಷ್ಟೇ ಕುಂದು ಕೊರತೆಗಳಿದ್ದರೂ ಕೂಡ, ಈ ಘಟಕಗಳಿಗೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಹೆಚ್ಚು ಪ್ರತಿನಿಧಿಗಳು ಆರಿಸಿಹೋಗುವುದು ಅತ್ಯಗತ್ಯ. ಆ ದೃಷ್ಟಿಯಿಂದ ಚುನಾವಣೆಗೆ ಸಿದ್ಧತೆ ಮಾಡಿ, ಚುನಾವಣೆಯನ್ನೆದುರಿಸಲು ತಯಾರಾಗೋಣ.

ಬಾಂಗ್ಲಾದೇಶದಲ್ಲಿ ವಿರೋಧ ಪಕ್ಷಗಳ ಸಾಮೂಹಿಕ ರಾಜಿನಾಮೆ

ಬಾಂಗ್ಲಾದೇಶ ಪುನಃ ರಾಜಕೀಯ ಬಿಕ್ಕಟ್ಟಿನಂಚಿನಲ್ಲಿ ನಿಂತಿದೆ. ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವೆ ರಾಜಕೀಯ ಹಣಾಹಣಿ ವಿಕೋಪಕ್ಕೆ ಹೋಗಿದ್ದು, ವಿರೋಧ ಪಕ್ಷಗಳ ಸದಸ್ಯರೆಲ್ಲಾ ಸಾಮೂಹಿಕ ರಾಜಿನಾಮೆ ನೀಡಿ ಪಾರ್ಲಿಮೆಂಟನ್ನು ಅರ್ಥಹೀನ ಮಾಡುವ ಸ್ಥಿತಿಗೆ ಬಂದಿದೆ. ಸದ್ಯಕ್ಕೆ ವಿರೋಧ ಪಕ್ಷಗಳ ಸದಸ್ಯರೆಲ್ಲಾ ಪಾರ್ಲಿಮೆಂಟು ಅಧಿವೇಶನವನ್ನು ಬಹಿಷ್ಕರಿಸುತ್ತಿದ್ದಾರೆ.

ರಾಜಕೀಯ ಹಣಾಹಣಿ ಆರಂಭವಾದ್ದು ಪ್ರಧಾನ ಮಂತ್ರಿ ಖಲೀದಾ ಜಿಯಾ ಪಾರ್ಲಿಮೆಂಟಿನ ಹೊರಗೆ ವಿರೋಧಪಕ್ಷಗಳ ಬಗ್ಗೆ ಮಾಡಿದ ನಿಂದನಾತ್ಮಕ ಹೇಳಿಕೆಯಿಂದ. ಆಕೆ ಪಾರ್ಲಿಮೆಂಟು 'ಸುಳ್ಳು, ತಪ್ಪು ಹಾಗೂ ದಾರಿತಪ್ಪಿಸುವ ಹೇಳಿಕೆ' ಗಳನ್ನು ಕೊಡುವ ಜಾಗ ಆಗಿದೆ ಎಂದು ವಿರೋಧಪಕ್ಷಗಳ ಬಗ್ಗೆ ಹೇಳಿದರಂತೆ. ಇದರ ವಿರುದ್ಧ ಪ್ರಮುಖ ವಿರೋಧ ಪಕ್ಷ ಅವಾಮಿ ಲೀಗ್ ಹಕ್ಕುಚ್ಯುತಿ ಸೂಚನೆ ಮಂಡಿಸಿದೆ. ಪ್ರಧಾನ ಮಂತ್ರಿ ಖಲಿದಾ ಜಿಯಾರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಅವಾಮಿ ಲೀಗ್ ನಾಯಕಿ ಶೇಖ್ ಹಸಿನಾ ವಾಜಿದ್ ನೀಡಿದ ಹೇಳಿಕೆ ವಿರುದ್ಧ ಆಳುವ ಪಕ್ಷ ಹಕ್ಕುಚ್ಯುತಿ ಸೂಚನೆ ಮಂಡಿಸಿದೆ. ಅದನ್ನು ಸ್ಪೀಕರ್ ಅಂಗೀಕರಿಸಿದ್ದಾರೆ. ಇದನ್ನು ಪ್ರತಿಭಟಿಸಿ ವಿರೋಧಪಕ್ಷಗಳು ಪಾರ್ಲಿಮೆಂಟಿನ ಪ್ರಸಕ್ತ ಅಧಿವೇಶನ ಬಹಿಷ್ಕರಿಸಿವೆ. ಅದರ ಬಗ್ಗೆ ಮಾತುಕತೆ ನಡೆಸುವ ಬದಲು, ವಿರೋಧ ಪಕ್ಷದ ನಾಯಕಿ ವಿರುದ್ಧ ಹಕ್ಕುಚ್ಯುತಿ ಮಂಡಿಸಿದ್ದರಿಂದ ಪಾರ್ಲಿಮೆಂಟಿಗೆ ರಾಜಿನಾಮೆ ನೀಡಲು ನಿರ್ಧರಿಸಲಾಗಿದೆ. ಇದರಲ್ಲಿ ಸರ್ಕಾರದ ಬೆಂಬಲಿಗ ಮೂಲಭೂತವಾದಿ ಜಮಾತೇ-ಇಸ್ಲಾಮಿ ಬಿಟ್ಟರೆ ಉಳಿದೆಲ್ಲಾ ಪಕ್ಷಗಳು ಭಾಗವಹಿಸಿವೆ.

ಕಳೆದವಾರ ಸರ್ಕಾರ ಎಲ್ಲಾ ರಂಗಗಳಲ್ಲೂ ದೇಶದ ಸಮಸ್ಯೆಗಳನ್ನು ಬಗೆಹರಿಸಲು ಸೋತಿರುವುದರಿಂದ ರಾಜಿನಾಮೆ ನೀಡಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದರ ಫಲಪ್ರದವಾಗಿ ರಾಜಕೀಯ ಕಾವೇರಿತ್ತು.

ಇಟಲಿ ಸ್ಥಳೀಯ ಚುನಾವಣೆಗಳು

ಇಟಲಿಯಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಆಳುವ ಕೂಟಗಳ ಭಾಗವಾಗಿರುತ್ತಿದ್ದ ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಹಾಗೂ ಸೋಶಲಿಸ್ಟ್ ಪಕ್ಷಗಳು ಭಾರಿ ಪರಾಭವ ಅನುಭವಿಸಿವೆ. ಹೆಚ್ಚು ಕಡಿಮೆ ತಲಾ ಶೇ. 35-40 ರಷ್ಟು ಗಳಿಸುತ್ತಿದ್ದ ಈ ಪಕ್ಷಗಳು ಬೆಂಬಲ ಒಟ್ಟಾಗಿ ಶೇ. 15 ಕ್ಕಿಂತಲೂ ಕಡಿಮೆಗೆ ಕುಸಿದು ಬಿದ್ದಿದೆ. ಎರಡನೇಯ ಮಹಾಯುದ್ಧದ ನಂತರದ 50 ಸಮ್ಮಿಶ್ರ ಸರಕಾರಗಳಲ್ಲಿ ಈ ಎರಡೂ ಪಕ್ಷಗಳು ಭಾಗವಹಿಸಿದ್ದವು. ಆದರೆ ಇತ್ತೀಚೆಗೆ ಬೆಳಕಿಗೆ ಬಂದ, ಆದರೆ ಕಳೆದ ಹಲವಾರು ದಶಕಗಳಿಂದ ನಡೆದು ಬರುತ್ತಿದ್ದ ಭ್ರಷ್ಟಾಚಾರ, ಮಾಫಿಯಾ ಜತೆ ಸಂಬಂಧ, ದುರಾಡಳಿತದ ಆರೋಪದಲ್ಲಿ ಈ ಎರಡೂ ಪಕ್ಷಗಳು ಮುಳುಗಿ ಹೋಗಿವೆ.

ಇದರಿಂದ ಇಟಲಿಯ ದೇಸತ್ತ ಮತದಾರ ಇತ್ತೀಚಿನ ಚುನಾವಣೆಗಳಲ್ಲಿ ತಾನು ಇನ್ನು ಸುಮ್ಮನಿರುವುದಿಲ್ಲ ಎಂದು ತೋರಿಸಿದ್ದಾನೆ. ಈ ಬಾರಿ ನಡೆದ ಮುನಿಸಿಪಾಲಿಟಿ ಮುಂತಾದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪ್ರಜಾಸತ್ತಾತ್ಮಕ ಎಡ ಪಕ್ಷ ಎಂದು ಹೆಸರಿಟ್ಟಿರುವ (ಮಾಜಿ ಇಟಲಿಯನ್ ಕಮ್ಯುನಿಸ್ಟ್ ಪಕ್ಷ) ದೊಡ್ಡ ಜಯಗಳಿಸಿದೆ ಎಂದು ವರದಿಯಾಗಿದೆ. ಇದಲ್ಲದೆ ನವ- ಫ್ಯಾಸಿಸ್ಟ್ ಪಕ್ಷ ಎಮ್.ಎಸ್.ಐ ಹಾಗೂ ಉತ್ತರ ಇಟಲಿಯ ಸ್ವಾಯತ್ತತೆಗೆ ಹೋರಾಡುತ್ತಿರುವ ನಾರ್ತರ್ನ್ ಲೀಗ್ ಪಕ್ಷಗಳೂ ಭಾರಿ ಜಯಗಳಿಸಿವೆ ಎಂದು ವರದಿಯಾಗಿದೆ.

ಈ ಚುನಾವಣೆಗಳಿಂದ ಫೆಬ್ರವರಿಯಲ್ಲಿ ನಡೆಯದೇಕಾದ ಸಾರ್ವತ್ರಿಕ ಚುನಾವಣೆಯಿಂದ ಇಟಲಿಯ ರಾಜಕೀಯದಲ್ಲಿ ಭಾರಿ ಬದಲಾವಣೆ ಬರುವುದು ಖಚಿತವಾಗಿದೆ.

ಪಾಕಿಸ್ತಾನಕ್ಕೆ ಅಮೇರಿಕನ್ ನೆರವು ಪುನರಾರಂಭ

ಕಳೆದ ಮೂರು ವರ್ಷಗಳಿಂದ ಜಾರಿಯಲ್ಲಿದ್ದ, ಪಾಕಿಸ್ತಾನಕ್ಕೆ ಅಮೇರಿಕನ್ ಮಿಲಿಟರಿ, ಆರ್ಥಿಕ ನೆರವು ಮೇಲೆ ನಿಷೇಧವನ್ನು ಅಧ್ಯಕ್ಷ ಕ್ಲಿಂಟನ್ ತೆಗೆದು ಹಾಕಿದ್ದಾರೆ. ಪ್ರೆಸ್ಲರ್ ತಿದ್ದುಪಡಿ ಎಂದು ಹೆಸರಾದ ಕಾನೂನು ಪ್ರಕಾರ 1990 ರಲ್ಲಿ ಪಾಕಿಸ್ತಾನಕ್ಕೆ ಆರ್ಥಿಕ ಮಿಲಿಟರಿ ನೆರವು ಮೇಲೆ ನಿಷೇಧ ಹೇರಲಾಗಿತ್ತು. ಈ ಕಾನೂನು ಪ್ರಕಾರ ಅಣ್ವಸ್ತ್ರ ಸಾಮರ್ಥ್ಯ ಹೊಂದಿವೆ ಎಂದು ಗುಮಾನಿ ಇರುವ ದೇಶಗಳ ಬಗ್ಗೆ ಪ್ರತಿ ವರ್ಷ ಅಧ್ಯಕ್ಷರು, ಇನ್ನೂ ಅಣ್ವಸ್ತ್ರಗಳನ್ನು ತಯಾರಿಸಿಲ್ಲ ಎಂದು ಸರ್ಟಿಫಿಕೆಟ್ ನೀಡಬೇಕು. ಅಧ್ಯಕ್ಷರಿಂದ ಇಂತಹ ಸರ್ಟಿಫಿಕೆಟ್ ಬರದಿದ್ದರೆ ಮಿಲಿಟರಿ ಆರ್ಥಿಕ ನೆರವು ನಿಲ್ಲಿಸಲಾಗುತ್ತಿತ್ತು. ಪಾಕಿಸ್ತಾನ ಈಗಾಗಲೇ ಅಣ್ವಸ್ತ್ರ ತಯಾರಿಸಿದೆ ಎಂಬು ಗುಮಾನಿಯ ಹಿನ್ನೆಲೆಯಲ್ಲಿ ಬುಶ್ 1990ರಲ್ಲಿ ಇಂತಹ ಸರ್ಟಿಫಿಕೆಟ್ ಕೊಡಲು ನಿರಾಕರಿಸಿದ್ದರು. ಆಗಿನಿಂದ ಪಾಕಿಸ್ತಾನ ಸರ್ಕಾರ ಅಮೇರಿಕನ್ ಆರ್ಥಿಕ, ಮಿಲಿಟರಿ ನೆರವು ಪುನರಾರಂಭವಾಗುವಂತೆ ಭಗೀರಥ ಪ್ರಯತ್ನ ನಡೆಸುತ್ತಿತ್ತು. ಈಗ ಅದಕ್ಕೆ ಫಲ ಸಿಕ್ಕಿದೆ. ಅಧ್ಯಕ್ಷ ಕ್ಲಿಂಟನ್ ಈ ಕಾನೂನನ್ನೇ ರದ್ದು ಮಾಡಲಿದ್ದಾರಂತೆ.

ಇದು ರಾಜಕೀಯ ನಿರ್ಣಯ ಎಂಬುದಕ್ಕೆ ಏನು ಸಂದೇಹ ಇಲ್ಲ. ಭಾರತವನ್ನು ಛಿದ್ರಗೊಳಿಸಲು ಪಾಕಿಸ್ತಾನದ ಆಳುವ ವರ್ಗಗಳು ಬೆಂಬಲವನ್ನು ಈ ಹಿಂದೆ ಪಡೆಯುತ್ತಿದ್ದ ಅಮೇರಿಕ ಪುನಃ ಇಂತಹ ಚಟುವಟಿಕೆಗಳನ್ನು ತೀವ್ರಗೊಳಿಸಲು ನಿರ್ಧರಿಸಿದಂತಿದೆ. ಅಮೇರಿಕನ್ ಮಿಲಿಟರಿ ನೆರವು ಪುನರಾರಂಭ, ಭಾರತ ರಕ್ಷಣಾ ವೆಚ್ಚದ ಮೇಲೆ ಒತ್ತಡ ಹೇರುವುದು ಖಚಿತ.

ಲೋಕ ಸಂಚಾರ

-- ಶರತ್ ಚಂದ್ರ

ಮುಕ್ತ ಮಾರುಕಟ್ಟೆಯ ಮಾಸ್ಕೋದಲ್ಲಿ 'ಮನೆಗಾಗಿ ಕೊಲೆ'

ಬಂಡವಾಳಶಾಹಿಯತ್ತ ಬಲವಂಥದಿಂದ ತಳಲ್ಪಡುತ್ತಿರುವ ಮಾಸ್ಕೋ ವಿವಿಧ ಅಪರಾಧಗಳ ಆಗರ. ಪಾಶ್ಚಿಮಾತ್ಯ ಬಂಡವಾಳಶಾಹಿ ನಗರಗಳನ್ನು ನಾಚಿಸುವ ಹೊಸ ಅಪರಾಧವೊಂದು ಮಾಸ್ಕೋದಲ್ಲಿ ವಿಷದಂತೆ ಹಬ್ಬುತ್ತಿದೆ. ಇದು 'ಮನೆಗಾಗಿ ಕೊಲೆ' ಅಥವಾ 'ಖಾಸಗೀಕರಣ ಕೊಲೆ'ಗಳು. ಮಾಸ್ಕೋದ ಹಲವು ಬಹುಮಹಡಿ ಕಟ್ಟಡಗಳಲ್ಲಿ ಮನೆ ಹೊಂದಿರುವ ಹಿರಿಯ ದಂಪತಿಗಳ ಮನೆ ಲಪಟಾಯಿಸಲು ಅವರನ್ನು ಕೊಲೆ ಮಾಡುವ ಹಲವಾರು ಪ್ರಕರಣಗಳು, ಬೆಳಕಿಗೆ ಬಂದಿವೆ. 'ಹೇಗಾದರೂ ಸರಿ, ಶ್ರೀಮಂತರಾದರೆ ಆಯಿತು' ಎಂಬ ಹಿನ್ನೆಲೆಯಲ್ಲಿ, ಹಾಗೂ ಮಾಸ್ಕೋದಲ್ಲಿ ಮನೆಯ ಬೆಲೆಗಳು ಗಗನಕ್ಕೇರುತ್ತಿರುವಾಗ ಇದು ಭಾರಿ 'ಲಾಭದಾಯಕ ಉದ್ಯಮ'. ಯೆಲ್ಟ್ಸಿನ್ನರ ಖಾಸಗೀಕರಣ ಯೋಜನೆಯ ಪ್ರಕಾರ ಮನೆ ಖಾಸಗಿ ಆಸ್ತಿಯಾಗಿದ್ದು ಅದನ್ನು ನಾಗರಿಕರು ಮಾರಬಹುದು. ಮನೆ ಸಿಗುವುದು ದುಸ್ಸಾಧ್ಯವಾಗಿರುವುದರಿಂದ ಮನೆಯ ಬೆಲೆ ಸಹ ಗಗನಕ್ಕೇರಿದೆ.

ಈ ಮನೆ ಕೊಳ್ಳುವ, ಮಾರುವ ವ್ಯವಹಾರಕ್ಕೆ ಮಾಸ್ಕೋದ ಮಾಫಿಯಾ ಗ್ಯಾಂಗ್‌ಗಳು ಕಾಲಿರಿಸಿವೆ. ಈ ಗ್ಯಾಂಗ್‌ಗಳು ಜಂಟಿಯಾಗಿರುವ ಹಿರಿಯ ನಾಗರಿಕರು ಅಥವಾ ದಂಪತಿಗಳನ್ನು ಪತ್ತೆ ಹಿಡಿಯುತ್ತಾರೆ. ಅವರನ್ನು ಕಂಡು, ಮನೆ ಮಾರುವೆಂತೆ ಅಥವಾ ಖಾಲಿ ಮಾಡುವಂತೆ ಒತ್ತಡ ಹೇರುತ್ತಾರೆ. ಇದಕ್ಕೆ ಜಗ್ಗದಿದ್ದರೆ ಅವರ ಕೊಲೆ ಮಾಡಿ, ಆ ಮನೆಯ ದಸ್ತಾವೇಜುಗಳನ್ನು ಗ್ಯಾಂಗ್‌ಗಳು ತಮ್ಮ ಹೆಸರಿಗೆ ಮಾಡಿಕೊಂಡು ಭಾರಿ ಲಾಭಕ್ಕೆ ಮಾರುತ್ತವೆ. ಇದರಲ್ಲಿ ಸರ್ಕಾರದ ಸ್ಥಳೀಯ ಮುನಿಸಿಪಾಲಿಟಿ ಅಧಿಕಾರಿಗಳ ಸಹಕಾರವಿಲ್ಲದೆ ಸಾಧ್ಯವಿಲ್ಲ ಎಂಬುದು ಸ್ಪಷ್ಟ.

ಮಾಫಿಯಾ ಜತೆ ಸಹಕಾರ ತೋರಿಸಿದ ಹಿರಿಯ ದಂಪತಿಗಳು, ನಾಗರಿಕರಿಗೆ ವಿವಿಧ ರೀತಿಯ 'ಸತ್ಕಾರ' ಕಾದಿರುತ್ತಿದೆ.

ಯಾವುದೋ ನೆವದಲ್ಲಿ ಮನೆಯಿಂದ ಹೊರಗೆ ಕರಕೊಂಡು ಹೋಗಿ (ಪ್ರವಾಸಕ್ಕೆ ಅಥವಾ ಪಾರ್ಟಿ ಇತ್ಯಾದಿಗಳಿಗೆ) ಅವರನ್ನು ಮುಗಿಸಲಾಗುತ್ತದೆ. ಅಥವಾ ಚಿತ್ರಹಿಂಸೆ ಕೊಟ್ಟು ಅವರೇ ಅಗ್ಗದ ಬೆಲೆಗೆ ಮಾರುವಂತೆ ಮಾಡಲಾಗುತ್ತದೆ.

ಇಂತಹ 37 ಕೊಲೆಗಳು ಬೆಳಕಿಗೆ ಬಂದಿವೆ ಎಂದು ಇಂತಹ ಅಪರಾಧ ತನಿಖೆಗೆ ನೇಮಕವಾದ ವಿಶೇಷ ಅಧಿಕಾರಿ ಹೇಳಿದ್ದಾರೆ. ಇನ್ನೂ ಹಲವಾರು ಕೊಲೆಗಳು ಬೆಳಕಿಗೆ ಬರುವುದೇ ಇಲ್ಲ. ಮಾಸ್ಕೋದ ಹಲವು ಶವಾಗಾರಗಳಲ್ಲಿ 800 ಹೆಣಗಳು ಬಿದ್ದಿವೆಯೆಂತೆ. ಇದರಲ್ಲಿ ಹೆಚ್ಚಿನವು ಇಂತಹ ಕೊಲೆಗಳು ಇರಬಹುದು ಎಂದು ಅಂದಾಜು ಮಾಡಲಾಗಿದೆ. ಮಾಸ್ಕೋದಲ್ಲಿ ದಿನಕ್ಕೆ 10 ಜನ ಮನೆಯಿಲ್ಲದ್ದರಿಂದ ಸಾಯುತ್ತಾರೆ. ಅದರಲ್ಲಿ ಇಬ್ಬರಾದರೂ ಅಂದರೆ ಶೇ. 20 ಜನ 'ಮನೆಗಾಗಿ ಕೊಲೆ'ಗೆ ಬಲಿಯಾಗುತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಇಂತಹ ಬಲಿಪಶುಗಳ ವಿಳಾಸ ತಿಳಿದುಕೊಳ್ಳಲು ಈ ಗ್ಯಾಂಗ್‌ಗಳು ಸರ್ಕಾರಿ ಅಧಿಕಾರಿಗಳಿಗೆ ನಾಲ್ಕರಿಂದ ಐದು ಲಕ್ಷ ರೂಬಲ್ ಖರ್ಚು ಮಾಡುತ್ತವಂತೆ.

ಅಮೇರಿಕದ 'ನಿಶ್ಶಸ್ತ್ರೀಕರಣ'ಕ್ಕೆ ಕಾನೂನು!

ಅಮೇರಿಕ ಬಂದೂಕು, ಪಿಸ್ತೂಲುಗಳ ದೇಶ. ಅಲ್ಲಿ 50 ಕೋಟಿಯಷ್ಟು ವಿವಿಧ ರೀತಿಯ ಬಂದೂಕು ಪಿಸ್ತೂಲುಗಳು ಇವೆ. ಹೆಚ್ಚು ಕಡಿಮೆ ತಲಾ ಒಂದಕ್ಕಿಂತಲೂ ಹೆಚ್ಚು ಇವುಗಳನ್ನು ಕೊಳ್ಳುವುದು ಚಾಕಲೆಟ್ ಕೊಳ್ಳುವಷ್ಟೆ ಸುಲಭ. ಆದ್ದರಿಂದ ಬಂದೂಕು ಪಿಸ್ತೂಲ್‌ಗಳಿಂದಾಗಿ ಆದ ಕೊಲೆಗಳೂ ಗಮನಾರ್ಹ. ಪ್ರತಿ ದಿನ ಅಮೇರಿಕದಲ್ಲಿ 65 ಕೊಲೆಗಳು ನಡೆಯುತ್ತವೆ. ಏರುತ್ತಿರುವ ಅಪರಾಧ ಸಂಖ್ಯೆ ಜನರನ್ನು ಗಾಬರಿಗೀಡು ಮಾಡಿದೆ. ಆದ್ದರಿಂದ ಪಿಸ್ತೂಲು ಮತ್ತಿತ್ತರ ಶಸ್ತ್ರಾಸ್ತ್ರಕೊಳ್ಳುವುದನ್ನು ಕಾನೂನಿನ ಪ್ರಕಾರ ಕಷ್ಟ ಮಾಡುವ ಕಾನೂನಿನ ಬಗ್ಗೆ ಜನರ ಒತ್ತಡ ಹೆಚ್ಚಾಗುತ್ತಿದೆ.

ಪಿಸ್ತೂಲುಗಳು ಕೊಳ್ಳುವುದನ್ನು ಹೆಚ್ಚಿನ ಕಾನೂನ ಪ್ರಕಾರ ಕಷ್ಟಗೊಳಿಸಲಾಗಿದೆ. ಪಿಸ್ತೂಲು ಕೊಳ್ಳುವ ಯಾರೇ ಆದರೂ 5 ದಿನ ಕಾಯಬೇಕು. ಈ ಅವಧಿಯಲ್ಲಿ ಆ ವ್ಯಕ್ತಿಯ ಪೂರ್ವಾಪರಗಳನ್ನು ಪರಿಶೀಲಿಸಿ ಆತ ಅರ್ಹನಾದರೆ ಮಾತ್ರ ಅದನ್ನು ಖರೀದಿಸಬಹುದು. ಅದೇ ರೀತಿ ಮಕ್ಕಳು ಪಿಸ್ತೂಲು ಹೊಂದಿರುವುದನ್ನು ನಿಷೇಧಿಸಲಾಗಿದೆ. ಪಾಲಕರ ಪಿಸ್ತೂಲುಗಳ ಮಕ್ಕಳ ಬಳಿ ಕಂಡು ಬಂದರೆ, ಪಾಲಕರು ಶಿಕ್ಷಾರ್ಹರು. ಈ ಕಾನೂನಿನ ಪ್ರಕಾರ ಈ ಕಾನೂನು ಅಮೇರಿಕದ 'ನಿಶಸ್ತ್ರೀಕರಣ' ಕ್ಕೆ ಸಹಾಯ ಮಾಡಬಹುದೇ? ಅಪರಾಧಗಳು ಸಂಖ್ಯೆ ಇಳಿಮುಖಗೊಳಿಸಲು ಸಹಾಯ ಮಾಡಬಹುದೇ? ಕಾದು ನೋಡಬೇಕಾಗಿದೆ. ಅಪರಾಧ ಸಾಮಾಜಿಕ ಮೂಲ ಕಾರಣಗಳನ್ನು ಹೋಗಲಾಡಿಸದೆ ಬರಿಯ 'ನಿಶಸ್ತ್ರೀಕರಣ' ಕಾನೂನು ಏನಾದರೂ ಸಾಧಿಸೀತೆ?

ಬಿಜೆಪಿಗೆ ಭಾರೀ ಮುಖಭಂಗ....

ಪುಟ 1ರಿಂದ

ಮೊತ್ತಮೊದಲ ಬಾರಿಗೆ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಪಡೆದಿದೆ. ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದಲ್ಲೂ ಸಿಪಿಐ(ಎಂ) ಮೊತ್ತ ಮೊದಲಬಾರಿಗೆ ಜಯಭೇರಿ ಬಾರಿಸಿತು.

ಸಿಪಿಐ(ಎಂ) ಬಯಸಿದಂತೆ ಎಡ, ಜಾತ್ಯಾತೀತ ಶಕ್ತಿಗಳಲ್ಲಿ ಐಕ್ಯತೆ ಮೂಡಿಬಂದಿದ್ದರೆ ಫಲಿತಾಂಶ ಇನ್ನೂ ಸ್ಫೂರ್ತಿದಾಯಕವಾಗಿರುತ್ತಿತ್ತು. ಐಕ್ಯತೆಯ ಪ್ರಯತ್ನ ಚುನಾವಣೆಗಳ ಮೊದಲು ಸಫಲವಾಗದಿದ್ದರೂ ನಂತರವಾದರೂ ಉತ್ತರ ಪ್ರದೇಶದಲ್ಲಿ ಬಿಜೆಪಿಯೇತರ ಸರಕಾರ ಬರಬೇಕು ಎಂಬ ಮತದಾರರ ಆದೇಶಕ್ಕೆ ಎಲ್ಲ ಜಾತ್ಯಾತೀತ ಶಕ್ತಿಗಳು ತಲೆಬಾಗಿದಂತಿದೆ - ಎಡ-ಜಾತ್ಯಾತೀತ ಶಕ್ತಿಗಳ ಕ್ರೋಢೀಕರಣವಾಗದಂತೆ ಸರ್ವಪ್ರಯತ್ನ ನಡೆಸಿದ ಕಾಂಗ್ರೆಸ್(ಐ) ಕೂಡಾ. ಈ ಸಾಲುಗಳನ್ನು ಬರೆಯುತ್ತಿರುವ ವೇಳೆಗೆ ಸ್ಥಳೀಯ ಜನತಾದಳದ ನಿಲುವಿನಿಂದಾಗಿ ದಿಲ್ಲಿಯಲ್ಲಿ ಭಾರೀ ಗೆಲುವು ಪಡೆದ ಬಿಜೆಪಿ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡಿದ್ದಾರೆ. ಉತ್ತರ ಪ್ರದೇಶದಲ್ಲಿ ಎಲ್ಲರಿಂದ ದೂರ ತಳ್ಳಲ್ಪಟ್ಟಿದ್ದರೂ ತನ್ನ ಸರಕಾರ ರಚಿಸಲು, ರಾಜಾಸ್ಥಾನದಲ್ಲಿ ಹಿಂದಿನ ಬಾರಿಯಂತೆ "ಸೂಟ್‌ಕೇಸ್ ರಾಜಕೀಯ"ದ ಮೂಲಕವಾದರೂ ಅಧಿಕಾರ ಕೈ ತಪ್ಪಿ ಹೋಗದಂತೆ ಬಿಜೆಪಿ ಸಕಲ ಪ್ರಯತ್ನ ನಡೆಸುತ್ತಿದೆ. ಮತದಾರರ ಭಯದಿಂದ ಎರಡು ಕಡೆ ಸ್ಪರ್ಧಿಸಿ ಒಂದೆಡೆ ಮತದಾರರಿಂದ ತಿರಸ್ಕರಿಸಲ್ಪಟ್ಟಿರುವ ವ್ಯಕ್ತಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಪ್ರಯತ್ನ ನಡೆಸಿದ್ದಾರೆ. ಹಿಮಾಚಲ ಪ್ರದೇಶ, ಮಧ್ಯಪ್ರದೇಶಗಳಲ್ಲಿ ಸ್ಪಷ್ಟ ಬಹುಮತ ಪಡೆದ ಕಾಂಗ್ರೆಸ್(ಐ) ಎಂದಿನಂತೆ ಆಂತರಿಕ ಕಿತ್ತಾಟದಲ್ಲಿ ನಿರತವಾಗಿದೆ. ಅದೇನೇ ಇರಲಿ ಈಗಂತೂ ಕೋಮುವಾದಿ ಶಕ್ತಿಗಳಿಗೆ ನಿರ್ಣಾಯಕವಾದ ಸೋಲು ಉಂಟಾಗಿದೆ.

ಸುದ್ದಿಗಳು

ಕಳಪೆ ಗುಣಮಟ್ಟದ ಬೀಡಿ ಎಲೆ: ಮಾಲಿಕರ ಶೋಷಣೆ

ಬೀಡಿ ಎಲೆ ಎವರೇಜ್ ಬಾರದಿರುವ ಬಗ್ಗೆ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ (ಸಿಐಟಿಯು)ನ ನಿಯೋಗವೊಂದು ಉಳ್ಳಾಲ ಗಣೇಶ ಬೀಡಿ ಸಂಸ್ಥೆಯ ಮೆನೇಜ್‌ಮೆಂಟನ್ನು ಭೇಟಿಯಾಗಿ ಸಮಸ್ಯೆ ಕುರಿತು ಚರ್ಚಿಸಿತು.

ಇತ್ತೀಚೆಗೆ ವಿತರಿಸಿದ ಗಣೇಶ ಬೀಡಿಯ ಎಲೆಯು ಅತ್ಯಂತ ಕಳಪೆ ಗುಣಮಟ್ಟದ್ದಾಗಿದ್ದು ಕಿಲೋವೊಂದರಲ್ಲಿ 700 ರಷ್ಟು ಎವರೇಜು ಕೂಡ ಬಾರದೆ ಮಜೂರರು ತುಂಬಾ ಸಂಕಷ್ಟಕ್ಕೊಳಗಾಗಿದ್ದಾರೆ. ಇಂತಹ ನಕಲಿ ಎಲೆಗೆ ಕಂಟ್ರಾಕ್ಟುದಾರರು ಕಿಲೋವೊಂದಕ್ಕೆ 2 ಸಾವಿರದಿಂದ 2,300 ರವರೆಗೆ ಎವರೇಟು ನಿರ್ಧರಿಸಿ ಭರ್ತಿಯಾಗದಿದ್ದಲ್ಲಿ ಮಜೂರರಿಗೆ ಕೆಲಸ ಕಡಿತಗೊಳಿಸಿ ಬಲವಂತದಿಂದ ಎಲೆಯನ್ನು ಕ್ರಯಕ್ಕೆ ಪಡೆಯುವಂತೆ ನಿರ್ಬಂಧಿಸುತ್ತಿದ್ದಾರೆ ಇಲ್ಲವೇ ದಂಡವಸೂಲಿ ಮಾಡುತ್ತಿದ್ದಾರೆ.

ಈ ವಿಚಾರವನ್ನು ನಿಯೋಗವು ನಿವೇದಿಸಿದಾಗ ಕಾರ್ಮಿಕರಿಗೆ ಆಗುವ ಅನ್ಯಾಯವನ್ನು ಒಪ್ಪಿಕೊಂಡ ಮೆನೇಜ್‌ಮೆಂಟ್ ತಮ್ಮ ದಾಖಲೆ ಪತ್ರಗಳನ್ನು ತೋರಿಸಿ ವಾರವೊಂದರಲ್ಲಿ ವಿತರಿಸಿ ಡಬ್ಬಲ್ "ಎ" ಮಾರ್ಕಿನ 3,234 ಕೆ.ಜಿ. ಎಲೆಯಲ್ಲಿ 1,500 ಕೆ.ಜಿಯನ್ನು ಮಾತ್ರ ಲೆಕ್ಕವಿಡಿದು ಉಳಿದಂತೆ 1,734 ಕೆ.ಜಿ. ಎಲೆಯನ್ನು ಹೆಚ್ಚುವರಿಯಾಗಿ ನೀಡಿರುವುದಾಗಿ ಹೇಳಿದರು. 2ಎ ಮತ್ತು 3ಎ ಮಾರ್ಕಿನ ಎಲ್ಲಾ ಎಲೆಗಳನ್ನು ಇದೇ ರೀತಿಯಲ್ಲಿ ವಿತರಿಸಿದ್ದು ಈ ವಿಚಾರವನ್ನು ಮಜೂರರಿಗೆ ತಿಳಿಸದೆ ಹೆಚ್ಚುವರಿಯಾಗಿ ಪಡೆದ ಎಲೆಯನ್ನು ಮಧ್ಯವರ್ತಿಗಳೇ ಗುಳುಂ ಮಾಡಿರುವ ವಿಚಾರ ಬೆಳಕಿಗೆ ಬಂದಿತು.

ನಿರ್ಣಯಿಸಿದ ಎವರೇಜ್‌ನ ಬೋರ್ಡನ್ನು ಎಲ್ಲಾ ಬ್ರಾಂಡುಗಳಲ್ಲಿ ಹಾಕಿಸುವುದಾಗಿ ನಿಯೋಗಕ್ಕೆ ಮೇನೆಜ್‌ಮೆಂಟ್ ಭರವಸೆ ನೀಡಿತು.

ಮಧ್ಯವರ್ತಿಗಳು ನಡೆಸುತ್ತಿರುವ ಈ ರೀತಿಯ ಸುಲಿಗೆಯನ್ನು ಪ್ರತಿಭಟಿಸಲು ಮಜೂರರು ಒಗ್ಗಟ್ಟಾಗಬೇಕೆಂದು ಸಂಘದ ಕಾರ್ಯದರ್ಶಿಯವರು ಕರೆ ನೀಡಿದ್ದಾರೆ.

ನಿಯೋಗದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಸುಕುಮಾರ್, ನಾರಾಯಣ ಪೂಜಾರಿ, ಮಹಿಳಾ ಕಾರ್ಯಕರ್ತೆಯಾದ ಶ್ರೀಮತಿ ರಾಜೀವಿ ಶೆಟ್ಟಿ ಪಿಲಾರ್, ಜೆಸಿಂತ ಲೋಬೋ, ಇಂದಿರಾಶೆಟ್ಟಿ ಲಕ್ಷ್ಮಿ, ಜಾನಕಿ, ಭವಾನಿ, ಸುಕನ್ಯಾ ಶೆಟ್ಟಿ, ದೇವಕಿದಾಸ್, ಯೋಗಿನಿ, ಲೀಲಾ ಹಾಗೂ ಬಾಬು ಪಿಲಾರ್‌ರವರು ಭಾಗವಹಿಸಿದ್ದರು.

ವಿದ್ಯಾರ್ಥಿ ಯುವಜನರಿಗೆ ರಾಜ್ಯಮಟ್ಟದ ಪಕ್ಷದ ಶಾಲೆ ಯಶಸ್ವಿ

ವಿದ್ಯಾರ್ಥಿ -ಯುವಜನ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಕ್ಷದ ಪ್ರಮುಖ ಕಾರ್ಯಕರ್ತರಿಗೆ ಅತ್ಯಂತ ಯಶಸ್ವಿಯಾದ ಶಾಲೆಯು ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ನವೆಂಬರ್ 5 ರಿಂದ 7ರವರೆಗೆ ಜರುಗಿತು.

ಪಿ.ಬಿ. ಸದಸ್ಯರು, ಸೈದ್ಧಾಂತಿಕ ವಿಭಾಗದ ಮುಖ್ಯ ಜವಾಬ್ದಾರಿ ನಿರ್ವಹಿಸುತ್ತಿರುವ ಕಾಂ. ಪಿ. ರಾಮಚಂದ್ರನ್‌ರವರು ಈ ಶಿಬಿರವನ್ನು 'ಭವಿಷ್ಯತ್ತಿನ ನಾಯಕರ ಶಿಬಿರ' ವೆಂದು ಕರೆದರು. ಇದರಲ್ಲಿ 68 ಯುವಜನ ಹಾಗೂ 51 ವಿದ್ಯಾರ್ಥಿ ಮುಖಂಡರು ಒಟ್ಟು 119 ಸಂಗಾತಿಗಳು ಹಾಜರಾಗಿದ್ದರು.

ದಿನಾಂಕ 5 ರಂದು 'ಭಾರತದ ಪರಿಸ್ಥಿತಿ- ವಿದ್ಯಾರ್ಥಿ ಯುವಜನರ ಪಾತ್ರ' ಎಂಬ ವಿಷಯದ ಬಗ್ಗೆ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮತ್ತು 'ಕರ್ನಾಟಕದ ಸಮಗ್ರ ಅಭಿವೃದ್ಧಿ ನಮ್ಮ ಕರ್ತವ್ಯ' ಕುರಿತು ರಾಜ್ಯ ಸಮಿತಿ ಸದಸ್ಯರಾದ ಕಾಂ. ಜಿ.ಎನ್. ನಾಗರಾಜ್, 6 ರಂದು 'ಇಂದಿನ ಜಗತ್ತು' ಮತ್ತು 7 ರಂದು ಸಂಘಟನೆ ಕುರಿತು ಪಿ.ಬಿ. ಸದಸ್ಯರಾದ ಕಾಂ. ಪಿ. ರಾಮಚಂದ್ರನ್‌ರವರು ಉಪನ್ಯಾಸ ನೀಡಿದರು. ಪಕ್ಷದ ರಾಜ್ಯಸಮಿತಿಯು ರಾಜ್ಯದಲ್ಲಿ ಪಕ್ಷವನ್ನು ಕಟ್ಟುವ ದಿಶೆಯಲ್ಲಿ ತೆಗೆದುಕೊಂಡಿರುವ ನಿರ್ಣಯ ಮತ್ತು ಯುವಜನ-ವಿದ್ಯಾರ್ಥಿ 'ಸಂಘಟನೆ' ಕಟ್ಟುವುದು ಮತ್ತು ಪಕ್ಷಕ್ಕೆ ಸದಸ್ಯರನ್ನು ಸೇರಿಸುವುದರ ಮಹತ್ವದ ಬಗ್ಗೆ ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮಾತನಾಡಿದರು. ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಸೂರಿಯವರು ಸಹ ಪಕ್ಷ ಬೆಳೆಸುವ ದಿಶೆಯಲ್ಲಿ ಯುವ-ವಿದ್ಯಾರ್ಥಿ ಜನರ ಕರ್ತವ್ಯದ ಬಗ್ಗೆ ವಿವರಿಸಿದರು. ಅಲ್ಲದೇ ಇಡೀ ಕಾಲಕ್ಕೆ ಪಕ್ಷದ ಸಿಂಧನೂರು ತಾಲೂಕು ಸಮಿತಿಯ ಆಕರ್ಷಕ ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳನ್ನು ಸಂಘಟಿಸಿದ್ದು, ಕಾಂ. ಸೂರಿ ಕಾಂ. ಪಿ.ಆರ್. ರಾವ್. ರಾಯಚೂರು ಜಿಲ್ಲಾ ಕಾರ್ಯದರ್ಶಿ ಕಾಂ. ಬಿ. ಲಿಂಗಪ್ಪ, ಶರಭಣ್ಣ ನಾಗಲಾಪುರ, ಜನತಾದಳದ ಧುರೀಣರಾದ ದೊಡ್ಡನಗೌಡ, ಪುರಸಭಾ ಅಧ್ಯಕ್ಷರಾದ ನಾಗಪ್ಪ ಮುಂತಾದವರು ಮಾತನಾಡಿ ಮೂರು ದಿನಗಳ ಶಾಲೆಗೆ ಕಾಂ. ಎಸ್.ವೈ. ಗುರುಶಾಂತ್, ಪ್ರಾಚಾರ್ಯರಾಗಿ, ಕಾಂ. ಜೆ.ಸಿ. ಬಯ್ಯಾರೆಡ್ಡಿ ನಿರ್ವಾಹಕಾರರಾಗಿ ಕಾರ್ಯನಿರ್ವಹಿಸಿವರು. ಈ ಶಾಲೆಯನ್ನು ಯಶಸ್ವಿಗೊಳಿಸಲು ಶ್ರಮಿಸಿದ ಪಕ್ಷದ ರಾಯಚೂರು ಜಿಲ್ಲಾ ಸಮಿತಿ ಹಾಗೂ ಸಿಂಧನೂರು ತಾಲೂಕು ಸಮಿತಿಯ ಸಂಗಾತಿಗಳಿಗೆ ರಾಜ್ಯ ಸಮಿತಿ ಅಭಿನಂದಿಸಿದೆ.

ಕೋಮು ಸೌಹಾರ್ದ ಯುವ ಸಮ್ಮಿಲನ ಡಿಸೆಂಬರ್ 12ಕ್ಕೆ ಮುಂದೂಡಿಕೆ

'ಕೋಮು ಸೌಹಾರ್ದತೆಗಾಗಿ ರಾಜ್ಯ ಯುವ ಸಮ್ಮಿಲನ' ಕಾರ್ಯಕ್ರಮವನ್ನು ಡಿಸೆಂಬರ್ 12ಕ್ಕೆ ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಲಾಗಿದೆ (ಪೋಲೀಸರು ಬೆಂಗಳೂರಿನಲ್ಲಿ ನಿಷೇದಾಜ್ಞೆ ವಿಧಿಸಿರುವ ಹಿನ್ನೆಲೆಯಲ್ಲಿ). ಅದ್ದರಿಂದ ಡಿವೈಎಫ್‌ಐನ ಎಲ್ಲಾ ಘಟಕಗಳು 12ರಂದು ಯುವ ಜನತೆಯನ್ನು ಅತ್ಯಧಿಕ ಸಂಖ್ಯೆಯಲ್ಲಿ ಪಾಲ್ಗೊಳಿಸಲು ಮುತುವರ್ಜಿ ವಹಿಸುವುದು. ರಾಜ್ಯ ಸಮಿತಿ ಹಾಗೂ ಕಾರ್ಯಕರ್ತರ ಸಭೆಯು 13ರಂದು ಜರುಗಲಿದೆ. ಮುಂದೂಡುವಿಕೆಯಿಂದಾಗಿ ಉದ್ಭವಿಸಬಹುದಾದ ಸ್ಥಿತಿಯು ವಿಷಾದನೀಯವಾಗಿದ್ದು ಮತ್ತು ಹೆಚ್ಚಿನ ಗಮನ ಎಲ್ಲರೂ ವಹಿಸಿ ಪಾಲ್ಗೊಳ್ಳಲು ರಾಜ್ಯ ಸಮಿತಿ ವಿನಂತಿಸಿದೆ.

KRNM/BGS-405 MAG(2) PRB DECR 319-78/79

ಪತ್ರಿಕೆಗಳು ಕಂಡಂತೆ

ಪ್ರಜಾವಾಣಿ

ಪ್ರಚಂಡ ಸೋಲು

ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಅನುಭವಿಸಿದ ಪ್ರಚಂಡ ಸೋಲು, ಹಾಗೂ ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಆದ ಹಿನ್ನಡೆ ಅಂಕಿ ಅಂಶಗಳ ವಿಶ್ಲೇಷಣೆಯಿಂದ ಸಮರ್ಥಿಸಿಕೊಳ್ಳಲು ಸಾಧ್ಯವಾಗದಂತಹ ಪರಾಭವವೇ ಸರಿ. ಬಿಜೆಪಿಯ ಸೋಲೊಂದೇ ಕಾಂಗ್ರೆಸ್ ಮತ್ತು ಜನತಾದಳಗಳ ಸುತ್ತೋಷಕ್ಕೆ ಕಾರಣವೇ ಹೊರತು ಈ ಎರಡೂ ಪಕ್ಷಗಳೂ ಜನತೆಯ ವಿಶ್ವಾಸ ಕಳೆದುಕೊಂಡಿವೆ ಎನ್ನುವುದು ಸ್ಪಷ್ಟ. ಈ ಸನ್ನಿವೇಶದಲ್ಲಿ ಮುಲಾಯಂ-ಕಾನ್ಶಿ ಕೂಟಕ್ಕೆ ದೆಂಬಲ ಸೂಚಿಸದೆ ಬೇರೆ ಮಾರ್ಗವೇ ಇಲ್ಲ. ಆದರೆ ಜಾತ್ಯಾತೀತ ಶಕ್ತಿಯನ್ನು ಬಲಪಡಿಸುವ ದಿಕ್ಕಿನಲ್ಲಿ ಅವು ಸರಿಯಾದ ಹೆಜ್ಜೆ ಇಡುವ ಮೂಲಕ ವಿವೇಕವನ್ನು ಪ್ರದರ್ಶಿಸಿರುವುದನ್ನು ಕಡೆಗಣಿಸುವಂತಿಲ್ಲ.

-ಡಿಸೆಂಬರ್ 1.

ಸಂಯುಕ್ತ ಕರ್ನಾಟಕ

ಬುದ್ಧಿಕಲಿಸಿದರು

ಹಿಂದೂತ್ವದ ಅಲೆಯ ಮೇಲೆ ವಿಜೃಂಭಿಸಬೇಕೆಂದಿದ್ದ ಭಾರತೀಯ ಜನತಾಪಕ್ಷಕ್ಕೆ ಉತ್ತರ ಪ್ರದೇಶ, ಹಿಮಾಚಲ ಪ್ರದೇಶಗಳ ಜನ ಬುದ್ಧಿಕಲಿಸುವುದಲ್ಲದೆ, ಮಧ್ಯಪ್ರದೇಶದಲ್ಲಿ ಹಿಂದುತ್ವವಾದಿಗಳಿಗೆ ಮುಖಭಂಗವಾಗುವ ಲಕ್ಷಣಗಳು ಕಾಣ ಬರುತ್ತಿವೆ........... ಬಾಬ್ರಿ ಮಸೀದಿ ಉರುಳಿಸಿದ್ದಕ್ಕಾಗಲಿ, ಇಲ್ಲವೆ ರಾಜಕೀಯದಲ್ಲಿ ಧರ್ಮ ಬೆರೆಸುವುದಕ್ಕಾಗಲಿ ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶದ ಮತದಾರರು ಮನ್ನಣೆ ನೀಡಿಲ್ಲ. ಭಾರತೀಯ ಜನತಾಪಕ್ಷದ ಅಧಿಕಾರ ರಾಜಕೀಯವನ್ನು ಅಲ್ಲಿನ ಮತದಾರರು ತಿರಸ್ಕರಿಸಿದ್ದಾರೆಂದೇ ಹೇಳಬಹುದು. ಇನ್ನು ಹಿಮಾಚಲದಲ್ಲಿ ಭಾರತೀಯ ಜನತಾಪಕ್ಷ ತನ್ನ ಹಿಂದಿನ ದುರಾಡಳಿತಕ್ಕೆ ಸಾಕಷ್ಟು ಬೆಲೆ ಕೊಡಬೇಕಾಗಿ ಬಂದಿತು. ರಾಜಸ್ಥಾನ ಮತ್ತು ದಿಲ್ಲಿಯಲ್ಲಿ ಮಾತ್ರ ಹಿಂದುತ್ವ ತನ್ನ ಪ್ರಾಬಲ್ಯವನ್ನು ತೋರಿಸಿದೆ. ಕಾಂಗ್ರೆಸ್ ಹಾಗೂ ಜನತಾದಳದಲ್ಲಿನ ಒಡಕು-ಆಂತರಿಕ ಕಿತ್ತಾಟದ ಲಾಭವನ್ನು ಭಾರತೀಯ ಜನತಾಪಕ್ಷ ಈ ಎರಡು ರಾಜ್ಯಗಳಲ್ಲಿ ಪಡೆಯಿತೆನ್ನಬಹುದು.

-ಡಿಸೆಂಬರ್ 2,



ಕೃಪೆ: ಎಕನಾಮಿಕ್ಸ್ ಟೈಮ್ಸ್



ಕನ್ನಡಪ್ರಭ

ಪರ್ಯಾಯ ಆಯ್ಕೆ ಇರಲಿಲ್ಲ

ಭಾರತೀಯ ಜನತಾ ಪಕ್ಷದ ನಾಯಕರುಗಳು ಈಗ ಮತದಾನದ ಅಂಕಿ ಅಂಶಗಳನ್ನೇ ಹಿಡಿದು ಯಾವುದೇ ರೀತಿ ತರ್ಕಿಸಿದರೂ ಉತ್ತರ ಪ್ರದೇಶದ ಜನ ಸಾಮಾನ್ಯ ವರ್ಗಗಳು ಆ ಪಕ್ಷದ "ಕಟ್ಟರ ಪಂಥ" (ಸಂಪ್ರದಾಯವಾದೀ ಪದಕ್ಕೆ ಹಿಂದೀ ಭಾಷಿಕರು ಬಳಸುವ ಪದ) ರಾಜಕೀಯವನ್ನು ತಿರಸ್ಕರಿಸಿದ್ದಾರೆ. ರಾಜಸ್ಥಾನದಲ್ಲಿನ ಫಲಿತಾಂಶವೂ ಹೆಚ್ಚು ಕಡಿಮೆ ಉತ್ತರ ಪ್ರದೇಶದ ಮಾದರಿಯಲ್ಲೇ ಇದೆ. ಆದರೆ ಭಾ.ಜ.ಪ. ಕಾಂಗ್ರೆಸ್ ಬಿಟ್ಟರೆ ಜನತೆಗೆ ಪರ್ಯಾಯ ಆಯ್ಕೆ ಇರಲಿಲ್ಲ.

-ನವೆಂಬರ್ 30

ಒಪ್ಪಲೇಬೇಕು

.... ಉತ್ತರ ಪ್ರದೇಶದಲ್ಲಿ ಸರ್ಕಾರ ರಚಿಸುವ ಬಿಜೆಪಿ ಕನಸು ಭಗ್ನವಾಗಿರುವ ಸನ್ನಿವೇಶದಲ್ಲಿ ಆ ರಾಜ್ಯದಲ್ಲಿ ಆ ಪಕ್ಷ ಮುಂದೇನು ಮಾಡೀತು ಎನ್ನುವುದನ್ನು ಹೇಳುವುದು ಕಷ್ಟ. ಈಗಾಗಲೇ ಬಿಜೆಪಿ ಮುಖಂಡರು ಮೌನವಾಗಿದ್ದರೂ, ವಿಶ್ವ ಹಿಂದೂ ಪರಿಷತ್ತಿನ ಅಶೋಕ್ ಸಿಂಘಾಲ್, ಭಜರಂಗದಳದ ವಿನಯ್ ಕಟಿಯಾರ್ ಡಿಸೆಂಬರ್ ಆರರಂದು ಅಯೋಧ್ಯೆಯಲ್ಲಿ ಪ್ರದರ್ಶನ ಮಾಡುವ ಪ್ರಕಟಣೆ ನೀಡಿದ್ದಾರೆ. ಚುನಾವಣೆಯಲ್ಲಿ ಜನ ನೀಡಿದ ತೀರ್ಪನ್ನು ಬಿಜೆಪಿ ಒಪ್ಪಿದಂತೆ ಸಂಘ ಪರಿವಾರವೂ ಒಪ್ಪಲೇ ಬೇಕು.

ಡಿಸೆಂಬರ್ 2,

ದಿ ಹಿಂದೂ

ಮನ ಅರಳಿಸುವ ಸಂದೇಶ

ಕಳೆದ ವರ್ಷ ರಾಷ್ಟ್ರೀಯ ಪ್ರಜ್ಞೆಯನ್ನು ಬಾಧಿಸಿದ ಘಟನೆಗಳು, ಮುಖ್ಯವಾಗಿ ಡಿಸೆಂಬರ್ 6, 1992 ರಂದು ಬಾಬ್ರಿ ಮಸೀದಿ ಧ್ವಂಸ ಮತ್ತು ನಂತರ ನಾಲ್ಕು ಬಿಜೆಪಿ ಸರಕಾರಗಳ ವಜಾ ಈ ಚುನಾವಣಾ ಸ್ಪರ್ಧೆಗಳ ಮೂಲಕಾರಣ ಎಂಬುದರಲ್ಲೇನೂ ಸಂಶಯವಿಲ್ಲ. ಒಂದು ಮನ ಅರಳಿಸುವ ಸಂದೇಶ ಮೂಡಿ ಬಂದಿದೆ- ಕೋಮುವಾದೀ ಭಾವನೆಗಳನ್ನು ಉದ್ರೇಕಿಸುವ ಸಂಕುಚಿತ ದೃಷ್ಟಿಯ ಪ್ರಯತ್ನಗಳಾಗಲೀ, ಕೋಮುವಾದದಿಂದರಾಜಕೀಯ ಕ್ರೋಢೀಕರಣ ಮಾಡುವ ಪ್ರಯತ್ನಗಳಾಗಲೀ ಚುನಾವಣಾ ಸುಗ್ಗಿಯನ್ನು ತರಲಿಲ್ಲ.

-ನವೆಂಬರ್ 30,

ಡೆಕ್ಕನ್ ಹೆರಾಲ್ಡ್

ಭಾರೀ ಬೆಲೆ ತೆತ್ತಿದೆ

..............ರಾಜಸ್ತಾನದಲ್ಲಿ ಒಂದು ಸರಕಾರವನ್ನು ರಚಿಸುವಲ್ಲಿ ಯಶಸ್ವಿಯಾದರೂ, ದಿಲ್ಲಿಯಲ್ಲಿ ಭಾರೀ ಜಯಗಳಿಸಿದರೂ ಅವುಯಾವುವೂ ಹಿಮಾಚಲ ಪ್ರದೇಶದಲ್ಲಿನ ಸಂಪೂರ್ಣ ಪರಾಭವವನ್ನು ಉತ್ತರಪ್ರದೇಶದಲ್ಲಿನ ಶೋಚನೀಯ ಪ್ರದರ್ಶನವನ್ನು ಸರಿದೂಗಲಾರವು..........

...........ರಾಜಸ್ತಾನ್‌ದಲ್ಲಿ ಒಂದು ಸರಕಾರವನ್ನು ರಚಿಸುವಲ್ಲಿ ಯಶಸ್ವಿಯಾದರೂ, ದಿಲ್ಲಿಯಲ್ಲಿ ಭಾರೀ ಜಯಗಳಿಸಿದರೂ ಅವು ಯಾವುವೂ ಹಿಮಾಚಲ ಪ್ರದೇಶದಲ್ಲಿ ಸಂಪೂರ್ಣ ಪರಾಭವವನ್ನು ಉತ್ತರ ಪ್ರದೇಶದಲ್ಲಿ ಶೋಚನೀಯ ಪ್ರದರ್ಶನವನ್ನು ಸರಿದೂಗಲಾರವು............... ಆ ಪಕ್ಷ ಕಳೆದೆರಡು ವರ್ಷಗಳಲ್ಲಿ ದೇಶಕ್ಕೆ ಭಾರೀ ಬೆಲೆ ತೆರುವಂತೆ ಮಾಡಿದ ತನ್ನ ರಾಜಕೀಯ ತಂತ್ರ ಈಗ ತನಗೇ ಚುನಾವಣಾ ಲೆಕ್ಕಾಚಾರದಲ್ಲಿ ಭಾರೀ ವೆಚ್ಚದಾಯಕವಾಗಿ ಬಿಟ್ಟಿದೆ ಎಂಬುದನ್ನು ಅರಿಯಬೇಕಾಗಿದೆ.

-ಡಿಸೆಂಬರ್ 1,

ಟೈಂಸ್ ಆಫ್ ಇಂಡಿಯಾ


ಎಂತಹ ಮುಖಭಂಗ!

............ಉತ್ತರ ಪ್ರದೇಶದ ಫಲಿತಾಂಶ ತನ್ನ ಚುನಾವಣಾ ತಂತ್ರದಲ್ಲಿ ಧರ್ಮವನ್ನು ಅಡಿಗಗಲ್ಲಾಗಿ ಮಾಡುವ ಬಿಜೆಪಿಯ ಭವ್ಯ ನಿರೀಕ್ಷೆಗೆ ನೀಡಿದ ಭಾರೀ ಆಘಾತ. ಉತ್ತರ ಪ್ರದೇಶದ ತೀರ್ಪು ಬಿಜೆಪಿಗೆ ಎಂತಹ ಮುಖಭಂಗವೆಂದರೆ ದಿಲ್ಲಿಯ ಭಾರೀ ವಿಜಯದಿಂದ ಬಂದ ತೃಪ್ತಿಯನ್ನೆಲ್ಲ ಅದು ಮುಳುಗಿಸಿ ಬಿಟ್ಟಿದೆ. ಅದೇ ರೀತಿ ಹಿಮಾಚಲ ಪ್ರದೇಶದಲ್ಲಿ ಮತ್ತೆ ಅಧಿಕಾರ ಪಡೆದ ಕಾಂಗ್ರೆಸ್(ಐ)ನ ತೃಪ್ತಿ ದಿಲ್ಲಿ ಹಾಗೂ ಉತ್ತರ ಪ್ರದೇಶಗಳಲ್ಲಿನ ಅದು ಅನುಭವಿಸಿದ ಪರಾಭವಗಳಿಗೆ ಸಮವಾಗಲಾಗದು.


-ನವೆಂಬರ್ 29

(ಮಧ್ಯಪ್ರದೇಶದ) ಫಲಿತಾಂಶ ಬಿಜೆಪಿಯನ್ನು ಎದುರಿಸಲು ಹಿಂಜರಿಯುತ್ತಿದ್ದ ಕಾಂಗ್ರೆಸ್ಸಿನ ಒಳಗಿನ ಹಾಗೂ ಹೊರಗಿನ ಮಂದಿಗೆಲ್ಲಾ ಧೈರ್ಯ ತುಂಬುವುದು ಖಂಡಿತ..... ಕಾಂಗ್ರೆಸ್ ಪಕ್ಷ ಬಿಜೆಪಿಯೊಡನೆ ನೇರ ಸೈದ್ಧಾಂತಿಕ ಹಣಾಹಣಿಗೆ ಇಳಿದದ್ದು ಇಲ್ಲಿ....... ಬಿಜೆಪಿಯ ಸೋಲು ಭಾಗಶಃ ಅದು ತಾನೇ ತಂದುಕೊಂಡದ್ದು. ಮಧ್ಯ ಪ್ರದೇಶದ ಆ ಪಕ್ಷದ ಮುಖಂಡರು ಇದುವರೆಗೆ ಕಾಂಗ್ರೆಸ್ ಹಾಗೂ ಜನತಾದಳದವರದ್ದೇ ವಿಶೇಷತೆಯೆನಿಸಿದ್ದ ವೈಯುಕ್ತಿಕ ಹಾಗೂ ಸಂಘಟನಾತ್ಮಕ ದೌರ್ಬಲ್ಯಗಳಿಗೆ ಬಲಿಬಿದ್ದರು.

-ಡಿಸೆಂಬರ್ 2,



ಕೃಪೆ: ಟೈಮ್ಸ್ ಆಫ್ ಇಂಡಿಯಾ



ಕೃಪೆ: ಡೆಕ್ಕನ್ ಹೆರಾಲ್ಡ್

ಕೊನೆಯದಾಗಿ, ಬಿಜೆಪಿ ಎಲ್ಲಾ ಐದು ವಿಧಾನಸಭೆಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡು ಭಾರೀ ವಿಜಯ ಸಾಧಿಸುತ್ತದೆ ಎಂದು ಬಹಳ ದಿನಗಳಿಂದ ತನ್ನ ಓದುಗರಿಗೆ ಭರವಸೆ ನೀಡುತ್ತಿದ್ದ ಇಂಡಿಯನ್ ಎಕ್ಸ್‌ಪ್ರೆಸ್ ತನ್ನ ಪ್ರಿಯ ಪಕ್ಷಕ್ಕೆ ಏನು ಉಪದೇಶ ನೀಡುತ್ತಿದೆ ನೋಡಿ -

ಬಿಜೆಪಿಯ ಮುಂದಿರುವ ಸವಾಲು

.........ಚುನಾವಣಾ ಫಲಿತಾಂಶಗಳ ಬೆಳಕಿನಲ್ಲಿ ಭಾರತೀಯ ಜನತಾ ಪಾರ್ಟಿ ಮುಖಂಡರು ತಮ್ಮ ರಣನೀತಿಯ ಬಗ್ಗೆ ಗಂಭೀರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ....... ಅಯೋಧ್ಯೆ ಇರುವ, ರಾಮದೇವಸ್ಥಾನದ ಪ್ರಶ್ನೆ ಬಹುದೊಡ್ಡ ಜನ ವಿಭಾಗಗಳಲ್ಲಿ ವಿದ್ಯುತ್ ಸಂಚಾರ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದ್ದ ಉತ್ತರ ಪ್ರದೇಶದಲ್ಲಿ ಅವರಿಗೆ ಮನಸ್ಸಿಗೆ ಸಮಾಧಾನ ತರುವಂತಹ ಅಂಶವೇನೂ ಇಲ್ಲ. ಅಲ್ಲಿ ಸರಕಾರ ರಚಿಸುವಲ್ಲಿನ ವಿಫಲತೆ ಅದರ ಪ್ರತಿಷ್ಠೆಗೆ ಒಂದು ದೊಡ್ಡ ಆಘಾತವಾಗಿ ಮನಸ್ಸನ್ನು ಕೊರೆಯುತ್ತಿರಬೇಕು........ ತಾನು ಬೆದರಿಸಿ ದೂರ ಓಡಿಸಿದವರಲ್ಲಿ ಮತ್ತೆ ವಿಶ್ವಾಸ ಮೂಡಿಸಲು, ರಾಮನ ಪ್ರಶ್ನೆಯನ್ನು ಹಿಂದಕ್ಕೆ ತಳ್ಳಿ, ದೇಶದ ಪ್ರಗತಿಗೆ ನಿರ್ಣಾಯಕವಾದ ಸಾಮಾಜಿಕ, ಆರ್ಥಿಕ ಪ್ರಶ್ನೆಗಳನ್ನು ಅದು ಎತ್ತಿಕೊಳ್ಳಬೇಕು. ಅದು ಇದನ್ನು ಮಾಡಬಲ್ಲುದೇ? ಪಕ್ಷದ ಮುಖಂಡತ್ವದ ಮುಂದಿರುವ ಸವಾಲು ಇದು.

-ನವೆಂಬರ್ 30,

ಮಧ್ಯಪ್ರದೇಶದ ಹಿಂದಿನ ಮಧ್ಯಭಾರತ ಪ್ರದೇಶದಲ್ಲಿ ಬಿಜೆಪಿಯ ಸೋಲು ಅದರ ಕಾರ್ಯಕರ್ತರಿಗೂ, ನಾಯಕರಿಗೂ ಆಘಾತವುಂಟು ಮಾಡಿದೆ. ಏಕೆಂದರೆ ಕಳೆದ 30 ವರ್ಷ ಈ ಪ್ರದೇಶ ಅವರ ಭದ್ರಕೋಟೆಯಾಗಿತ್ತು.

-ಡಿಸೆಂಬರ್ 2

	ಉತ್ತರ ಪ್ರದೇಶ		ಮಧ್ಯಪ್ರದೇಶ		ರಾಜಸ್ಥಾನ		ಹಿಮಾಚಲ ಪ್ರದೇಶ		ದಿಲ್ಲಿ
ಒಟ್ಟು ಸ್ಥಾನಗಳು	425	**425**	320	**320**	200	**200**	68	**68**	70
ಚುನಾವಣೆ ನಡೆದ ಸ್ಥಾನಗಳು	422	**425**	316	**320**	199	**200**	68	**68**	70
ಬಿಜೆಪಿ	177	**221**	116	**218****	95	**85****	8	**46**	49
ಕಾಂಗ್ರೆಸ್(ಐ)	28	**46**	171	**56**	76	**50**	52	**9**	14
ಸಮಾಜವಾದಿ ಪಕ್ಷ	109	**34***	--	--	--	—	--	—	--
ಬಿ.ಎಸ್.ಪಿ	67	**12***	11	**2**	--	—	--	—	--
ಜನತಾದಳ	28	**92**	4	**29**	6	**55**	--	**10**	4
ಸಿಪಿಐ	3	—	2	-	-	-	-	1	-
ಸಿಪಿಐ(ಎಂ)	1	--	1	--	1	**1**	1	—	--
ಇತರ/ಪಕ್ಷೇತರ	9	**20**	11	**15**	21	**9**	7	2	3

ಪ್ರತೀ ರಾಜ್ಯದ ಎರಡನೇ ಕಾಲಮು ಹಿಂದಿನ ವಿಧಾನಸಭಾ ಚುನಾವಣೆಗಳಲ್ಲಿ (ಉ. ಪ್ರ.-1991 ರಲ್ಲಿ ಉಳಿದೆಡೆ 1990) ಪಡೆದ ಸ್ಥಾನಗಳು.

* 1991 ರಲ್ಲಿ ಸಮಾಜವಾದಿ ಪಕ್ಷ, ಬಿ.ಎಸ್.ಪಿ. ಪಕ್ಷ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. -ಅನುಕ್ರಮವಾಗಿ 400 ಹಾಗೂ 381 ಸ್ಥಾನಗಳಿಗೆ. ಈ ಬಾರಿ ಮೈತ್ರಿಕೂಟ ರಚಿಸಿಕೊಂಡಿವೆ.

** ಬಿಜೆಪಿ 1990 ರಲ್ಲಿ ಮಧ್ಯಪ್ರದೇಶದಲ್ಲಿ 320 ರಲ್ಲಿ 260 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಿತ್ತು. ರಾಜಸ್ಥಾನದಲ್ಲಿ 132 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಿತ್ತು.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ: 12, 18ನೇ ಅಡ್ಡರಸ್ತೆ, [illegible]